# ಮಹಿಮೆ

## ದೇವರ ಪ್ರಸನ್ನತೆ

ಡಾ. ಎ.ಎಲ್. ಗಿಲ್ ಮತ್ತು ಜಾಯ್ಸ್ ಗಿಲ್

# ಮಹಿಮೆ

## ದೇವರ ಪ್ರಸನ್ನತೆ

ಡಾ. ಎ.ಎಲ್. ಗಿಲ್ ಮತ್ತು ಜಾಯ್ಸ್ ಗಿಲ್

ಜಾಯ್ಸ್ ಮತ್ತು ಎ.ಎಲ್. ಗಿಲ್ ರವರು ಈ ಕೈಪಿಡಿಯನ್ನು

ಡೌನ್‌ಲೋಡ್ ಮಾಡಲು ಮತ್ತು ನಕಲು ಮಾಡಲು

ನಿಮಗೆ ಅನುಮತಿ ಕೊಟ್ಟಿದ್ದಾರೆ

**www.gillministries.com**

## ಲೇಖಕರ ಬಗ್ಗೆ

ಎ.ಎಲ್. ಮತ್ತು ಜಾಯ್ಸ್ ಗಿಲ್ ರವರು ಅಂತರರಾಷ್ಟ್ರೀಯ ಭಾಷಣಕಾರರು, ಲೇಖಕರು ಮತ್ತು ಸತ್ಯವೇದ ಬೋಧಕರು. ಎ.ಎಲ್ ರವರ ಅಪೊಸ್ತೊಲಿಕ ಸೇವೆಯ ಪ್ರಯಾಣಗಳು ಅವರನ್ನು ವಿಶ್ವದ ಐವತ್ತಕ್ಕೂ ಹೆಚ್ಚು ರಾಷ್ಟ್ರಗಳಿಗೆ ಕರೆದೊಯ್ದಿವೆ, ಒಂದು ಲಕ್ಷಕ್ಕಿಂತ ಹೆಚ್ಚಿನ ಜನಸಮೂಹಕ್ಕೆ ನೇರವಾಗಿ ಮತ್ತು ಅನೇಕ ಲಕ್ಷ ಜನರಿಗೆ ರೇಡಿಯೊ ಮತ್ತು ದೂರದರ್ಶನದ ಮೂಲಕ ಬೋಧಿಸುತ್ತಿದ್ದಾರೆ.

ಎ.ಎಲ್. ಮತ್ತು ಜಾಯ್ಸ್ ಗಿಲ್ ರವರ ಅತಿ ಹೆಚ್ಚು ಮಾರಾಟವಾಗುತ್ತಿರುವ ಪುಸ್ತಕಗಳು ಮತ್ತು ಕೈಪಿಡಿಗಳು ಇಪ್ಪತ್ತು ಲಕ್ಷಕ್ಕೂ ಹೆಚ್ಚು ಪ್ರತಿಗಳು ಯುನೈಟೆಡ್ ಸ್ಟೇಟ್ಸ್‌ನಲ್ಲಿ ಮಾರಾಟವಾಗಿವೆ. ಅವರ ಬರಹಗಳನ್ನು ಅನೇಕ ಭಾಷೆಗಳಿಗೆ ಅನುವಾದಿಸಲಾಗಿದೆ, ವಿಶ್ವದಾದ್ಯಂತ ಸತ್ಯವೇದ ಅಧ್ಯಯನದ ಶಾಲೆಗಳಲ್ಲಿ ಮತ್ತು ಸೆಮಿನಾರ್‌ಗಳಲ್ಲಿ ಅವುಗಳನ್ನು ಬಳಸಲಾಗುತ್ತಿದೆ.

ಜೀವನವನ್ನು ಬದಲಾಯಿಸುವ ಶಕ್ತಿಯುತವಾದ ದೇವರ ವಾಕ್ಯದ ಸತ್ಯಗಳು ಅವರ ಕ್ರಿಯಾಶಕ್ತವಾದ ಉಪದೇಶ, ಬೋಧನೆ, ದೂರದರ್ಶನದ ಪ್ರಸರಣ, ಬರವಣಿಗೆ, ವಿಡಿಯೋ ಮತ್ತು ಆಡಿಯೊ ಸುರುಳಿಗಳ ಸೇವೆಯ ಮೂಲಕ ಇತರರ ಜೀವನದಲ್ಲಿ ಒಳವ್ಯಾಪಿಸಿವೆ.

ದೇವರ ಪ್ರಸನ್ನತೆಯ ಅದ್ಭುತ ಮಹಿಮೆಯನ್ನು ಅವರ ಉಜ್ಜೀವನದಲ್ಲಿ, ಸ್ತುತಿ ಆರಾಧನೆಯಲ್ಲಿ ಮತ್ತು ಸೆಮಿನಾರ್‌ಗಳಲ್ಲಿ ಅನುಭವಿಸಿದ್ದಾರೆ, ವಿಶ್ವಾಸಿಗಳಾಗಿ ದೇವರ ನಿಜವಾದ ಮತ್ತು ನಿಕಟವಾದ ಆರಾಧಕರಾಗುವುದು ಹೇಗೆ ಎಂದು ಕಂಡುಕೊಂಡಿದ್ದಾರೆ. ವಿಶ್ವಾಸಿಗಳ ಅಧಿಕಾರ ಎಂಬ ಅವರ ಬೋಧನೆಗಳ ಮೂಲಕ ಜಯ ಮತ್ತು ಧೈರ್ಯದ ಕುರಿತಾದ ಹೊಸ ಮತ್ತು ಉತ್ತೇಜಕ ಆಯಾಮವನ್ನು ಅನೇಕರು ಕಂಡುಕೊಂಡಿದ್ದಾರೆ.

ದೇವರ ಗುಣಪಡಿಸುವ ಶಕ್ತಿಯು ಅವರ ಕೈಯಿಂದ ಹರಿಯುವಂತಹ ದೇವರು ಕೊಟ್ಟ ಅಸಾಧಾರಣವಾದ ಸೇವೆಗೆ ಕಾಲಿಡಲು ಗಿಲ್ಸ್ ರವರು ಅನೇಕ ವಿಶ್ವಾಸಿಗಳಿಗೆ ತರಬೇತಿ ನೀಡಿದ್ದಾರೆ. ಅನೇಕರು ತಮ್ಮ ದೈನಂದಿನ ಜೀವನದಲ್ಲಿ ಮತ್ತು ಸೇವೆಗಳಲ್ಲಿ ಪವಿತ್ರಾತ್ಮನ ಎಲ್ಲಾ ಒಂಬತ್ತು ವರಗಳಲ್ಲಿ ಕಾರ್ಯನಿರ್ವಹಿಸಲು ಮುಕ್ತರಾಗುವುದರಿಂದ ಅಸಾಧಾರಣವಾಗಿ ಸ್ವಾಭಾವಿಕರಾಗಿರಲು ಕಲಿತಿದ್ದಾರೆ.

ಎ.ಎಲ್. ಮತ್ತು ಜಾಯ್ಸ್ ಇಬ್ಬರೂ ಮಾಸ್ಟರ್ ಆಫ್ ಥಿಯೊಲಾಜಿಕಲ್ ಅಧ್ಯಯನಗಳಲ್ಲಿ ಪದವಿಗಳನ್ನು ಹೊಂದಿದ್ದಾರೆ. ಎ.ಎಲ್. ವಿಷನ್ ಕ್ರಿಶ್ಚಿಯನ್ ವಿಶ್ವವಿದ್ಯಾಲಯದಿಂದ ಥಿಯೊಲಾಜಿ ಪದವಿಯಲ್ಲಿ ಡಾಕ್ಟರ್ ಆಫ್ ಫಿಲಾಸಫಿ ಪದವಿಯನ್ನು ಗಳಿಸಿದ್ದಾರೆ. ಅವರ ಸೇವೆಯು ದೇವರ ವಾಕ್ಯದಲ್ಲಿ ದೃಢವಾಗಿ ಆಧರಿಸಿದೆ, ಯೇಸುವಿನ ಮೇಲೆ ಕೇಂದ್ರೀಕೃತವಾಗಿದೆ, ಪವಿತ್ರಾತ್ಮನ ಶಕ್ತಿಯ ಕುರಿತಾದ ನಂಬಿಕೆಯಲ್ಲಿ ಮತ್ತು ಪವಿತ್ರಾತ್ಮನಲ್ಲಿದ್ದುಕೊಂಡು ಕಲಿಸುವುದರಲ್ಲಿ ಬಲವಾಗಿದೆ.

ಅವರ ಸೇವೆಯು ತಂದೆಯ ಪ್ರೀತಿಯ ಹೃದಯದ ಪ್ರದರ್ಶನವಾಗಿದೆ. ದೇವರ ಶಕ್ತಿಯ ಅಡಿಯಲ್ಲಿ ಶಕ್ತಿಯುತ ಅಭಿಷೇಕ, ಸೂಚಕಕಾರ್ಯಗಳು, ಅದ್ಭುತಗಳು ಮತ್ತು ಗುಣಪಡಿಸುವ ಅದ್ಭುತಗಳು ಅವರ ಉಪದೇಶ ಮತ್ತು ಬೋಧನೆಯೊಂದಿಗೆ ಉಂಟಾಗುತ್ತವೆ. ಕರ್ತನ ಮುಂದೆ ಅಳುವುದು ಮತ್ತು ದೇವರ ಮಹಿಮೆ ಮತ್ತು ಶಕ್ತಿಯ ಅದ್ಭುತಕರವಾದ ಪ್ರದರ್ಶನಗಳು ಸೇರಿದಂತೆ ಉಜ್ಜೀವನದ ಗುರುತುಗಳು ಅವರ ಸಭೆಗಳಲ್ಲಿ ಪಾಲ್ಗೊಳ್ಳುವ ಅನೇಕರು ಅನುಭವಿಸುತ್ತಿದ್ದಾರೆ.

ಡಾ. ಎ.ಎಲ್. ಮತ್ತು ಜಾಯ್ಸ್ ಗಿಲ್ ರವರು ಯೇಸುವಿನ ಕ್ರಿಯೆಗಳನ್ನು ಮಾಡಲು ವಿಶ್ವಾಸಿಗಳನ್ನು ಸಜ್ಜುಗೊಳಿಸುವುದಕ್ಕಾಗಿ ಪ್ರಾಯೋಗಿಕ ಸಾಧನಗಳನ್ನು ತಯಾರಿಸಲು ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದಾರೆ.

ಕ್ರಿಸ್ತೀಯ ಪರಿಪಕ್ವತೆಯ ಒಂದೊಂದು ಹಂತಗಳಲ್ಲಿರುವ ಪ್ರತಿಯೊಬ್ಬ ವಿಶ್ವಾಸಿಯು ಜಯಶಾಲಿಯಾದ, ಅಸಾಧಾರಣವಾದ ಜೀವನವನ್ನು ನಡಿಸುವಂತೆ ಅವರನ್ನು ಉತ್ತೇಜಿಸುವುದು ಅವರ ಆಸೆಯಾಗಿದೆ.

## ಮಹಿಮೆ


ಪಾಠ 1 – ಮಹಿಮೆಯೊಳಕ್ಕೆ ಬನ್ನಿರಿ 5

ಮಹಿಮೆ ಎಂದರೇನು?
ಶಕ್ತಿ ಮತ್ತು ಮಹಿಮೆ
ಮಹಿಮಾಸ್ವರೂಪನಾದ ದೇವರು
ಮಹಿಮೆಗಾಗಿ ಸೃಷ್ಟಿಸಲ್ಪಟ್ಟಿದ್ದೇವೆ

ಪಾಠ 2 – ಮಹಿಮೆಗಾಗಿ ಪ್ರತ್ಯೇಕಿಸುವಿಕೆ 23

ಸೂಚಕಕಾರ್ಯಗಳ ಹೊಸ ಆರಂಭ
ಆಯ್ಕೆಯನ್ನು ಮಾಡಬೇಕು
ಯಾಕೋಬನ ಸಂತತಿ

ಪಾಠ 3– ಮಹಿಮೆಯನ್ನು ಪ್ರವೇಶಿಸುವುದು 41

ಹೊರಂಗಣ ಅಂಗಳ
ಪರಿಶುದ್ಧ ಸ್ಥಳ
ಅತಿ ಪರಿಶುದ್ಧ ಸ್ಥಳ
ಬಂಗಾರದ ಧೂಪವೇದಿ
ಮಹಿಮೆಯನ್ನು ಪ್ರವೇಶಿಸುವುದು
ಇದು ಪ್ರಗತಿಶೀಲವಾದದ್ದು!

ಪಾಠ 4 – ಮಹಿಮೆಯೊಳಕ್ಕೆ ಹೋಗಲು ಭೇದನ 62

ಕತ್ತಲೆಯ ಮುಸುಕು
ಭೇದಿಸುವ ಕರ್ತನು
ಆರಾಧನೆಯು ಪರಲೋಕವನ್ನು ತೆರೆಯುತ್ತದೆ

ಪಾಠ 5 – ಮಹಿಮೆಯ ಅಭಿವ್ಯಕ್ತಿಗಳು 82

ಆತ್ಮ ಮಂಡಲವನ್ನು ಪ್ರವೇಶಿಸುವುದು
ದೇವರ ಮಹಿಮೆಯ ಅಭಿವ್ಯಕ್ತಿಗಳು

ಪಾಠ 6 – ಮಹಿಮೆಯುಳ್ಳ ಸಭೆಯ ಪ್ರಕಟಣೆ 101

ಮಹಿಮೆಯ ಜ್ಞಾನ
ಮರ್ಮ – ಮಹಿಮೆಯುಳ್ಳ ಸಭೆ
ಪರಾತ್ಪರನ ಮರೆಹೊಕ್ಕುವ ಸ್ಥಳ
ಮಹಿಮೆಯುಳ್ಳ ಸಭೆ

## ಪಾಠ 1

# ಮಹಿಮೆಯೊಳಕ್ಕೆ ಬನ್ನಿರಿ

ಇತ್ತೀಚಿನ ವರ್ಷಗಳಲ್ಲಿ, ದೇವರ ಆತ್ಮನ ಅನೇಕ ಚಲಿಸುವಿಕೆಗಳನ್ನು ನಾವು ಅನುಭವಿಸಿದ್ದೇವೆ. ಪವಿತ್ರಾತ್ಮನು ಇತ್ತೀಚಿನ ಸಮಯಗಳಲ್ಲಿ ಸಭೆಯಲ್ಲಿ ಸತ್ಯವನ್ನು ಹೆಚ್ಚೆಚ್ಚಾದ ರೀತಿಯಲ್ಲಿ ಪುನಃ ಸ್ಥಾಪಿಸುತ್ತಿದ್ದಾನೆ. ಚೈತನ್ಯಗೊಳಿಸುವ ಕಾಲಗಳು ಮತ್ತು ಉಜ್ಜೀವನದ ಕಾಲಗಳು ಉಂಟಾಗಿವೆ. ಅನೇಕರು "ವಾಡಿಕೆಯ ಸಭೆ" ಯಲ್ಲಿ ತೃಪ್ತರಾಗಿಲ್ಲ, ಯೇಸು ಕ್ರಿಸ್ತನ ಹೊಸ ಪ್ರಕಟಣೆಯ ಬಳಿಗೆ ಮತ್ತು ಆತನೊಂದಿಗಿನ ಸಂಬಂಧವನ್ನು ಹರಸುತ್ತಾ ಬರುತ್ತಿದ್ದಾರೆ. ಇತ್ತೀಚಿನ ಈ ಚಲಿಸುವಿಕೆಗಳ ಸಮಯದಲ್ಲಿ, ಅನೇಕರು ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನವನ್ನು ಹೊಂದಿ ಕೊಂಡಿದ್ದಾರೆ, ಮೇಲಣ ಲೋಕದ ಶಕ್ತಿಯಿಂದ ತುಂಬಿಸಲ್ಪಟ್ಟಿದ್ದಾರೆ ಮತ್ತು ಪವಿತ್ರಾತ್ಮನ ಎಲ್ಲಾ ವರಗಳಲ್ಲಿ ಕಾರ್ಯಮಾಡಲು ಪ್ರಾರಂಭಿಸಿದ್ದಾರೆ. ಅನೇಕರು ದೇವರ ಸ್ವರವನ್ನು ಕೇಳುವುದು ಹೇಗೆಂದು ಕಲಿತುಕೊಂಡಿದ್ದಾರೆ ಮತ್ತು ಪ್ರವಾದಿಸಲು ಪ್ರಾರಂಭಿಸಿದ್ದಾರೆ. ದೇವರ ಈ ಚಲಿಸುವಿಕೆಗಳಲ್ಲಿ, ಅನೇಕರು ತಮ್ಮ ದೈನಂದಿನ ಜೀವನದಲ್ಲಿ ಮತ್ತು ಸಭೆಗಳಲ್ಲಿ ಗುಣಪಡಿಸುವಿಕೆಯನ್ನು ಮತ್ತು ಇತರ ಅಸಾಧಾರಣವಾದ ಅದ್ಭುತಗಳನ್ನು ಅನುಭವಿಸಲು ಪ್ರಾರಂಭಿಸಿದ್ದಾರೆ.

ಆದಾಗ್ಯೂ, ಯಾವಾಗಲೂ ಇನ್ನೂ ಹೆಚ್ಚಿನದು ಇದೆ ಎಂದು ನಾವು ನಂಬುತ್ತೇವೆ. ನಾವು ಇಂದು ಪ್ರವೇಶಿಸುತ್ತಿರುವ ದೇವರ ಚಲಿಸುವಿಕೆಯನ್ನು ಉತ್ತಮವಾಗಿ ವಿವರಿಸುವ ಯಾವುದಾದರೂ ಪದವಿರುವುದಾದರೆ, ಅದು "ಮಹಿಮೆ" ಎಂಬ ಪದವಾಗಿದೆ ಎಂದು ನಾವು ನಂಬುತ್ತೇವೆ. ನಮ್ಮಲ್ಲಿ ಪ್ರತಿಯೊಬ್ಬರೂ ದೇವರ ಮಹಿಮೆಯ ಬಗ್ಗೆ ಹೆಚ್ಚೆಚ್ಚಾದ ತಿಳುವಳಿಕೆಯನ್ನು ಮತ್ತು ಗ್ರಹಿಕೆಯನ್ನು ಹೊಂದಿಕೊಳ್ಳಬೇಕೆಂಬುದು ಈ ಅಧ್ಯಯನದ ಉದ್ದೇಶವಾಗಿದೆ. ಮಹಿಮೆಯ ಮಂಡಲದಲ್ಲಿ ಜೀವಿಸುವುದರಿಂದ ಸಿಗುವ ಅಗಾಧವಾದ ಮತ್ತು ಜೀವನವನ್ನು ಬದಲಾಯಿಸುವಂತಹ ಸಂತೋಷವನ್ನು ನಾವೆಲ್ಲರೂ ಕಂಡುಕೊಳ್ಳುತ್ತೇವೆ. ದೇವರ ಮಹಿಮೆಯು ನಮ್ಮ ಮೇಲೆ ಉದಯಿಸುವಾಗ, ದೇವರು ತನ್ನನ್ನು ತಾನು ಮಹಿಮಾಸ್ವರೂಪನಾದ ದೇವರೆಂದು ತೋರ್ಪಡಿಸಿಕೊಳ್ಳುವಾಗ ಇನ್ನೂ ಅನೇಕರು ದೇವರ

ಅತಿಶಯವಾದ ಪ್ರಸನ್ನತೆಯನ್ನು ಕಂಡುಕೊಳ್ಳುತ್ತಾರೆ ಮತ್ತು ಅನುಭವಿಸುತ್ತಾರೆ.

**ಮಹಿಮೆಯ ಕುರಿತಾದ ಪ್ರವಾದನೆಗಳು**

- *ಹಗ್ಗಾಯನ ಮೂಲಕ*

ಪ್ರವಾದಿಯಾದ ಹಗ್ಗಾಯನು ದೇವರ ಮಹಿಮೆಯು ಪುನಃಸ್ಥಾಪಿಸಲ್ಪಡುವುದನ್ನು ಕಂಡನು. ಗತಕಾಲದ ಮಹಿಮೆಗಿಂತ ಇದು ಹೆಚ್ಚಿನದು ಆಗಿರುತ್ತದೆ ಎಂದು ಹೇಳಿದನು.

**ಹಗ್ಗಾಯ 2:1,3,7,9 … ಪ್ರವಾದಿಯಾದ ಹಗ್ಗಾಯನ ಮೂಲಕ ಈ ವಾಕ್ಯವನ್ನು ದಯಪಾಲಿಸಿದನು … ಈ ಆಲಯದ ಪೂರ್ವ ವೈಭವವನ್ನು ನೋಡಿದವರು ನಿಮ್ಮಲ್ಲಿ ಎಷ್ಟು ಮಂದಿ ಉಳಿದಿದ್ದೀರಿ. ಇದರ ಈಗಿನ ಸ್ಥಿತಿಯು ನಿಮಗೆ ಹೇಗೆ ತೋರುತ್ತದೆ. ನಿಮ್ಮ ದೃಷ್ಟಿಗೆ ಏನೂ ಇಲ್ಲದಾಗಿ ತೋರುತ್ತದೆ. ನಿಮ್ಮ ದೃಷ್ಟಿಗೆ ಏನೂ ಇಲ್ಲದಾಗಿ ಕಾಣಿಸುತ್ತದೆ … ಆಗ ಸಮಸ್ತ ಜನಾಂಗಗಳ ಇಷ್ಟ ವಸ್ತುಗಳು ಬಂದು ಒದಗಲು ಈ ಆಲಯದ ವೈಭವದಿಂದ ತುಂಬಿಸುವೆನು. ಇದು ಸೇನಾಧೀಶ್ವರನಾದ ಯೆಹೋವನ ನುಡಿ.**

**ಈ ಆಲದಯದ ಮುಂದಿನ ವೈಭವವು ಹಿಂದಿನ ವೈಭವವಕ್ಕಿಂತ ವಿಶೇಷವಾಗಿರುವದು. ಇದು ಸೇನಾಧೀಶ್ವರನಾದ ಯೆಹೋವನ ನುಡಿ. ಈ ಸ್ಥಳದಲ್ಲಿ ಸಮಾಧಾನವನ್ನು ಅನುಗ್ರಹಿಸುವೆನು. ಇದು ಸೇನಾಧೀಶ್ವರನಾದ ಯೆಹೋವನ ನುಡಿ.**

- *ಯೆಶಾಯನ ಮೂಲಕ*

ಭೂಮಿಯು ಈಗಾಗಲೇ ಕರ್ತನ ಮಹಿಮೆಯಿಂದ ತುಂಬಿದೆ ಎಂದು ದೇವದೂತರು ಒಬ್ಬರಿಗೊಬ್ಬರು ಕೂಗಿ ಹೇಳುವುದನ್ನು ಪ್ರವಾದಿ ಯೆಶಾಯನು ಕೇಳಿಸಿಕೊಂಡನು.

**ಯೆಶಾಯ 6:1-3 ಅರಸನಾದ ಉಜ್ಜೀಯನ ಕಾಲವಾದ ವರುಷದಲ್ಲಿ ಕರ್ತನು ಉನ್ನತೋನ್ನತ ಸಿಂಹಾಸನಾರೂಢನಾಗಿರುವದನ್ನು ಕಂಡೆನು. ಆತನ ವಸ್ತ್ರದ ನೆರಿಗೆಯೂ ಮಂದಿರದಲ್ಲೆಲ್ಲಾ ಹರಡಿತ್ತು. ಆತನ ಸುತ್ತ ಸೆರಾಫಿಯರು ಇದ್ದರು. ಪ್ರತಿಯೊಬ್ಬನು ಆರಾರು ರೆಕ್ಕೆಯುಳ್ಳವನಾಗಿ ಎರಡರಿಂದ ತನ್ನ ಮುಖವನ್ನು ಎರಡರಿಂದ ತನ್ನ ಕಾಲುಗಳನ್ನು ಮುಚ್ಚಿಕೊಂಡು ಎರಡನ್ನು ಬಡೆಯುತ್ತಾ ನೆಲಸೋಕದೇ**

**ನಿಂತಿದ್ದನು. ಆಗ ಒಬ್ಬನು ಮತ್ತೊಬ್ಬನಿಗೆ ಸೇನಾಧೀಶ್ವರನಾದ ಯೆಹೋವನು ಪರಿಶುದ್ದನು. ಪರಿಶುದ್ದನು. ಪರಿಶುದ್ದನು. ಭೂಮಂಡಲವೆಲ್ಲಾ ಆತನ ಪ್ರಭಾವದಿಂದ ತುಂಬಿದೆ ಎಂದು ಕೂಗಿ ಹೇಳಿದನು.**

- *ಹಬಕ್ಕೂಕನ ಮೂಲಕ*

ಪ್ರವಾದಿಯಾದ ಹಬಕ್ಕೂಕನು ಕರ್ತನ ಮಹಿಮೆಯ ಕುರಿತಾದ ತಿಳಿವಳಿಕೆಯು ಬರುವುದರ ಬಗ್ಗೆ ಪ್ರವಾದಿಸಿದನು. ದೇವರ ಮಹಿಮೆ ಈಗಾಗಲೇ ಇಲ್ಲಿದೆ. ಈಗ ಬರುವಂಥದ್ದು ಆ ಮಹಿಮೆಯ ಕುರಿತಾದ ಜ್ಞಾನ ಮತ್ತು ತಿಳುವಳಿಕೆ ಆಗಿದೆ.

**ಹಬಕ್ಕೂಕ 2:14 ಸಮುದ್ರದಲ್ಲಿ ನೀರು ಹೇಗೋ ಹಾಗೆಯೇ ಭೂಮಿಯಲ್ಲಿ ಯೆಹೋವನ ಮಹಿಮೆಯ ಜ್ಞಾನವು ತುಂಬಿಕೊಂಡಿರುವದು.**

## ಮಹಿಮೆ ಎಂದರೇನು?

ದೇವರು ಮಹಿಮೆಯ ದೇವರಾಗಿದ್ದಾನೆ. ಪವಿತ್ರಾತ್ಮನು ಮಹಿಮೆಯ ಆತ್ಮನಾಗಿದ್ದಾನೆ, ಮತ್ತು ಯೇಸು ಮಹಿಮೆಯ ಅರಸನಾಗಿದ್ದಾನೆ, ಇದು ಆ ಮಹಿಮೆಯ ವ್ಯಕ್ತಪಡಿಸುವಿಕೆಯಾಗಿದೆ. ಆದ್ದರಿಂದ ಈ ಮಹಿಮೆ ಎಂದರೇನು ಎಂದು ತಿಳಿದುಕೊಳ್ಳುವುದು ಮುಖ್ಯವಾಗಿದೆ; ನಾವು ಅದನ್ನು ಹೇಗೆ ವಿವರಿಸಬಹುದು.

### ದೇವರ ಪ್ರಸನ್ನತೆ

ಮಹಿಮೆ ಎಂದರೆ ಪ್ರತ್ಯಕ್ಷವಾಗಿರುವ ದೇವರ ಪ್ರಸನ್ನತೆಯಾಗಿದೆ. ಮತ್ತು ಈ ಮಹಿಮೆಯನ್ನು ಸತ್ಯವೇದದಾದ್ಯಂತ ಪ್ರದರ್ಶಿಸಲಾಗಿದೆ, ಈ ಮಹಿಮೆಯು ಹಲವು ರೀತಿಗಳಲ್ಲಿ ಪ್ರತ್ಯಕ್ಷವಾಗಿದೆ.

ಮಹಿಮೆಯ ಬಗ್ಗೆಯಿರುವ ಹೀಬ್ರೂ ಮತ್ತು ಗ್ರೀಕ್ ವ್ಯಾಖ್ಯೆಗಳು ಸಮಾನಾರ್ಥವುಳ್ಳವುಗಳು ಆಗಿವೆ. ಮಹಿಮೆಯು ವೈಭವವನ್ನು, ಪ್ರಕಾಶವನ್ನು ಅಥವಾ ಹೊಳೆಯುವ ಬೆಳಕನ್ನು (ಪ್ರಕಾಶಮಾನವಾದ ಮೂಲದಿಂದ ಹೊಳೆಯುವ) ತೇಜಸ್ಸನ್ನು ಸೂಚಿಸುತ್ತದೆ.

### ಶೆಕಿನಾ

"ದೇವರ ಪ್ರಸನ್ನತೆಯ ಪ್ರಕಾಶಮಾನವಾದ ಮೇಘ" ಎಂಬುದು *ಶೆಕಿನಾ* ಎಂಬ ಹೀಬ್ರೂ ಪದದ ಅರ್ಥವಾಗಿದೆ.

* *ಪ್ರಜ್ವಲಿಸುವ ಬೆಂಕಿಯಂತೆ*

**ವಿಮೋಚನಕಾಂಡ 24:15-17 ಮೋಶೆ ಬೆಟ್ಟವನ್ನು ಹತ್ತಿದಾಗ ಮೇಘವು ಅದನ್ನು ಮುಚ್ಚಿಕೊಂಡಿತು. ಯೆಹೋವನ ತೇಜಸ್ಸು ಸೀನಾಯಿ ಬೆಟ್ಟದ ಮೇಲೆ ನಿಂತಿತು. ಮತ್ತು ಆ ಮೇಘವು ಆರು ದಿನಗಳ ವರೆಗೂ ಬೆಟ್ಟವನ್ನು ಮುಚ್ಚಿಕೊಂಡಿತು. ಏಳನೇಯ ದಿನದಲ್ಲಿ ಯೆಹೋವನು ಮೇಘದೊಳಗಿಂದ ಕೂಗಿ ಮೋಶೆಯನ್ನು ಕರೆದನು. ಯೆಹೋವನ ತೇಜಸ್ಸು ಬೆಟ್ಟದ ಶಿಖರದ ಮೇಲೆ ಪ್ರಜ್ವಲಿಸುವ ಬೆಂಕಿಯೋಪಾದಿಯಲ್ಲಿ ಇಸ್ರಾಯೇಲ್ಯರಿಗೆ ಕಾಣಿಸಿತು.**

* *ಹಗಲಿನಲ್ಲಿ ಮೇಘಸ್ತಂಭ - ರಾತ್ರಿಯಲ್ಲಿ ಅಗ್ನಿಸ್ತಂಭ*

**ವಿಮೋಚನಕಾಂಡ 40:34-38 ಆಗ ಮೇಘವು ದೇವದರ್ಶನದ ಗುಡಾರವನ್ನು ಮುಚ್ಚಿತು; ಯೆಹೋವನ ತೇಜಸ್ಸು ಗುಡಾರವನ್ನು ತುಂಬಿತು. ಮೇಘವು ದೇವದರ್ಶನದ ಗುಡಾರದ ಮೇಲೆ ನೆಲೆಯಾಗಿರುವದರಿಂದಲೂ ಯೆಹೋವನ ತೇಜಸ್ಸು ಗುಡಾರದೊಳಗೆ ತುಂಬಿರುವದ ರಿಂದಲೂ ಮೋಶೆ ಗುಡಾರದಲ್ಲಿ ಹೋಗಲಾರದೆ ಇದ್ದನು. ಆ ಮೇಘವು ಗುಡಾರವನ್ನು ಬಿಟ್ಟು ಮೇಲಕ್ಕೆ ಹೋದಾಗ ಇಸ್ರಾಯೇಲ್ಯರು ಮುಂದೆ ಪ್ರಯಾಣ ಮಾಡುವರು; ಆ ಮೇಘವು ಬಿಡದೆ ಇರುವಾಗ ಅದು ಬಿಡುವ ತನಕ ಪ್ರಯಾಣಮಾಡದೆ ಇರುವರು. ಇಸ್ರಾಯೇಲ್ಯರ ಎಲ್ಲಾ ಪ್ರಯಾಣ ಗಳಲ್ಲಿಯೂ ಅವರ ಕಣ್ಣು ಮುಂದೆ ಹಗಲು ಹೊತ್ತಿನಲ್ಲಿ ಯೆಹೋವನ ಮೇಘವು ಗುಡಾರದ ಮೇಲೆ ಇತ್ತು; ರಾತ್ರಿ ವೇಳೆಯಲ್ಲಿ ಆ ಮೇಘದೊಳಗೆ ಅಗ್ನಿಯು ಪ್ರಕಾಶಿಸುತ್ತಿತ್ತು.**

**ಡೊಕ್ಸಾ**

*ಡೊಕ್ಸಾ* ಎಂಬ ಗ್ರೀಕ್ ಪದದ ಅರ್ಥವೇನಂದರೆ "ಮಹಿಮೆ" ಎಂಬುದಾಗಿ. *ಡೊಕ್ಸಾ* ಎಂದರೆ ಕ್ರಿಸ್ತನಲ್ಲಿರುವ ವಿಶ್ವಾಸಿಗಳಿಗೆ ವಾಗ್ದಾನ ಮಾಡಿರುವ ಅತ್ಯಂತ ಮಹಿಮಾನ್ವಿತ ಸ್ಥಿತಿ, ಉನ್ನತವಾದ ಸ್ಥಿತಿ, ಧನ್ಯತೆಯ ಪರಿಪೂರ್ಣವಾದ ಸ್ಥಿತಿ ಆಗಿದೆ. ಇದು ಕ್ರಿಸ್ತನ ಪರಿಪೂರ್ಣವಾದ ಶ್ರೇಷ್ಠತೆ ಮತ್ತು ಆತನ ರಾಜತ್ವವಾದ ಭವ್ಯತೆ ಆಗಿದೆ.

ನಾವು ಈಗ ಮಹಿಮೆಯಿಂದ ಮಹಿಮೆಗೆ ಅಥವಾ ಡೊಕ್ಸಾದಿಂದ ಡೊಕ್ಸಾಗೆ ಹೋಗುತ್ತಿದ್ದೇವೆ ಎಂದು ವಾಕ್ಯವು ಹೇಳುತ್ತದೆ.

**2 ಕೊರಿಂಥ 3:18 ನಾವೆಲ್ಲರೂ ಮುಸುಕು ತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ. ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕನುಸಾರ ವಾದದ್ದೇ.**

**ಕಾಬೋದ್**

ಹಳೆಯ ಒಡಂಬಡಿಕೆಯಲ್ಲಿ ಮಹಿಮೆ ಎಂಬ ಪದಕ್ಕೆ ಹೆಚ್ಚಾಗಿ ಬಳಸಲಾಗಿರುವ ಪದವೆಂದರೆ ಅದು ಕಾಬೋದ್ ಎಂಬ ಹೀಬ್ರೂ ಪದವಾಗಿದೆ, ಇದರ ಅರ್ಥವೇನಂದರೆ "ತೂಕ," ಅಥವಾ "ಭಾರವಾಗಿರುವುದು", ಇದು ನಮ್ಮ ಸ್ತುತಿ ಆರಾಧನೆಗೆ ಅರ್ಹರನಾಗಿರುವ ದೇವರಿಗೆ ಸೇರಿದ ಗಣನೀಯವಾದ ಶ್ರೇಷ್ಠತೆ, ಘನತೆ, ಪ್ರಭಾವ, ಭವ್ಯತೆ, ಹಿರಿಮೆ, ಉತ್ಕೃಷ್ಟತೆಯನ್ನು ಸೂಚಿಸುತ್ತದೆ.

- *ಒಳಗೆ ಪ್ರವೇಶಿಸಲು ಆಗಲಿಲ್ಲ*

**2 ಪೂರ್ವಕಾಲವೃತ್ತಾಂತ 7:1,2 ಸೊಲೊಮೋನನು ಪ್ರಾರ್ಥಿಸುವದನ್ನು ಮುಗಿಸಿದ ಕೂಡಲೆ ಆಕಾಶದಿಂದ ಬೆಂಕಿಬಿದ್ದು ಸರ್ವಾಂಗಹೋಮ ದ್ರವ್ಯಗಳನ್ನೂ ಯಜ್ಞಮಾಂಸವನ್ನೂ ದಹಿಸಿ ಬಿಟ್ಟತು, ಯೆಹೋವನ ತೇಜಸ್ಸು ಆಲಯದಲ್ಲಿ ತುಂಬಿಕೊಂಡಿತು. ಯೆಹೋವನ ತೇಜಸ್ಸು ಆತನ ಆಲಯದಲ್ಲಿ ತುಂಬಿಕೊಂಡದ್ದರಿಂದ ಯಾಜಕರು ಒಳಗೆ ಪ್ರವೇಶಿಸಲಾರದೆ ಹೋದರು.**

- *ಸೇವೆಮಾಡುವುದನ್ನು ನಿಲ್ಲಿಸಲಾಯಿತು*

**2 ಪೂರ್ವಕಾಲವೃತ್ತಾಂತ 5:13,14 ಮಂಜೂಷವನ್ನು ಒಳಗಿಟ್ಟ ಯಾಜಕರೂ ದೇವಾಲಯದಿಂದ ಹೊರಗೆ ಬಂದ ಕೂಡಲೆ ಒಬ್ಬನೋ ಎಂಬಂತೆ ಸ್ವರವೆತ್ತಿ ಯೆಹೋವನನ್ನು ಕೀರ್ತಿಸುವದಕ್ಕಾಗಿ ತುತೂರಿ ಊದುವವರೂ ಗಾಯನಮಾಡುವವರೂ ಅಲ್ಲಿ ನಿಂತಿದ್ದರು. ತುತೂರಿ ತಾಳ ಮೊದಲಾದ ವಾಲ್ಯಗಳ ಧ್ವನಿಯೂ ಯೆಹೋವನು ಒಳ್ಳೆಯವನು, ಆತನ ಕೃಪೆಯು ಶಾಶ್ವತ ವಾಗಿರುವದು ಎಂದು ಕೃತಜ್ಞಾಸ್ತುತಿ ಮಾಡುವವರ ಸ್ವರವೂ ಕೇಳಿಸಿದೊಡನೆ ಮೇಘವು**

**ಯೆಹೋವನ ಆಲಯದಲ್ಲಿ ತುಂಬಿಕೊಂಡಿತು. ಯೆಹೋವನ ತೇಜಸ್ಸಿನಿಂದ ವ್ಯಾಪ್ತವಾಗಿದ್ದು ಮೇಘವು ದೇವಾಲಯದಲ್ಲಿ ತುಂಬಿಕೊಂಡದರಿಂದ ಯಾಜಕರು ಅಲ್ಲಿ ನಿಂತು ಸೇವೆ ಮಾಡಲಾರದೆ ಹೋದರು.**

* *ತೂಕವಾದ/ಗೌರವವಾದ ಮಹಿಮೆ*

**2 ಕೊರಿಂಥ 4:17 ಹೇಗೆಂದರೆ ಕ್ಷಣಮಾತ್ರವಿರುವ ನಮ್ಮ ಹಗುರವಾದ ಸಂಕಟವು ಅತ್ಯಂತಾಧಿಕವಾಗಿ ಪ್ರತಿಫಲವನ್ನು ಉಂಟುಮಾಡಿ ನಮಗೆ ನಿರಂತರವಾಗಿರುವ ಗೌರವವಾದ ಪ್ರಭಾವವನ್ನು ದೊರಕಿಸುತ್ತದೆ,**

* *ಎತ್ತಿಕೊಂಡು ಹೋಗುವ ಶಕ್ತಿಯುಳ್ಳದು*

ಪ್ರವಾದಿಯಾದ ಯೆಹೆಜ್ಕೇಲನು ತನ್ನನ್ನು ಎತ್ತಿಕೊಂಡು ಒಳಗಣ ಪ್ರಾಕಾರಕ್ಕೆ ಕರೆದುಕೊಂಡು ಹೋಗಲಾಯಿತು ಎಂದು ಹೇಳಿದನು. ಆತ್ಮನು ನಮ್ಮನ್ನು ಭೌತಿಕ ಮಂಡಲದಿಂದ ಮಹಿಮೆಯ ಮಂಡಲಕ್ಕೆ ಎತ್ತಿಕೊಂಡು ಹೋಗಬಲ್ಲದು, ಆದರೆ ಇದು ಒಂದು "ಭೌತಿಕ" ಸ್ಥಳದಿಂದ ಮತ್ತೊಂದು "ಭೌತಿಕ" ಸ್ಥಳಕ್ಕೆ ಕೊಂಡೊಯ್ಯುವುದು ಸಹ ಆಗಿದೆ.

**ಯೆಹೆಜ್ಕೇಲ್ 43:5 ದೇವರಾತ್ಮವು ನನ್ನನ್ನು ಎತ್ತಿ ಒಳಗಣ ಪ್ರಾಕಾರಕ್ಕೆ ತರಲು ಆಹಾ, ಯೆಹೋವನ ತೇಜಸ್ಸು ದೇವಸ್ಥಾನವನ್ನು ತುಂಬಿಕೊಂಡಿತ್ತು.**

* *ನಿಲ್ಲಲಾಗಲಿಲ್ಲ*

ಅವರು ಒಡಂಬಡಿಕೆಯ ಮಂಜೂಷವನ್ನು (ದೇವಾಲಯದೊಳಗೆ ದೇವರ ಪ್ರಸನ್ನತೆಯನ್ನು) ತಂದಾಗ ಯಾಜಕನು ನಿಂತು ಸೇವೆ ಮಾಡಲು ಆಗಲಿಲ್ಲ ಏಕೆಂದರೆ *ಕಾಬೋದ್*, ಮಹಿಮೆಯು ದೇವಾಲಯವನ್ನು ತುಂಬಿಕೊಂಡಿತ್ತು.

* *ನಡುಕವನ್ನು ಉಂಟುಮಾಡುತ್ತದೆ*

ದಾನಿಯೇಲನು ಹೀಗೆ ಬರೆದಿದ್ದಾನೆ,

**ದಾನಿಯೇಲ 10:10 ಆಹಾ, ನನಗೆ ಹಸ್ತಸ್ಪರ್ಶವಾಯಿತು; ನಾನು ಗಡಗಡನೆ ನಡುಗುತ್ತಾ ಮೊಣಕಾಲೂರಿ ಅಂಗೈಗಳ ಮೇಲೆ ನಿಲ್ಲುವಂತೆ ಮಾಡಿತು.**

* *ಅಡ್ಡಬೀಳುವಂತೆ ಮಾಡುತ್ತದೆ*

ಪ್ರವಾದಿಯಾದ ಯೆಹೆಜ್ಕೇಲನು ಹೀಗೆ ಬರೆದಿದ್ದಾನೆ,

**ಯೆಹೆಜ್ಕೇಲ 44:4... ಬಳಿಕ ಆ ಪುರುಷನು ಬಡಗಣ ಹೆಬ್ಬಾಗಿಲ ಮಾರ್ಗವಾಗಿ ನನ್ನನ್ನು ದೇವಸ್ಥಾನದ ಮುಂದುಗಡೆಗೆ ಕರೆತಂದನು; ಆಹಾ, ನಾನು ನೋಡಲಾಗಿ ಯೆಹೋವನ ತೇಜಸ್ಸು ಯೆಹೋವನ ಆಲಯವನ್ನು ತುಂಬಿಕೊಂಡಿತ್ತು; ಅದನ್ನು ನೋಡಿ ಅಡ್ಡಬಿದ್ದೆನು.**

*ಕಾಬೋದ್* ಮಹಿಮೆಯು ಪ್ರತ್ಯಕ್ಷವಾಗುವಾಗ, ನಿಲ್ಲುವುದಕ್ಕೆ ನಮಗೆ ಆಗುವುದಿಲ್ಲ.

ದೇವಾಲಯದ ಕಾವಲುಗಾರರು ಯೇಸುವನ್ನು ಬಂಧಿಸಲು ಬಂದಾಗ, "ನೀವು ಯಾರನ್ನು ಹುಡುಕುತ್ತಿದ್ದೀರಿ?" ಎಂದು ಆತನು ಕೇಳಿದನು.

ಅವರು "ನಜರೇತಿನ ಯೇಸುವನ್ನು" ಎಂದು ಆತನಿಗೆ ಉತ್ತರಿಸಿದರು.

ಯೇಸು ಅವರಿಗೆ, "ನಾನೇ ಆತನು" ಎಂದು ಹೇಳಿದನು ಮತ್ತು ಅವರು ಹಿಂದೆ ಸರಿದು ನೆಲದ ಮೇಲೆ ಬಿದ್ದರು ಎಂದು ಸತ್ಯವೇದವು ಹೇಳುತ್ತದೆ. (ಯೋಹಾನ 18:4-6)

* *ಮೇಘದಂತೆ ಬರಬಹುದು*

ಸೊಲೊಮೋನನು ದೇವಾಲಯವನ್ನು ಪ್ರತಿಷ್ಠಾಪನೆ ಮಾಡುವಾಗ ಮಹಿಮೆಯು ಮೇಘದಂತೆ ಇಳಿದುಬಂದಿತು.

**1 ಅರಸುಗಳು 8:6 ಯಾಜಕರು ಯೆಹೋವನ ಒಡಂಬಡಿಕೆಯ ಮಂಜೂಷವನ್ನು ತೆಗೆದುಕೊಂಡು ಬಂದು ಮಹಾ ಪರಿಶುದ್ಧ ಸ್ಥಳವೆನಿಸುವ ಗರ್ಭಗೃಹದಲ್ಲಿ ಕೆರೂಬಿಗಳ ರೆಕ್ಕೆಗಳ ಕೆಳಗೆ ಅದಕ್ಕೆ ನೇಮಕವಾದ ಸ್ಥಳದಲ್ಲಿ ಇಟ್ಟರು.**

**ವಚನಗಳು 10,11 ಯಾಜಕರು ಪರಿಶುದ್ಧ ಸ್ಥಳದಿಂದ ಹೊರಗೆ ಬಂದ ಕೂಡಲೆ ಮೇಘವು ಯೆಹೋವನ ಆಲಯವನ್ನು ತುಂಬಿಕೊಂಡಿತು. ಯೆಹೋವನ ತೇಜಸ್ಸಿನಿಂದ ವ್ಯಾಪ್ತವಾಗಿದ್ದ ಮೇಘವು ಆಲಯವನ್ನು**

**ತುಂಬಿಕೊಂಡಿದ್ದರಿಂದ ಯಾಜಕರು ಅಲ್ಲಿ ನಿಂತು ಸೇವೆಮಾಡಲಾರದವರಾದರು.**

- *ಬೆಂಕಿಯಂತೆ ಬರಬಹುದು*

ಸೊಲೊಮೋನನ ಸಮರ್ಪಣೆಯ ಪ್ರಾರ್ಥನೆಯ ಕೊನೆಯಲ್ಲಿ ದೇವರ ಬೆಂಕಿ ಬಿದ್ದಿತು.

**2 ಪೂರ್ವಕಾಲವೃತ್ತಾಂತ 7:1-3 ಸೊಲೊಮೋನನು ಪ್ರಾರ್ಥಿಸುವದನ್ನು ಮುಗಿಸಿದ ಕೂಡಲೆ ಆಕಾಶದಿಂದ ಬೆಂಕಿಬಿದ್ದು ಸರ್ವಾಂಗಹೋಮ ದ್ರವ್ಯಗಳನ್ನೂ ಯಜ್ಞ ಮಾಂಸವನ್ನೂ ದಹಿಸಿ ಬಿಟ್ಟತು, ಯೆಹೋವನ ತೇಜಸ್ಸು ಆಲಯದಲ್ಲಿ ತುಂಬಿಕೊಂಡಿತು. ಯೆಹೋವನ ತೇಜಸ್ಸು ಆತನ ಆಲಯದಲ್ಲಿ ತುಂಬಿಕೊಂಡದ್ದರಿಂದ ಯಾಜಕರು ಒಳಗೆ ಪ್ರವೇಶಿಸಲಾರದೆ ಹೋದರು. ಇಸ್ರಾಯೇಲ್ಯರೆಲ್ಲರೂ ಬೆಂಕಿ ಇಳಿದುಬರುವದನ್ನೂ ಯೆಹೋವನ ತೇಜಸ್ಸು ಆಲಯದಲ್ಲಿರುವದನ್ನೂ ನೋಡಿ ನೆಲಗಟ್ಟಿನ ಮೇಲೆ ಸಾಷ್ಟಾಂಗವೆರಗಿ ಆರಾಧಿಸಿ - ಯೆಹೋವನು ಒಳ್ಳೆಯವನು, ಆತನ ಕೃಪೆಯು ಶಾಶ್ವತವಾಗಿದೆ ಎಂದು ಕೃತಜ್ಞತಾಸ್ತುತಿಮಾಡಿದರು.**

ಮಹಿಮೆಯ ಎರಡು ರೀತಿಗಳು

- *ಹಂಚಿಕೊಳ್ಳಲಾಗದ ಮಹಿಮೆ*

ದೇವರ ಮಹಿಮೆಯಲ್ಲಿ ಎರಡು ರೀತಿಗಳಿವೆ – ಒಂದು ಆತನು ತನಗಾಗಿ ಮಾತ್ರವೇ ಇಟ್ಟಿಕೊಂಡಿರುವಂಥದ್ದು (ಹಂಚಿಕೊಳ್ಳಲಾಗದ ಮಹಿಮೆ) ಮತ್ತು ಇನ್ನೊಂದು ಆತನು ಮನುಷ್ಯರೊಂದಿಗೆ ಹಂಚಿಕೊಳ್ಳುವಂಥದ್ದು ಆಗಿದೆ (ಹಂಚಿಕೊಳ್ಳಲಾಗುವ ಮಹಿಮೆ).

**ಯೆಶಾಯ 42:8 ನಾನೇ ಯೆಹೋವನು; ಇದೇ ನನ್ನ ನಾಮವು; ನನ್ನ ಮಹಿಮೆಯನ್ನು ಮತ್ತೊಬ್ಬನಿಗೆ ಸಲ್ಲಗೊಡಿಸೆನು, ನನ್ನ ಸ್ತೋತ್ರವನ್ನು ವಿಗ್ರಹಗಳ ಪಾಲು ಮಾಡೆನು ...**

ಅದಕ್ಕಾಗಿಯೇ ಆತನ ನಾಮಕ್ಕೆ ಯೋಗ್ಯವಾದ ಮಹಿಮೆಯನ್ನು ಆತನಿಗೆ ಸಲ್ಲಿಸಲು ನಾವು ಜಾಗರೂಕರಾಗಿರಬೇಕು.

**ಕೀರ್ತನೆ 29:2 ಯೆಹೋವನ ನಾಮಕ್ಕೆ ಯೋಗ್ಯವಾದ ಘನವನ್ನು ಸಲ್ಲಿಸಿರಿ; ಪರಿಶುದ್ಧತ್ವವೆಂಬ ಭೂಷಣದೊಡನೆ ಯೆಹೋವನಿಗೆ ಅಡ್ಡಬೀಳಿರಿ.**

**ಕೀರ್ತನೆಗಳು 96:7,8 ಭೂಜನಾಂಗಗಳೇ, ಬಲಪ್ರಭಾವಗಳು ಯೆಹೋವನವೇ ಯೆಹೋವನವೇ ಎಂದು ಹೇಳಿ ಆತನನ್ನು ಘನಪಡಿಸಿರಿ. ಯೆಹೋವನ ನಾಮಕ್ಕೆ ಯೋಗ್ಯವಾದ ಘನವನ್ನು ಸಲ್ಲಿಸಿರಿ; ಕಾಣಿಕೆಯೊಡನೆ ಆತನ ಅಂಗಳಗಳಿಗೆ ಬನ್ನಿರಿ.**

**ಮತ್ತಾಯ 6:13 ಏಕೆಂದರೆ ರಾಜ್ಯವೂ ಬಲವೂ ಮಹಿಮೆಯೂ ಸದಾಕಾಲ ನಿಮ್ಮವೇ.**

* *ಹಂಚಿಕೊಳ್ಳಲಾಗುವ ಮಹಿಮೆ*

ಹಂಚಿಕೊಳ್ಳಲಾಗುವ ಮಹಿಮೆ ಎಂದರೆ ಈ ಭೂಮಿಯಲ್ಲಿ ಮನುಷ್ಯರು ಅನುಭವಿಸುವುದಕ್ಕಾಗಿ ಮತ್ತು ಪ್ರದರ್ಶಿಸುವುದಕ್ಕಾಗಿ ಆತನು ಅವರನ್ನು ಸೃಷ್ಟಿಸಿದ ಮಹಿಮೆಯಾಗಿದೆ.

***ಈಕಾಬೋದ್***

ಈಕಾಬೋದ್ ಎಂಬುದು ಕಾಬೋದ್ ಎಂಬ ಪದದ ವಿರುದ್ಧಾರ್ಥಕ ಪದವಾಗಿದೆ. ಮಹಿಮೆ ಬಿಟ್ಟುಹೋಯಿತು ಎಂಬುದು ಅದರರ್ಥವಾಗಿದೆ.

ಇಸ್ರಾಯೇಲ್ ಜನರು ಪಾಪ ಮಾಡಿದಾಗ ಮತ್ತು ದೇವರ ಮಹಿಮೆಯನ್ನು ಪ್ರತಿನಿಧಿಸುವ ಒಡಂಬಡಿಕೆಯ ಮಂಜೂಷವನ್ನು ಫಿಲಿಷ್ಟಿಯರು ವಶಪಡಿಸಿಕೊಂಡಾಗ,

**ಮಹಿಮೆಯು ಇಸ್ರಾಯೇಲ್ಯರನ್ನು ಬಿಟ್ಟು ಹೋಯಿತೆಂದು ಹೇಳಿ ಆ ಕೂಸಿಗೆ ಈಕಾಬೋದ್ ಎಂದು ಹೆಸರಿಟ್ಟಳು. ದೇವರ ಮಂಜೂಷವು ಶತ್ರುವಶವಾದದರಿಂದಲೇ ಇಸ್ರಾಯೇಲ್ಯರ ಮಹಿಮೆಯು ಹೋಯಿತೆಂದು ಹೇಳಿದಳು. (1 ಸಮುವೇಲ 4:21,22).**

ಈಕಾಬೋದ್ ಎಂದರೆ ಮಹಿಮೆಯು ಬಿಟ್ಟುಹೋಗಿದೆ ಎಂಬ ಸಂಗತಿಯು ಇದು ಅನೇಕ ಕ್ರೈಸ್ತರ ಜೀವನದಲ್ಲಿ ಮತ್ತು ಅನೇಕ ಸಭೆಗಳಲ್ಲಿ ವಾಸ್ತವದ ಸಂಗತಿಯಾಗಿರುವುದು ನಾಚಿಕೆಗೇಡಿನ ವಿಷಯವಾಗಿದೆ. ನಮ್ಮನ್ನು ಯಾವ ಮಹಿಮೆಗಾಗಿ ಸೃಷ್ಟಿಸಲಾಗಿತ್ತೋ

ಆ ಮಹಿಮೆಯು ನಮ್ಮಲ್ಲಿ ಪುನಃಸ್ಥಾಪಿಸುವವರೆಗೂ ನಾವು ಯಾವುದಕ್ಕಾಗಿ ಸೃಷ್ಟಿಸಲ್ಪಟ್ಟಿದ್ದೇವೋ ಆ ಎಲ್ಲ ವಿಷಯಗಳು ನಮ್ಮಲ್ಲಿ ಉಂಟಾಗುವುದಿಲ್ಲ.

## ಶಕ್ತಿ ಮತ್ತು ಮಹಿಮೆ

ವಾಕ್ಯದ ಪ್ರಕಾರ, ದೇವರ ಶಕ್ತಿಯು ಮತ್ತು ಮಹಿಮೆಯು ಒಟ್ಟಿಗೆ ಪ್ರತ್ಯಕ್ಷವಾಗುತ್ತವೆ.

**ಕೀರ್ತನೆ 63:1,2 ದೇವರೇ, ನೀನೇ ನನ್ನ ದೇವರು; ನಾನು ನಿನ್ನ ದರ್ಶನವನ್ನು ಕುತೂಹಲದಿಂದ ಎದುರುನೋಡುತ್ತೇನೆ; ... ನಿನ್ನ ಮಂದಿರದಲ್ಲಿ ನಾನು ನಿನ್ನ ಮಹತ್ತನ್ನೂ ಪ್ರಭಾವವನ್ನೂ ಕಂಡ ಪ್ರಕಾರ ಈಗಲೂ ಕಾಣಬೇಕೆಂದು ಅಪೇಕ್ಷಿಸುತ್ತೇನೆ.**

**ಕೀರ್ತನೆ 145:11 ಅವರು ನಿನ್ನ ರಾಜ್ಯಮಹತ್ತನ್ನು ಪ್ರಸಿದ್ಧಪಡಿಸುವರು; ನಿನ್ನ ಪ್ರತಾಪವನ್ನು ವರ್ಣಿಸುವರು.**

**ಮತ್ತಾಯ 6:13 ಏಕೆಂದರೆ ರಾಜ್ಯವೂ ಬಲವೂ ಮಹಿಮೆಯೂ ಸದಾಕಾಲ ನಿಮ್ಮವೇ. ಆಮೆನ್.**

**ಮಾರ್ಕ 13:26 ಆಗ ಮನುಷ್ಯಕುಮಾರನು ಬಹು ಬಲದಿಂದಲೂ ಮಹಿಮೆಯಿಂದಲೂ ಮೇಘಗಳಲ್ಲಿ ಬರುವದನ್ನು ಕಾಣುವಿರಿ.**

**ಯೂದ 1:25 ನಮ್ಮ ರಕ್ಷಕನಾದ ಒಬ್ಬನೇ ದೇವರಿಗೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ಪ್ರಭಾವ ಮಹತ್ವ ಆಧಿಪತ್ಯ ಅಧಿಕಾರಗಳು ಎಲ್ಲಾ ಕಾಲಕ್ಕಿಂತ ಮೊಲೂ ಇದ್ದ ಹಾಗೆ ಈಗಲೂ ಯಾವಾಗಲೂ ಇರಲಿ. ಆಮೆನ್.**

**ಪ್ರಕಟನೆ 5:13 ಇದಲ್ಲದೆ ಆಕಾಶದಲ್ಲಿಯೂ ಭೂಮಿಯ ಮೇಲೆಯೂ ಬೂಮಿಯ ಕೆಳಗೆಯೂ ಸಮುದ್ರದ ಮೇಲೆಯೂ ಇರುವ ಎಲ್ಲಾ ಸೃಷ್ಟಿಗಳು ಅಂದರೆ ಭೂಮ್ಯಾಕಾಶ ಸಮುದ್ರಗಳೊಳಗೆ ಇರುವದೆಲ್ಲವೂ – ಸಿಂಹಾಸನಾಸೀನನಿಗೂ ಯಜ್ಞದ ಕುರಿಯಾದಾತನಿಗೂ ಸ್ತೋತ್ರ ಮಾನ ಪ್ರಭಾವ ಆಧಿಪತ್ಯಗಳು ಯುಗಯುಗಾಂತರಗಳಲ್ಲಿಯೂ ಇರಲಿ ಎಂದು ಹೇಳುವದನ್ನು ಕೇಳಿದೆನು.**

**ಪ್ರಕಟನೆ 15:8 ದೇವರ ತೇಜಸ್ಸಾನ್ನಿಧ್ಯದಿಂದಲೂ ಆತನ ಶಕ್ತಿಯಿಂದಲೂ ಉಂಟಾದ ಹೊಗೆಯಿಂದ ಪವಿತ್ರ ಸ್ಥಾನವು ತುಂಬಿದ ಕಾರಣ...**

**ಪ್ರಕಟನೆ 19:1 ಇದಾದ ಮೇಲೆ ಪರಲೋಕದಲ್ಲಿ ದೊಡ್ಡ ಗುಂಪಿನ ಮಹಾ ಶಬ್ದವೋ ಎಂಬಂತೆ ಒಂದು ಶಬ್ದವನ್ನು ಕೇಳಿದೆನು. ಅವರು ಹಲ್ಲೆಲ್ಲೂಯಾ ಜಯವೂ ಪ್ರಭಾವವೂ ಶಕ್ತಿಯೂ ನಮ್ಮ ದೇವರಲ್ಲಿ ಉಂಟು!**

ನಾವು ಮಹಿಮೆಯ ಮಂಡಲಕ್ಕೆ ಹೋಗುವಾಗ, ಅಧಿಕ ಶಕ್ತಿಯಲ್ಲಿ ಕಾರ್ಯಮಾಡಬಹುದೆಂದು ನಾವು ನಿರೀಕ್ಷಿಸಬಹುದು.

## ಮಹಿಮಾಸ್ವರೂಪನಾದ ದೇವರು

### ತಂದೆ

* *ಆತನ ಮಹಿಮೆಯಲ್ಲಿ ದೊಡ್ಡವನು*

ದೇವರ ಮಹಿಮೆಯ ಶ್ರೇಷ್ಠತೆಯ ಬಗ್ಗೆ ದಾವೀದನು ಬರೆದನು.

**ಕೀರ್ತನೆ 138:5 ಯೆಹೋವನ ಪ್ರಭಾವವು ದೊಡ್ಡದಾಗಿದೆಯಲ್ಲಾ.**

* *ಪ್ರಭಾವಸ್ವರೂಪನಾದ ತಂದೆ*

ಅಪೊಸ್ತಲನಾದ ಪೌಲನು ಆತನನ್ನು ಪ್ರಭಾವಸ್ವರೂಪನಾದ ತಂದೆ ಎಂದು ಕರೆದನು.

**ಎಫೆಸ 1:17 ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇವರೂ ಪ್ರಭಾವಸ್ವರೂಪನಾದ ತಂದೆಯೂ ಆಗಿರುವಾತನು ತನ್ನ ವಿಷಯವಾಗಿ ತಿಳುವಳಿಕೆಯನ್ನು ಕೊಟ್ಟು ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥಗಳನ್ನು ತಿಳುಕೊಳ್ಳುವ ಜ್ಞಾನವುಳ್ಳ ಆತ್ಮವನ್ನು ನಿಮಗೆ ದಯಪಾಲಿಸಬೇಕೆಂದು ಪ್ರಾರ್ಥಿಸುತ್ತೇನೆ,**

* *ಪ್ರಭಾವಸ್ವರೂಪನಾದ ದೇವರು*

ಅಪೊಸ್ತಲರ ಕೃತ್ಯಗಳಲ್ಲಿ, ಆತನನ್ನು ಪ್ರಭಾವಸ್ವರೂಪನಾದ ದೇವರು ಎಂದು ಕರೆಯಲಾಗಿದೆ.

**ಅಪೊಸ್ತಲರ ಕೃತ್ಯಗಳು 7:2 ಕೇಳಿರಿ – ನಮ್ಮ ಮೂಲಪುರುಷನಾದ ಅಬ್ರಹಾಮನು ಖಾರಾನಿನಲ್ಲಿ ವಾಸಮಾಡಿದ್ದಕ್ಕಿಂತ ಮುಂಚೆ ಮೆಸೊಪೊತಾಮ್ಯದಲ್ಲಿದ್ದಾಗ ಪ್ರಭಾವಸ್ವರೂಪನಾದ ದೇವರು.**

ಪವಿತ್ರಾತ್ಮನು

* *ಮಹಿಮೆಯ ಆತ್ಮನು*

ಅಪೊಸ್ತಲನಾದ ಪೇತ್ರನು ಪವಿತ್ರಾತ್ಮನನ್ನು ಮಹಿಮೆಯ ಆತ್ಮನು ಎಂದು ಬರೆದಿದ್ದಾನೆ.

**1 ಪೇತ್ರ 4:14… ನೀವು ಕ್ರಿಸ್ತನ ಹೆಸರಿನ ನಿಮಿತ್ತ ನಿಂದೆಗೆ ಗುರಿಯಾದರೆ ಧನ್ಯರು. ತೇಜೋಮಯವಾದ ಆತ್ಮನಾಗಿರುವ ದೇವರಾತ್ಮನು ನಿಮ್ಮಲ್ಲಿ ನೆಲೆಗೊಂಡಿದ್ದಾನಲ್ಲಾ ….**

ಮಗನು

ಯೇಸುವನ್ನು ಮತ್ತು ಮಹಿಮೆಯನ್ನು ಸೂಚಿಸುವ ಹದಿನೈದು ವಾಕ್ಯಭಾಗಗಳಿವೆ.

* *ಮಹಿಮೆಯ ಅರಸನು*

ದಾವೀದನು ಯೇಸುವಿನ ಕುರಿತು ಮಹಿಮೆಯ ಅರಸನೆಂದು ಪ್ರವಾದಿಸಿದನು.

**ಕೀರ್ತನೆ 24:7 ದ್ವಾರಗಳೇ, ಉನ್ನತವಾಗಿರ್ರಿ; ಪುರಾತನವಾದ ಕದಗಳೇ, ತೆರೆದುಕೊಂಡಿರ್ರಿ; ಮಹಾಪ್ರಭಾವವುಳ್ಳ ಅರಸನು ಆಗಮಿಸುತ್ತಾನೆ.**

* *ಮಹಿಮೆಯ ನಿರೀಕ್ಷೆಗೆ ಆಧಾರಭೂತನು*

ನಮ್ಮಲ್ಲಿರುವ ಯೇಸು ಮಹಿಮೆಯ ನಿರೀಕ್ಷೆಗೆ ಆಧಾರಭೂತನಾಗಿದ್ದಾನೆ ಎಂದು ಅಪೊಸ್ತಲನಾದ ಪೌಲನು ಹೇಳಿದನು.

**ಕೊಲೊಸ್ಸೆ 1:27 ಅನ್ಯ ಜನಗಳ ವಿಷಯವಾದ ಈ ಮರ್ಮದ ಮಹಿಮಾತಿಶಯವು ಎಷ್ಟೇಂಬುದನ್ನು ದೇವರು ತನ್ನ ಜನರಿಗೆ ತಿಳಿಸಲಿಕ್ಕೆ ಮನಸ್ಸು ಮಾಡಿಕೊಂಡನು. ಈ ಮರ್ಮವು ಏನೆಂದರೆ**

ಕ್ರಿಸ್ತನು ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರಭೂತನಾಗಿರುವದೇ.

✱ *ಮಹಿಮೆಯುಳ್ಳ ಕರ್ತನು*

ಅಪೊಸ್ತಲನಾದ ಯಾಕೋಬನು ಯೇಸುವನ್ನು ಮಹಿಮೆಯುಳ್ಳ ಕರ್ತನು ಎಂದು ಉಲ್ಲೇಖಿಸಿದ್ದಾನೆ.

**ಯಾಕೋಬ 2:1 ನನ್ನ ಸಹೋದರರೇ ಪ್ರಭಾವವುಳ್ಳ ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ ಇಂಬಿಕೆಯಿಟ್ಟವರಾದ ನೀವು ಪಕ್ಷಪಾತಿಗಳಾಗಿರಬಾರದು.**

✱ *ಕಾಣಬಹುದಾದ ಮಹಿಮೆ*

**ಯೋಹಾನ 1:14 ಆ ವಾಕ್ಯವೆಂಬವನು ನರಾವತಾರವೆತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು. ನಾವು ಆತನ ಮಹಿಮೆಯನ್ನು ನೋಡಿದೆವು. ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ. ಆತನಿ ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು.**

✱ *ಅದ್ಭುತಗಳಲ್ಲಿ ಮಹಿಮೆಯು ತೋರ್ಪಟ್ಟಿತು*

ಯೇಸುವಿನ ಮಹಿಮೆಯು ಅದ್ಭುತಗಳಲ್ಲಿ ತೋರ್ಪಟ್ಟಿತು ಎಂದು ಅಪೊಸ್ತಲನಾದ ಯೋಹಾನನು ಹೇಳಿದನು.

**ಯೋಹಾನ 2:11 ಯೇಸು ಈ ಮೊದಲನೆಯ ಸೂಚಕಕಾರ್ಯವನ್ನು ಗಲಿಲಾಯದ ಕಾನಾ ಊರಿನಲ್ಲಿ ಮಾಡಿ ತನ್ನ ಮಹಿಮೆಯನ್ನು ತೋರ್ಪಡಿಸಿದನು. ಮತ್ತು ಆತನ ಶಿಷ್ಯರು ಆತನಲ್ಲಿ ನಂಬಿಕೆಯಿಟ್ಟರು.**

✱ *ಬೆಳಕು ಮತ್ತು ಮಹಿಮೆ*

ಯೇಸು ಬೆಳಕೂ ಮತ್ತು ಮಹಿಮೆಯೂ ಆಗಿದ್ದಾನೆ.

**ಪ್ರಕಟಣೆ 21:23-26 ಪಟ್ಟಣಕ್ಕೆ ಬೆಳಕನ್ನು ಕೊಡುವದಕ್ಕಾಗಿ ಸೂರ್ಯನಾಗಲಿ ಚಂದ್ರನಾಗಲಿ ಬೇಕಾಗಿಲ್ಲ. ಅದಕ್ಕೆ ದೇವರ ಪ್ರಭಾವವೇ ಬೆಳಕನ್ನು ಕೊಟ್ಟಿತು. ಯಜ್ಞದ ಕುರಿಯಾದಾತನು ಅದರ ದೀಪವು. ಅದರ ಬೆಳಕಿನಿಂದ ಸರ್ವಜನಾಂಗದವರು ಸಂಚಾರಮಾಡುವರು. ಭೂರಾಜರು ತಮ್ಮ ವೈಭವವನ್ನು ಅಲ್ಲಿಗೆ**

ತರುವರು. ಅದರ ಬಾಗಿಲುಗಳನ್ನು ಹಗಲಿನಲ್ಲಿ ಮುಚ್ಚುವದೇ ಇಲ್ಲ. ರಾತ್ರಿಯಂದೂ ಅಲ್ಲಿಲ್ಲ. ಜನಾಂಗಗಳ ವೈಭವವೂ ಘನವೂ ಅಲ್ಲಿಗೆ ಬರುವವು.

* *ಮಹಿಮೆಯ ತಿಳಿವಳಿಕೆ*

ಆತನ ಮಹಿಮೆಯ ಜ್ಞಾನವನ್ನು ನಮಗೆ ದಯಪಾಲಿಸಲು ದೇವರು ನಮ್ಮ ಹೃದಯದಲ್ಲಿ ತನ್ನ ಬೆಳಕನ್ನು ಹೊಳೆಯುವಂತೆ ಮಾಡಿದನು.

**2 ಕೊರಿಂಥ 4:6 ಯಾಕಂದರೆ ಕತ್ತಲೆಯೊಳಗಿಂದ ಬೆಳಕು ಹೊಳೆಯಲಿ ಎಂದು ಹೇಳಿದ ದೇವರು ತಾನೇ ಯೇಸು ಕ್ರಿಸ್ತನ ಮುಖದಲ್ಲಿ ತೋರುವ ದೇವಪ್ರಭಾವ ಜ್ಞಾನವೆಂಬ ಪ್ರಕಾಶವು ಅನೇಕರಿಗೆ ಉಂಟಾಗುವದಕ್ಕಾಗಿ ನಮ್ಮ ಹೃದಯಗಳಲ್ಲಿ ಹೊಳೆದನು.**

* *ಮಹಿಮೆಯ ಪ್ರಕಾಶ*

ಯೇಸು ತಂದೆಯಾದ ದೇವರ ಮಹಿಮೆಯ ಪ್ರಕಾಶವಾಗಿದ್ದಾನೆ.

**ಇಬ್ರಿಯ 1:1-3 ಪುರಾತನ ಕಾಲದಲ್ಲಿ ನಮ್ಮ ಪಿತೃಗಳ ಸಂಗಡ ಪ್ರವಾದಿಗಳ ಬಾಯಿಂದ ಭಾಗ ಭಾಗವಾಗಿಯೂ ವಿಧ ವಿಧವಾಗಿಯೂ ಮಾತಾಡಿದ ದೇವರು ಈ ಅಂತ್ಯ ದಿನಗಳಲ್ಲಿ ನಮ್ಮ ಸಂಗಡ ಮಗನ ಮುಖಾಂತರ ಮಾತಾಡಿದ್ದಾನೆ. ಈತನನ್ನು ಎಲ್ಲದಕ್ಕೂ ಬಾಧ್ಯನನ್ನಾಗಿ ನೇಮಿಸಿದನು. ಈತನ ಮೂಲಕವೇ ಜಗತ್ತನ್ನು ಉಂಟುಮಾಡಿದನು. ಈತನು ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ತನ್ನ ಶಕ್ತಿಯ ವಾಕ್ಯದಿಂದ ಸಮಸ್ತಕ್ಕೆ ಆಧಾರವೂ ಆಗಿದ್ದು ಪಾಪವಿಶುದ್ಧಿ ಮಾಡಿದ ಮೇಲೆ ಉನ್ನತ ಲೋಕದೊಳಗೆ ಮಹತ್ವವುಳ್ಳ ದೇವರ ಬಲಗಡೆಯಲ್ಲಿ ಆಸನಾರೂಡನಾದನು.**

* *ರೂಪಾಂತರ*

ಯೇಸುವನ್ನು ಮಹಿಮೆಯೊಡನೆ ರೂಪಾಂತರಗೊಂಡನು.

**ಲೂಕ 9:28-32 ಯೇಸು ಈ ಮಾತುಗಳನ್ನು ಕೇಳಿ ಸುಮಾರು ಎಂಟು ದಿವಸಗಳಾದ ಮೇಲೆ ಪೇತ್ರ ಯೋಹಾನ ಯಾಕೋಬರನ್ನು ಕರಕೊಂಡು ಪ್ರಾರ್ಥನೆಮಾಡುವದಕ್ಕೆ ಬೆಟ್ಟವನ್ನು ಹತ್ತಿದನು. ಆತನು ಪ್ರಾರ್ಥನೆ ಮಾಡುತ್ತಿರಲಾಗಿ ಆತನ ಮುಖಭಾವವು**

**ಬೇರೆಯಾಯಿತು. ಆತನ ಉಡುಪು ಬೆಳ್ಳಗಾಗಿ ಮಿಂಚುತ್ತಾ ಬಂತು. ಇದಲ್ಲದೆ ಇಬ್ಬರು ಪುರುಷರು ಆತನ ಸಂಗಡ ಮಾತಾಡುತ್ತಿದ್ದರು. ಇವರು ಯಾರಂದರೆ ಮೋಶೆಯೂ ಎಲೀಯನೂ. ಇವರು ವೈಭವದೊಡನೆ ಕಾಣಿಸಿಕೊಂಡು ಯೆರೂಸಲೇಮಿನಲ್ಲಿ ಆತನು ನೆರವೇರಿಸಬೇಕಾಗಿದ್ದ ಮರಣದ ವಿಷಯವಾಗಿ ಮಾತಾಡುತ್ತಿದ್ದರು. ಇಷ್ಟರಲ್ಲಿ ಪೇತ್ರನಿಗೂ ಅವನ ಸಂಗಡ ಇದ್ದವರಿಗೂ ನಿದ್ರೆಯಿಂದ ಮೈಭಾರವಾಗಿತ್ತು. ಆದರೆ ಎಚ್ಚರವಾದ ಮೇಲೆ ಅವರು ಆತನ ಮಹಿಮೆಯನ್ನೂ ಆತನ ಸಂಗಡ ನಿಂತಿದ್ದ ಆ ಇಬ್ಬರು ಪುರುಷರನ್ನೂ ಕಂಡರು.**

✱ *ಪುನರುತ್ಥಾನ*

ಯೇಸು ಪವಿತ್ರಾತ್ಮನ ಶಕ್ತಿಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟನು, ಮತ್ತು ಅಪೊಸ್ತಲನಾದ ಪೌಲನು ಇದನ್ನು ತಂದೆಯ ಮಹಿಮೆ ಎಂದು ಸೂಚಿಸಿದನು.

**ರೋಮಾಪುರ 6:4 ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು.**

✱ *ಯೇಸು ಮಹಿಮೆಯಲ್ಲಿ ಬರುತ್ತಾನೆ*

ಯೇಸು ಮಹಿಮೆಯಿಂದ ಹಿಂದಿರುಗಿ ಬರುವನು ಎಂದು ಲೂಕನು ಬರೆದನು.

**ಲೂಕ 21:27 ಆಗ ಮನುಷ್ಯಕುಮಾರನು ಬಲದಿಂದಲೂ ಬಹು ಮಹಿಮೆಯಿಂದಲೂ ಮೇಘದಲ್ಲಿ ಬರುವದನ್ನು ಕಾಣುವರು.**

✱ *ಆತನ ಪರಿಪೂರ್ಣತೆಯಲ್ಲಿ ಮಹಿಮೆಯು ಪ್ರಕಟವಾಗಿದೆ*

ಜ್ಞಾನ, ಶಕ್ತಿ, ತಿಳಿವಳಿಕೆ, ಕರುಣೆ, ನ್ಯಾಯತೀರ್ಪು ಮತ್ತು ಪ್ರೀತಿ ಎಂಬಂಥ ಆತನ ಪರಿಪೂರ್ಣವಾದ ಪ್ರತಿಯೊಂದು ವಿಷಯದಲ್ಲೂ ದೇವರ ಮಹಿಮೆಯು ಪ್ರಕಟವಾಗಿದೆ. ದೇವರ ಮಹಿಮೆಯ ಎಂಬುದು ಕರ್ತನ ಗೌರವ, ಘನತೆ ಮತ್ತು ತೇಜಸ್ಸನ್ನು ಸೂಚಿಸುತ್ತದೆ.

ದಾನಿಯೇಲನು ಇದನ್ನು ಕಂಡನು.

**ದಾನಿಯೇಲ 7:9,10 ನಾನು ನೋಡುತ್ತಿದ್ದ ಹಾಗೆ ನ್ಯಾಯಾಸನಗಳು ಹಾಕಲ್ಪಟ್ಟವು, ಮಹಾ ವೃದ್ಧನೊಬ್ಬನು ಆಸೀನನಾದನು; ಆತನ ಉಡುಪು ಹಿಮದಂತೆ ಶುಭ್ರವಾಗಿತ್ತು, ಆತನ ತಲೆಯ ಕೂದಲು ನಿರ್ಮಲವಾದ ಬಿಳಿಯ ಉಣ್ಣೆಯಂತಿತ್ತು; ಆತನ ನ್ಯಾಯಾಸನವು ಅಗ್ನಿಜ್ವಾಲೆಗಳು, ಅದರ ಚಕ್ರಗಳು ಧಗಧಗಿಸುವ ಬೆಂಕಿಯೇ. ನ್ಯಾಯಾಸನದ ಮುಂದೆ ಉರಿಯ ಪ್ರವಾಹವು ಉಕ್ಕಿ ಹರಿದುಬಂತು; ಲಕ್ಷೋಪಲಕ್ಷ ದೂತರು ಆತನನ್ನು ಸೇವಿಸುತ್ತಿದ್ದರು, ಕೋಟ್ಯಾನುಕೋಟಿ ಕಿಂಕರರು ಆತನ ಮುಂದೆ ನಿಂತುಕೊಂಡಿದ್ದರು; ನ್ಯಾಯಸಭೆಯವರು ಕೂತುಕೊಂಡರು, ಪುಸ್ತಕಗಳು ತೆರೆಯಲ್ಪಟ್ಟವು.**

**ವಚನಗಳು. 13,14 ನಾನು ಕಂಡ ರಾತ್ರಿಯ ಕನಸಿನಲ್ಲಿ ಇಗೋ, ಮನುಷ್ಯಕುಮಾರ ನಂತಿರುವವನು ಆಕಾಶದ ಮೇಘಗಳೊಂದಿಗೆ ಬಂದು ಆ ಮಹಾವೃದ್ಧನನ್ನು ಸಮೀಪಿಸಿದನು, ಅವನನ್ನು ಆತನ ಸನ್ನಿಧಿಗೆ ತಂದರು. ಸಕಲ ಜನಾಂಗ ಕುಲ ಭಾಷೆಗಳವರು ಅವನನ್ನು ಸೇವಿಸಲೆಂದು ಅವನಿಗೆ ದೊರೆತನವೂ ಘನತೆಯೂ ರಾಜ್ಯವೂ ಕೊಡೋಣವಾದವು; ಅವನ ಆಳಿಕೆಯು ಅಂತ್ಯವಿಲ್ಲದ್ದು, ಶಾಶ್ವತವಾದದ್ದು; ಅವನ ರಾಜ್ಯವು ಎಂದಿಗೂ ಅಳಿಯದು.**

## ದೇವದೂತರು ದೇವರ ಮಹಿಮೆಯನ್ನು ಪ್ರದರ್ಶಿಸುತ್ತಾರೆ

ಆತನ ಮಹಿಮೆಯನ್ನು ಪ್ರದರ್ಶಿಸಲು ದೇವದೂತರನ್ನು ಸೃಷ್ಟಿಸಲಾಗಿದೆ.

**ಪ್ರಕಟಣೆ 18:1 ಇದಾದ ಮೇಲೆ ಮಹಾ ಅಧಿಕಾರವುಳ್ಳ ಮತ್ತೊಬ್ಬ ದೇವದೂತನು ಪರಲೋಕದಿಂದ ಇಳಿಯುವದನ್ನು ಕಂಡೆನು. ಅವನ ಪ್ರಭಾವದಿಂದ ಭೂಮಿಗೆ ಪ್ರಕಾಶವುಂಟಾಯಿತು.**

**ಲೂಕ 2:9 ಕರ್ತನ ದೂತನೊಬ್ಬನು ಬಂದು ಅವರ ಎದುರಿನಲ್ಲಿ ನಿಂತನು. ಕರ್ತನ ಪ್ರಭೆಯು ಅವರ ಸುತ್ತಲು ಪ್ರಕಾಶಿಸಿತು; ಅವರು ಬಹಳವಾಗಿ ಹೆದರಿದರು.**

## ಮಹಿಮೆಗಾಗಿ ಸೃಷ್ಟಿಸಲ್ಪಟ್ಟಿದ್ದೇವೆ

ಆದಾಮ ಹವ್ವರನ್ನು ದೇವರ ಮಹಿಮೆಗಾಗಿ ಸೃಷ್ಟಿಸಲಾಗಿತ್ತು. ಅವರಿಗೆ ಆತನ ಮಹಿಮಾ ವಸ್ತ್ರವನ್ನು ಹೊದಿಸಲಾಗಿತ್ತು ಮತ್ತು ಅವರು ಈ

ಭೂಮಿಯಲ್ಲಿ ಆತನ ಮಹಿಮಾನ್ವಿತವಾದ ಪರಿಪೂರ್ಣತೆಗಳ ಗುಣಗಾನ ಮಾಡಬೇಕಾಗಿತ್ತು.

ಅವರು ಪಾಪ ಮಾಡಿದಾಗ, ಅವರು ಆತ್ಮಿಕವಾಗಿ ಸತ್ತುಹೋದರು, ಮಹಿಮೆಯು ಅವರನ್ನು ಬಿಟ್ಟುಹೋಯಿತು. ಅವರು ಮಹಿಮಾ ವಸ್ತ್ರವನ್ನು ಕಳೆದುಕೊಂಡರು; ಅವರು ಬೆತ್ತಲೆಯಾಗಿದ್ದರಿಂದ ಅವರು ನಾಚಿಕೆಪಟ್ಟು ದೇವರಿಗೆ ಕಾಣದಂತೆ ಬಚ್ಚಿಟ್ಟುಕೊಂಡರು.

**ರೋಮಾಪುರ 3:23 ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೇ ಹೋಗಿದ್ದಾರೆ.**

ದೇವರು ಮನುಷ್ಯರನ್ನು ಈ ಅವಸ್ಥೆಯಲ್ಲಿ ಬಿಟ್ಟುಬಿಡಲಿಲ್ಲ. ಕ್ರಿಸ್ತನಲ್ಲಿ ಎಲ್ಲರೂ ಜೀವಿತರನ್ನಾಗಿ ಮಾಡಲಾಯಿತು ಎಂದು ಅಪೊಸ್ತಲನಾದ ಪೌಲನು ಹೇಳುತ್ತಾನೆ.

**1 ಕೊರಿಂಥ 15:22 ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು.**

## ಪುತ್ರರನ್ನು ಮಹಿಮೆಗೆ ಸೇರಿಸುತ್ತಾನೆ

ಯೇಸು ತನ್ನ ಮರಣದ ಮೂಲಕ ಅನೇಕ ಗಂಡು ಮತ್ತು ಹೆಣ್ಣು ಮಕ್ಕಳನ್ನು ಮಹಿಮೆಗೆ ಸೇರಿಸುತ್ತಿದ್ದಾನೆ. ನಮ್ಮ ಸೃಷ್ಟಿಕರ್ತನಾಗಿರುವ, ಆತನು ನಮ್ಮನ್ನು ಯಾವ ಉದ್ದೇಶಕ್ಕಾಗಿ ಸೃಷ್ಟಿಸಲಾಯಿತೋ ಆ ಉದ್ದೇಶಕ್ಕೆ ನಮ್ಮನ್ನು ಪುನಃಸ್ಥಾಪಿಸುತ್ತಿದ್ದಾನೆ.

**ಇಬ್ರಿಯ 2:9-10 ಆದರೂ ದೇವದೂತರಿಗಿಂತ ಸ್ವಲ್ಪ ಕಡಿಮೆಯಾಗಿ ಮಾಡಲ್ಪಟ್ಟ ಒಬ್ಬಾತನು ಅಂದರೆ ಯೇಸುವು ಪ್ರಭಾವವನ್ನೂ ಮಾನವನ್ನೂ ಕಿರೀಟವಾಗಿ ಹೊಂದಿರುವದನ್ನು ನಾವು ನೋಡುತ್ತೇವೆ. ಮೃತಪಟ್ಟದ್ದರಿಂದಲೇ ಮಾನ ಪ್ರಭಾವಗಳನ್ನು ಹೊಂದಿದನು. ಆತನು ದೇವರ ಕೃಪೆಯಿಂದ ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಲೇ ಬೇಕಾಗಿತ್ತು. ಸಮಸ್ತವು ಯಾವನಿಗೋಸ್ಕರವೂ ಯಾವನಿಂದಲೂ ಉಂಟಾಯಿತೋ ಆತನು ಬಹು ಮಂದಿ ಪುತ್ರರನ್ನು ಪ್ರಭಾವಕ್ಕೆ ಸೇರಿಸುವಲ್ಲಿ ಅವರ ರಕ್ಷಣಾ ಕರ್ತನನ್ನು ಬಾಧೆಗಳ ಮೂಲಕ ಸಿದ್ಧಿಗೆ ತರುವದು ಆತನಿಗೆ ಯುಕ್ತವಾಗಿತ್ತು.**

ವಿಶ್ವಾಸಿಯಾಗಿರುವ ಪ್ರತಿಯೊಬ್ಬನೂ ದೇವರ ಮಹಿಮೆಯನ್ನು ಪ್ರದರ್ಶಿಸುವುದಕ್ಕಾಗಿ ಸೃಷ್ಟಿಸಲ್ಪಟ್ಟಿದ್ದಾನೆ.

**ಯೆಶಾಯ 43:7 ನನ್ನ ಮಹಿಮೆಗಾಗಿ ನಾನು ಸೃಷ್ಟಿಸಿ ರೂಪಿಸಿ ಉಂಟು ಮಾಡಿದ ನನ್ನ ಹೆಸರಿನವರೆಲ್ಲರನ್ನೂ ಬರಮಾಡಬೇಕೆಂದು ಅಪ್ಪಣೆಕೊಡುವೆನು.**

ನಾವು ಆತನ ಮಹಿಮೆಯನ್ನು ಪ್ರಖ್ಯಾತಿಪಡಿಬೇಕು.

**ಎಫೆಸ 1:11,12 ಕ್ರಿಸ್ತನಲ್ಲಿಯೇ ಸಮಸ್ತವು ಒಂದಾಗುವದು ಇದಲ್ಲದೆ ಆತನಲ್ಲಿ ನಾವು ದೇವರ ಸ್ವಕೀಯ ಪ್ರಜೆಯಾದೆವು. ಬರಬೇಕಾದ ಕ್ರಿಸ್ತನನ್ನು ಎದುರುನೋಡುತ್ತಿದ್ದ ನಾವು ತನ್ನ ಮಹಿಮೆಯನ್ನು ಪ್ರಖ್ಯಾತಿಪಡಿಸಬೇಕೆಂದು ಸಮಸ್ತ ಕಾರ್ಯಗಳನ್ನು ತನ್ನ ಇಷ್ಟದಂತೆ ನಡಿಸುವ ದೇವರು ತನ್ನ ಸಂಕಲ್ಪೊ ಮೇರೆಗೆ ನಮ್ಮನ್ನು ಆದಿಯಲ್ಲಿಯೇ ಆರಿಸಿಕೊಂಡನು.**

ಮಣ್ಣಿನ ಘಟಕಗಳು

ದೇವರು ತನ್ನ ಮಹಿಮೆಯನ್ನು, ಆತನ ಮಣ್ಣಿನ ಘಟಕಗಳಾದ ನಮ್ಮ ಮೂಲಕ ಇತರರಿಗೆ ಪ್ರಕಟಪಡಿಸಲು ನಿರ್ಧರಿಸಿದ್ದಾನೆ.

ಯೆಶಾಯನು ಇದರ ಕುರಿತು ಹೀಗೆ ಬರೆದನು:

**ಯೆಶಾಯ 60:1,2 ಏಳು, ಪ್ರಕಾಶಿಸು, ನಿನಗೆ ಬೆಳಕು ಬಂತು, ಯೆಹೋವನ ತೇಜಸ್ಸು ನಿನ್ನ ಮೇಲೆ ಉದಯಿಸಿದೆ. ಇಗೋ, ಕತ್ತಲು ಭೂಮಿಯನ್ನು ಆವರಿಸಿದೆ, ಕಾರ್ಗತ್ತಲು ಜನಾಂಗಗಳನ್ನು ಮುಚ್ಚಿದೆ; ನಿನ್ನ ಮೇಲಾದರೋ ಯೆಹೋವನು ಉದಯಿಸುವನು, ಆತನ ತೇಜಸ್ಸು ನಿನ್ನಲ್ಲಿ ಕಾಣಿಸುವದು.**

ಮತ್ತು ಅಪೊಸ್ತಲನಾದ ಪೌಲನು ಅದರ ಕುರಿತು ಇನ್ನೂ ಹೆಚ್ಚಾಗಿ ಹೇಳಿದ್ದಾನೆ.

**2 ಕೊರಿಂಥ 4:6,7 ಯಾಕಂದರೆ ಕತ್ತಲೆಯೊಳಗಿಂದ ಬೆಳಕು ಹೊಳೆಯಲಿ ಎಂದು ಹೇಳಿದ ದೇವರು ತಾನೇ ಯೇಸು ಕ್ರಿಸ್ತನ ಮುಖದಲ್ಲಿ ತೋರುವ ದೇವಪ್ರಭಾವ ಜ್ಞಾನವೆಂಬ ಪ್ರಕಾಶವು ಅನೇಕರಿಗೆ ಉಂಟಾಗುವದಕ್ಕಾಗಿ ನಮ್ಮ ಹೃದಯಗಳಲ್ಲಿ ಹೊಳೆದನು.**

**ಬಲಾಧಿಕ್ಯವು ದೇವರದೇ ಹೊತು ನಮ್ಮೊಳಗಿಂದ ಬಂದದಲ್ಲವೆಂದು ತೋರುವದಕ್ಕಾಗಿ ಈ ನೀಕ್ಷೇಪವು ಮಣ್ಣಿನ ಘಟಕಗಳಲ್ಲಿ ನಮಗುಂಟು.**

**ಮಹಿಮೆಯ ಮೂರು ಹಂತಗಳು**

ನಾವು ಮಹಿಮೆಯ ಮೂರು ಹಂತಗಳನ್ನು ಕಾಣುತ್ತೇವೆ.

**ಮಹಿಮೆ** - ಇಂದು ಅನೇಕರು ಆತನ ಮಹಿಮೆಯನ್ನು ಬಹು ಸಂತೋಷದೊಂದಿಗೆ ಮತ್ತು ಅದ್ಭುತಕರವಾದ ಸೂಚನೆಗಳೊಂದಿಗೆ ಅನುಭವಿಸುತ್ತಿದ್ದಾರೆ.

**ಅಪಾರವಾದ ಮಹಿಮೆ** - ನಾವು ಇಂದು ಕೆಲವೊಮ್ಮೆ ಇದರೆಡೆಗೆ ಹೋಗುತ್ತಿದ್ದೇವೆ. ಇದು ಮಹಿಮೆಯ ಅಪಾರವಾದ ಹಂತವಾಗಿದೆ, ಇದರಲ್ಲಿ ನಾವು ಮಹಿಮೆಯ ಅಪಾರವಾದ ಮತ್ತು ಅತಿಶಯವಾದ ಸೂಚನೆಗಳನ್ನು ಅನುಭವಿಸುತ್ತೇವೆ.

**ಶ್ರೇಷ್ಠವಾದ ಮಹಿಮೆ** - ಇದು ಅಂತ್ಯಕಾಲದ ಮಹಿಮೆಯಾಗಿದೆ, ಇದರಲ್ಲಿ ನೀರು ಸಮುದ್ರವನ್ನು ತುಂಬಿರುವಂತೆ ಆತನ ಮಹಿಮೆಯ ಜ್ಞಾನವು ಭೂಮಿಯನ್ನೆಲ್ಲ ತುಂಬಿರುತ್ತದೆ. ಇದರಲ್ಲಿ ಯೇಸುವಿನ ಮಹಿಮೆಯು ನಮ್ಮಲ್ಲಿ ತೋರಿಬರುತ್ತದೆ.

ಅಪೊಸ್ತಲನಾದ ಪೌಲನು ಇದರ ಕುರಿತು ಹೀಗೆ ಬರೆದನು,

**2 ಕೊರಿಂಥ 3:18 ನಾವೆಲ್ಲರೂ ಮುಸುಕು ತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ. ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕನುಸಾರವಾದದ್ದೇ.**

ಯೇಸು, ತನ್ನ ಮಹಿಮೆಯ ಪೂರ್ಣ ತೋರ್ಪಡಿಸುವಿಕೆಗಳ ಮೂಲಕ ನಮ್ಮಲ್ಲಿ ಕಾಣಿಸಿಕೊಳ್ಳಬೇಕು ನಮ್ಮ ಬಯಕೆಯಾಗಿರಬೇಕು.

ನಮ್ಮನ್ನು ಆಶೀರ್ವದಿಸುವ ಮಹಿಮೆಯನ್ನು ಅನುಭವಿಸುವ ಬಯಕೆ ಮಾತ್ರವಲ್ಲ, ಆದರೆ ಎಲ್ಲ ಮನುಷ್ಯರನ್ನು ಆತನ ಬಳಿಗೆ ಸೆಳೆಯುವ ಮಹಿಮೆಯ ಮತ್ತು ಶಕ್ತಿಯ ಕುರಿತಾದ ಬಯಕೆಯು ಬರುತ್ತದೆ. ನಾವು ಸೃಷ್ಟಿಸಲ್ಪಟ್ಟಿರುವ ಉದ್ದೇಶವು ಅದೇ ಆಗಿದೆ.

### ಪರಾಮರ್ಶೆಗಾಗಿರುವ ಪ್ರಶ್ನೆಗಳು

1. ಕನಿಷ್ಠ ಮೂರು ವಚನಗಳನ್ನು ಉಪಯೋಗಿಸಿಕೊಂಡು ಮಹಿಮೆ ಬಗ್ಗೆ ನಿಮ್ಮ ಸ್ವಂತ ವಿವರಣೆಯನ್ನು ಬರೆಯಿರಿ.

2. ಸತ್ಯವೇದದಲ್ಲಿ ಶಕ್ತಿಯನ್ನು ಮತ್ತು ಮಹಿಮೆಯನ್ನು ಹೇಗೆ ಒಟ್ಟಾಗಿ ಸೇರಿಸಲಾಗಿದೆ?

3. ಮಹಿಮೆಗೆ ಸಂಬಂಧಿಸಿದಂತೆ ಯೇಸುವನ್ನು ಹೇಗೆ ವರ್ಣಿಸಲಾಗಿದೆ? ಮೂರು ಉದಾಹರಣೆಗಳನ್ನು ಕೊಡಿರಿ.

## ಪಾಠ 2

# ಮಹಿಮೆಗಾಗಿ ಪ್ರತ್ಯೇಕಿಸುವಿಕೆ

### ಒಳಗೆ ಬರುವುದಕ್ಕಾಗಿ ಹೊರಟು ಬನ್ನಿರಿ

ಅಪೊಸ್ತಲನಾದ ಪೌಲನು ಕೊರಿಂಥದವರಿಗೆ ಹೀಗೆ ಬರೆದನು,

**2 ಕೊರಿಂಥ 6:17 ಆದದರಿಂದ ಅನ್ಯಜನರ ಮಧ್ಯದಲ್ಲಿಂದ ಹೊರಟುಬಂದು ಪ್ರತ್ಯೇಕವಾಗಿರಿ. ಅಶುದ್ಧವಾದ ಯಾವುದನ್ನೂ ಮುಟ್ಟದಿರಿ ಎಂದು ಕರ್ತನು ಹೇಳುತ್ತಾನೆ.**

ನಾವು ದೇವರ ಮಹಿಮೆಯೊಳಕ್ಕೆ ಬರಲು ಬಯಸುವಾಗ, ನಮ್ಮನ್ನು ಹಿಡಿದ್ದಿಡುವ ಅನೇಕ ವಿಷಯಗಳಿವೆ ಅವುಗಳಿಂದ ಭೌತಿಕವಾದ ಪ್ರತ್ಯೇಕತೆಯು ಬೇಕಾಗುತ್ತದೆ.

ಇಬ್ರಿಯ ಪುಸ್ತಕದ ಗ್ರಂಥಕರ್ತನು ಹೀಗೆ ಬರೆದಿದ್ದಾನೆ,

**ಇಬ್ರಿಯ 12:1 ನಮಗೆ ಅಭ್ಯಂತರ ಮಾಡುವ ಎಲ್ಲಾ ಭಾರವನ್ನು ಹತ್ತಿಕೊಳ್ಳುವ ಪಾಪವನ್ನು ನಾವು ಸಹ ತೆಗೆದಿಟ್ಟು.**

ಇಬ್ರಿಯ ಪುಸ್ತಕದ ಬರಹಗಾರನು ಸೂಚಿಸುತ್ತಿರುವ ಭಾರಗಳು ಯಾವುವೆಂದರೆ ನಮ್ಮ ಕ್ರಿಯೆಗಳು, ಜೊತೆಗಾರರು ಮತ್ತು ಭಾವನೆಗಳು ಆಗಿರಬಹುದು.

### ಸೂಚಕಕಾರ್ಯಗಳ ಹೊಸ ಆರಂಭ

ಉರಿಯುವ ಪೊದೆಯಲ್ಲಿ ದೇವರು ಮೋಶೆಗೆ ಕಾಣಿಸಿಕೊಂಡಾಗ, ಅದು ಇಸ್ರಾಯೇಲ್ ಜನರಿಗೆ ಸೂಚಕಕಾರ್ಯಗಳ ಹೊಸ ಆರಂಭವಾಗಿತ್ತು.

**ವಿಮೋಚನಕಾಂಡ 3:2-3 ಅಲ್ಲಿ ಮುಳ್ಳಿನ ಪೊದೆಯೊಳಗೆ ಉರಿಯುವ ಬೆಂಕಿಯಲ್ಲಿ ಯೆಹೋವನ ದೂತನು ಅವನಿಗೆ ಕಾಣಿಸಿಕೊಂಡನು. ಹೇಗೆಂದರೆ ಅವನು ಒಂದು ಮುಳ್ಳಿನ ಪೊದೆಯನ್ನು ಕಂಡನು. ಆ ಪೊದೆಯು ಬೆಂಕಿಯಿಂದ ಉರಿಯುತ್ತಿದ್ದರೂ ಅದು ಸುಟ್ಟು ಹೋಗದೇ ಇತ್ತು. ಆಗ ಮೋಶೆ ನಾನು ದಾರಿಬಿಟ್ಟು ಈ ಆಶ್ಚರ್ಯವನ್ನು ನೋಡಿ ಪೊದೆಯು ಸುಟ್ಟು ಹೋಗದೆ ಇರುವದಕ್ಕೆ ಕಾರಣವನ್ನು ತಿಳುಕೊಳ್ಳುವೆನು ಅಂದುಕೊಂಡು.**

ಈ ಅದ್ಭುತದ ನಂತರ ಐಗುಪ್ತ ಜನರ ಮೇಲೆ ಹತ್ತು ಬಾಧೆಗಳು ಬಂದವು. ಅನಂತರ ದೇವರು ಕೆಂಪು ಸಮುದ್ರವನ್ನು ಹೇಗೆ ಇಬ್ಭಾಗಿಸಿದನು ಮತ್ತು ಇಸ್ರಾಯೇಲ್ ಜನರನ್ನು ಐಗುಪ್ತದಿಂದ ಬಿಡುಗಡೆ ಮಾಡಿದನು; ಮೇಘವು ಅರಣ್ಯದಲ್ಲಿ ಹೇಗೆ ಹಗಲಿನಲ್ಲಿ ನೆರಳನ್ನು ಮತ್ತು ರಾತ್ರಿಯಲ್ಲಿ ಬೆಚ್ಚಗಿರುವಿಕೆಗಾಗಿ ಬೆಂಕಿಯನ್ನು ಒದಗಿಸುವ ಮೂಲಕ ಅವರನ್ನು ನಡೆಸಿತು ಎಂಬುದಾಗಿ ನಾವು ಓದುತ್ತೇವೆ. ದೇವರು ಅವರಿಗೆ ನೀರು ಮತ್ತು ಆಹಾರವನ್ನು ಒದಗಿಸಿದನು. ಅವರ ಇಡೀ ಪ್ರಯಾಣವು ಅದ್ಭುತಗಳಿಂದ ಕೂಡಿತ್ತು.

ಆದರೆ ದೇವರು ಧರ್ಮಶಾಸ್ತ್ರವನ್ನು ಕೊಡುವುದಕ್ಕಾಗಿ ಮೋಶೆಯನ್ನು ಸೀನಾಯಿ ಬೆಟ್ಟದೆಡೆಗೆ ಕರೆಯಿಸಿಕೊಂಡಾಗ, ಜನರು ಕೇಳುವಂತೆಯೂ ಮತ್ತು ನಂಬುವಂತೆಯೂ ವಿಶೇಷವಾದ ಸೂಚಕಕಾರ್ಯಗಳನ್ನು ಕೊಡಲಾಗುವುದು ಎಂದು ದೇವರು ಹೇಳಿದನು.

ದೇವರು ಮೇಘದೊಳಗಿನಿಂದ ಮಾತನಾಡುತ್ತಾನೆ

**ವಿಮೋಚನಕಾಂಡ 19:9 ಯೆಹೋವನು ಮೋಶೆಗೆ ಇಗೋ ನಾನು ನಿನ್ನ ಸಂಗಡ ಮಾತಾಡುವಾಗ ಜನರು ಕೇಳಿ ಯಾವಾಗಲೂ ನಿನ್ನನ್ನು ನಂಬುವಂತೆ ನಾನು ಕಾರ್ಮುಗಿಲಲ್ಲಿ ನಿನ್ನ ಬಳಿಗೆ ಬರುವೆನು ಎಂದು ಹೇಳಿದನು.**

ಗುಡುಗುಗಳು - ಮಿಂಚುಗಳು -

ಕಾರ್ಮುಗಿಲು - ತುತ್ತೂರಿಯ ಧ್ವನಿ -

ಹೊಗೆ - ಬೆಂಕಿ - ಕಂಪನ

ಸೂಚಕಕಾರ್ಯಗಳು ನಡೆಯುವಾಗ, ದೇವರು ಬೆಟ್ಟದ ಮೇಲಿದ್ದಾನೆ ಮತ್ತು ಆತನು ಮೋಶೆಯೊಂದಿಗೆ ಮಾತನಾಡುತ್ತಿದ್ದಾನೆ ಎಂಬುದರ ಬಗ್ಗೆ ಜನರ ಮನಸ್ಸಿನಲ್ಲಿ ಯಾವುದೇ ಸಂದೇಹವಿರಲಿಲ್ಲ. ಅವರು ನಂಬುವಂತೆ ಇದನ್ನೆಲ್ಲ ಮಾಡಿದೆನು ಎಂದು ದೇವರು ಮೋಶೆಗೆ ಹೇಳಿದನು.

**ವಿಮೋಚನಕಾಂಡ 19:16 ಮೂರನೆಯ ದಿನದಲ್ಲಿ ಸೂರ್ಯೋದಯವಾಗುವಾಗ ಆ ಬೆಟ್ಟದ ಮೇಲೆ ಗುಡುಗು ಮಿಂಚೂ ಕಾರ್ಮುಗಿಲೂ ತುತೂರಿ ಮಹಾಧ್ವನಿಯೂ ಉಂಟಾಗಲು ಪಾಳೆಯಲ್ಲಿದ್ದ ಜನರೆಲ್ಲರೂ ನಡುಗಿದರು.**

**ವಚನ. 18 ಯೆಹೋವನು ಬೆಂಕಿಯೊಳಕ್ಕೆ ಸೀನಾಯಿ ಬೆಟ್ಟದ ಮೇಲಕ್ಕೆ ಇಳಿದು ಬಂದದ್ದರಿಂದ ಆ ಬೆಟ್ಟವೆಲ್ಲಾ ಹೊಗೆಯಿಂದ ಆವರಿಸಿಕೊಂಡಿತು. ಆ ಹೊಗೆ ಆವಿಗೆಯ ಹೊಗೆಯಂತೆ ಏರಿತು. ಅದಲ್ಲದೆ ಬೆಟ್ಟವೆಲ್ಲಾ ಬಹಳವಾಗಿ ಕಂಪಿಸಿತು.**

ಜನರ ಪ್ರತಿಕ್ರಿಯೆ

ಇಸ್ರಾಯೇಲ್ ಜನರು ಕಂಡದೆಲ್ಲದರ ಬಗ್ಗೆ ಒಮ್ಮೆ ಯೋಚಿಸಿ ನೋಡಿರಿ. ಐಗುಪ್ತದವರ ಮೇಲೆ ಬಂದ ಬಾಧೆಗಳು. ಅಸಾಧಾರಣವಾಗಿ ಕೆಂಪು ಸಮುದ್ರವನ್ನು ಇಬ್ಭಾಗ ಮಾಡಿದ್ದು. ಅಸಾಧಾರಣವಾಗಿ ನೀರನ್ನು ಒದಗಿಸಿದ್ದು, ಮತ್ತು ಈಗ ಗುಡುಗು, ಮಿಂಚು, ಕಾರ್ಮುಗಿಲು, ಹೊಗೆ, ತುತ್ತೂರಿ ಧ್ವನಿ, ಮತ್ತು ಬೆಟ್ಟದ ಕಂಪನ ಉಂಟಾಗಿದ್ದು. ದೇವರು ಇದ್ದಾನೆ ಎಂಬುದನ್ನು ಇವೆಲ್ಲವು ಸಾಬೀತುಪಡಿಸಿದ್ದರೂ ಸಹ, ಆತನು ಅವರ ಪರವಾಗಿ ನಿರಂತರವಾಗಿ ಅದ್ಭುತಗಳನ್ನು ಮಾಡಿದನು. ಜನರು ಬಂಗಾರದ ಹೋರಿಯನ್ನು ಮಾಡಿ ಅದಕ್ಕೆ ಅಡ್ಡಬಿದ್ದು ಅದನ್ನು ಪೂಜಿಸಿದರು. ಎಂಥ ಅವಿವೇಕತನ!

**ವಿಮೋಚನಕಾಂಡ 32:4 ಅವನು ಆ ಚಿನ್ನವನ್ನು ತನ್ನ ವಶಕ್ಕೆ ತೆಗೆದುಕೊಂಡು ಬಸವನ ಆಕಾರವನ್ನು ಉಳಿಯಿಂದ ರೂಪಿಸಿ ಎರಕ ಹೊಯಿಸಲಾಗಿ ಅವರು ಇಸ್ರಾಯೇಲ್ಯರೇ ನೋಡಿರಿ. ಇದೇ ನಿಮ್ಮನ್ನು ಐಗುಪ್ತದೇಶದಿಂದ ಕರಕೊಂಡು ಬಂದ ದೇವರು ಎಂದು ಹೇಳಿದನು.**

**ವಚನ. 7 ಹೀಗಿರಲಾಗಿ ಯೆಹೋವನು ಮೋಶೆಗೆ ನೀನು ಬೆಟ್ಟದಿಂದ ಇಳಿದುಹೋಗು ಐಗುಪ್ತದೇಶದಿಂದ ನೀನು ಕರಕೊಂಡು ಬಂದ ನಿನ್ನ ಜನರು ಕೆಟ್ಟುಹೋದರು.**

**ವಚನ. 10 ಆದಕಾರಣ ನೀನು ನನ್ನನ್ನು ತಡೆಯಬೇಡ. ನನ್ನ ಕೋಪಾಗ್ನಿ ಉರಿಯಲಿ. ಅವರನ್ನು ಭಸ್ಮಮಾಡುವೆನು. ತರುವಾಯ ನಿನ್ನಿಂದಲೇ ಬೇರೆ ಒಂದು ದೊಡ್ಡ ಜನಾಂಗವುಂಟಾಗುವಂತೆ ಮಾಡುವೆನು ಎಂದು ಹೇಳಿದನು.**

ದೇವರು ಅವರನ್ನು ನಾಶಮಾಡಲು ಬಯಸಿದ್ದರಲ್ಲಿ ಏನಾದರೂ ಅಚ್ಚರಿ ಅನ್ನಿಸುತ್ತದೆಯೇ? ನಾವು ಈ ವಾಕ್ಯಭಾಗವನ್ನು ಓದಬಹುದು ಮತ್ತು ನಮ್ಮ ಬೆರಳುಗಳನ್ನು ಅವರ ಕಡೆಗೆ ತೋರಿಸಬಹುದು ಮತ್ತು ಅವರು ಈ ಘೋರವಾದ ಕೆಲಸವನ್ನು ಮಾಡಲು ಹೇಗೆ ಸಾಧ್ಯ ಎಂದು ಬೆರಗಾಗಬಹುದು. ಆದರೆ ಏನಾಯಿತು ಎಂಬುದನ್ನು ಸೂಕ್ಷ್ಮವಾಗಿ ನೋಡಿಕೊಳ್ಳೋಣ.

ಮೋಶೆಯು ಅವರ ನಾಯಕನಾಗಿದ್ದನು. ಅವನು ಅವರಿಗೆ ಗೊತ್ತಿರದ ಹೊಸ ಹಾದಿಯಲ್ಲಿ ಅವರನ್ನು ನಡೆಸಿಕೊಂಡು ಅವರಿಗೆ ಗೊತ್ತಿರದ ಹೊಸ ಸ್ಥಳಕ್ಕೆ ಅವರನ್ನು ಕರೆದೊಯ್ಯುತ್ತಿದ್ದನು. ಇಸ್ರಾಯೇಲ್ ಜನರು 400 ನೂರು ವರ್ಷಗಳ ಕಾಲ ಐಗುಪ್ತದಲ್ಲಿದ್ದರು. ಇದು ಅನೇಕ ತಲೆಮಾರುಗಳನ್ನು ಒಳಗೊಂಡಿದೆ. ಅವರಿಗೆ ಗೊತ್ತಿಲ್ಲದ ದೇವರನ್ನು ಆರಾಧಿಸಲು ಮೋಶೆ ಅವರನ್ನು ಕರೆದೊಯ್ಯುತ್ತಿದ್ದನು. ಮೋಶೆಯು ದೇವರು ಕರೆಯಲ್ಪಟ್ಟವನಾಗಿದ್ದನು. ಅವನಿಗೆ ದೇವರೊಂದಿಗೆ ವೈಯಕ್ತಿಕ ಸಂಬಂಧವಿತ್ತು, ಆದರೆ ಅವರು ಇರಲಿಲ್ಲ.

ಮೋಶೆ ಸತ್ತುಹೋದನೆಂದು ಅವರು ಭಾವಿಸಿರಬೇಕು. ಅವನು ಈ ಸಂದಿಗ್ಧ ವಿಷಯಗಳಲೆಲ್ಲಾ ಹಾದುದೋದನು ಮತ್ತು ಅವನು ಪ್ರತಿ ದಿನವು ಈ ವಿಷಯಗಳ ಮೂಲಕ ಹಾದುಹೋಗುತ್ತಿದ್ದನು.

ಅವರು ಬಂಗಾರದ ಹೋರಿಯನ್ನು ರೂಪಿಸಿದಾಗ, ಅವರು ಐಗುಪ್ತ ದೇಶದಲ್ಲಿ ತಮ್ಮ ಜೀವಮಾನದಲ್ಲೆಲ್ಲಾ ನೋಡಿದಂಥ ರೀತಿಯಲ್ಲಿಯೇ ದೇವರುಗಳನ್ನು ಪೂಜಿಸುವ ಕಾರ್ಯಕ್ಕೆ ಹಿಂದಿರುಗಿ ಹೋದರು. ಅವರ ತಂದೆತಾಯಿಗಳು ನೋಡಿದ ರೀತಿಯು ಅದಾಗಿತ್ತು. ಅವರ ಅಜ್ಜ ಅಜ್ಜಿಯರು ನೋಡಿದ ರೀತಿಯು ಅದಾಗಿತ್ತು.

ಇದು ಪಾಪವನ್ನು ಕಡಿಮೆ ಮಾಡುವುದಿಲ್ಲ, ಅದು ನಡೆದ್ದದರ ಬಗ್ಗೆ ಹೆಚ್ಚು ಅರ್ಥವಾಗುವಂತೆ ಮಾಡುತ್ತದೆ.

ಪವಿತ್ರಾತ್ಮನ ಶಕ್ತಿಯನ್ನು ನಿರಾಕರಿಸುವಾಗ ಇಂದು ಅನೇಕರು ಅದೇ ಕಾರ್ಯವನ್ನು ಮಾಡುತ್ತಿರುವ ಸಾಧ್ಯತೆಯಿದೆಯೇ? ಅವರು ತಮಗೆ ಅನುಕೂಲವಾದ ರೀತಿಯಲ್ಲಿ ದೇವರನ್ನು ಆರಾಧಿಸಲು ಬಯಸುತ್ತಾರೆಯೇ? ಪವಿತ್ರಾತ್ಮನ ಹೊಸ ಚಲಿಸುವಿಕೆಗಳ ಕಡೆಗೆ ಹೋಗುವುದನ್ನು ಬಿಟ್ಟು ಅದಕ್ಕೆ ಬದಲಾಗಿ ಅವರು ತಮ್ಮ ಜನರು ಮಾಡುವ ರೀತಿಗಳಲ್ಲಿ ಮುಂದುವರಿಯಲು ಬಯಸುತ್ತಾರೆಯೇ?

## ಆಯ್ಕೆಯನ್ನು ಮಾಡಬೇಕು

---

### ಮೋಶೆಯು ತಿರ್ಮಾನ ಮಾಡಿಕೊಂಡನು

ಮೋಶೆಯು ತನ್ನ ಜೀವನದಲ್ಲಿ ಬಹಳಷ್ಟು ವಿಷಯಗಳನ್ನು ಬಿಟ್ಟುಬಿಟ್ಟನು. ಅವನಿಗೆ ಆಯ್ಕೆ ಮಾಡಿಕೊಳ್ಳುವ ಬುದ್ಧಿ ಬರುವುದಕ್ಕೆ ಮೊದಲೇ ಅವನನ್ನು ಅವನ ಕುಟುಂಬದಿಂದ ತೆಗೆದುಕೊಂಡು ಹೋಗಿ ಬುಟ್ಟಿಯಲ್ಲಿ ಇಟ್ಟು ನೈಲ್ ನದಿಯಲ್ಲಿ ತೇಲಿಬಿಟ್ಟರು. ಅವನು ಫರೋಹನನಿಗೆ ದತ್ತು ಮೊಮ್ಮಗನಾದನು, ಆದರೂ ಅವನು ಈ ಎಲ್ಲ ಅಧಿಕಾರವನ್ನು ಮತ್ತು ಐಶ್ವರ್ಯವನ್ನು ತ್ಯಜಿಸಿಬಿಟ್ಟನು. ಅವನು ಮರುಭೂಮಿಯಲ್ಲಿ ಸುಖಕರವಾದ ಜೀವನವನ್ನು ನಡೆಸುತ್ತಿದ್ದನು ಮತ್ತು ಅಲ್ಲಿ ಅವನಿಗೆ ಕುಟುಂಬವು ಸಹ ಇತ್ತು, ಆದರೆ ದೇವರು ಅವನನ್ನು ಅಲ್ಲಿಂದ ಕರೆದಾಗ ಅವನು ಅದಕ್ಕೆ ವಿಧೇಯನಾದನು.

ಮೋಶೆಯು ದೇವರಿಂದ ಆರಿಸಿಕೊಳ್ಳಲ್ಪಟ್ಟ ಮತ್ತು ಸಿದ್ಧಪಡಿಸಲ್ಪಟ್ಟ ನಾಯಕನಿಗೆ ಅಮೋಘವಾದ ಮಾದರಿಯಾಗಿದ್ದಾನೆ. ದೇವರು ಇಸ್ರಾಯೇಲ್ ಜನರನ್ನು ದಹಿಸಿಬಿಡುತ್ತೇನೆ ಮತ್ತು ಮೋಶೆಯ ಮೂಲಕ ನೂತನವಾದ ಮಹಾ ಜನಾಂಗವನ್ನು ಉಂಟುಮಾಡುತ್ತೇನೆ ಎಂದು ಹೇಳಿದಾಗ, ಮೋಶೆಯು ಹಾಗೆ ಮಾಡಲು ಬಿಟ್ಟುಕೊಡಲಿಲ್ಲ. ಅವನು ತನ್ನ ಜನರಿಗಾಗಿ ಮಧ್ಯಸ್ಥಿಕೆ ವಹಿಸಿ ವಿಜ್ಞಾಪಿಸಿದನು.

**ವಿಮೋಚನಕಾಂಡ 33:1,2,3 ಯೆಹೋವನು ಮೋಶೆಗೆ ಹೇಳಿದ್ದೇನಂದರೆ, ನೀನು ಐಗುಪ್ತದೇಶದಿಂದ ಕರತಂದ ಜನರನ್ನು ನಿನ್ನ ಸಂಗಡ ಕರಕೊಂಡು ಈ ಸ್ಥಳವನ್ನು ಬಿಟ್ಟು ನಾನು ಅಬ್ರಹಾಮ ಇಸಾಕ ಯಾಕೋಬರಿಗೆ ನಿಮ್ಮ ಸಂತತಿಯವರಿಗೆ ಕೊಡುವೆನೆಂದು ಪ್ರಮಾಣ ಮಾಡಿ ಕೊಟ್ಟ ದೇಶಕ್ಕೆ ಹೋರಟುಹೋಗು. ನಾನು ನಿನ್ನ**

**ಮುಂದುಗಡೆಯಲ್ಲಿ ದೂತರನ್ನು ಕಳುಹಿಸಿ... ಅದು ಹಾಲು ಜೇನು ಹರಿಯುವ ದೇಶವೆ. ಆದರೆ ನಾನು ನಿಮ್ಮ ಸಂಗಡ ಬರುವದಿಲ್ಲ ನೀವು ನನ್ನ ಆಜ್ಞೆಗೆ ಬೊಗ್ಗದವರಾದ್ದರಿಂದ ನಾನು ದಾರಿಯಲ್ಲಿ ನಿಮ್ಮನ್ನು ಸಂಹರಿಸೇನು ಅಂದನು.**

ದೇವರು ಅವರೊಂದಿಗೆ ದೇವದೂತನನ್ನು ಕಳುಹಿಸುವುದಾಗಿ ಹೇಳಿದನು, ಮತ್ತು ಇದು ಕೇವಲ ಯಾರೊಬ್ಬ ದೇವದೂತನ ಬಗ್ಗೆ ಹೇಳಿದ್ದಲ್ಲ "ನನ್ನ ದೇವದೂತನು" ಎಂದು ದೇವರು ಆ ದೇವದೂತನ ಬಗ್ಗೆ ಸೂಚಿಸುತ್ತಿದ್ದಾನೆ. ಆದರೆ ಮೋಶೆಯು ಹೀಗೆ ಪ್ರತಿಕ್ರಿಯಿಸಿದನು,

**ವಿಮೋಚನಕಾಂಡ 33:15 ಅದಕ್ಕೆ ಮೋಶೆ ನೀನು ನಮ್ಮ ಸಂಗಡ ಬಾರದೇ ಹೋದರೆ ನಮ್ಮನ್ನು ಇಲ್ಲಿಂದ ಹೋಗಗೊಡಿಸಬೇಡ.**

ಅವನು ದೇವರ ಪ್ರಸನ್ನತೆಯನ್ನು ಬಹಳ ಹೆಚ್ಚಾಗಿ ಬಯಸಿದನು, ಆತನಿಲ್ಲದೆ ಹೋಗಲು ಅವನು ನಿರಾಕರಿಸಿದನು.

* *ದೇವರ ಪ್ರಸನ್ನತೆಯನ್ನು ಆರಿಸಿಕೊಂಡನು*

ಅವರ ಪಾಪದಿಂದಾಗಿ, ಮೋಶೆಯು ತನ್ನ ಡೇರೆಯನ್ನು ಪಾಳೆಯದ ಹೊರಕ್ಕೆ ಸ್ಥಳಾಂತರಿಸಬೇಕಾಯಿತು. ಜನರಿಂದ ಪ್ರತ್ಯೇಕವಾಗಿರುವುದರ ಮೂಲಕ ಮಾತ್ರವೇ ದೇವರ ಮಹಿಮೆ ಅವನ ಮೇಲೆ ಮುಂದುವರಿಯಲು ಸಾಧ್ಯವಾಗುತ್ತಿತ್ತು.

**ವಿಮೋಚನಕಾಂಡ 33:7-11 ಮೋಶೆ ಡೇರೆಯನ್ನು ಪಾಳೆಯದ ಹೊರಗೆ ದೂರವಾಗಿ ಹಾಕಿಸುತ್ತಿದ್ದನು. ಅದಕ್ಕೆ ದೇವದರ್ಶನದ ಡೇರೆ ಎಂದು ಹೆಸರಿಟ್ಟರು. ಯೆಹೋವನ ಉತ್ತರವನ್ನು ಬಯಸಿದವರೆಲ್ಲರು ಪಾಳೆಯದ ಹೊರಗಿದ್ದ ದೇವದರ್ಶನದ ಡೇರೆಗೆ ಹೋಗುತ್ತಿದ್ದರು. ಮೋಶೆ ಆ ಡೇರೆಗೆ ಹೋಗುವಾಗೆಲ್ಲಾ ಜನರೆಲ್ಲರೂ ಎದ್ದು ತಮ್ಮ ತಮ್ಮ ಡೇರೆಗಳ ಬಾಗಲಲ್ಲಿ ನಿಂತು, ಮೋಶೆಯು ಆ ಡೇರೆಯೊಳಕ್ಕೆ ಹೋಗುವ ತನಕ ಅವನ ಹಿಂದೆ ನೋಡುತ್ತಿದ್ದರು. ಮೋಶೆ ಆ ಡೇರೆಯೊಳಕ್ಕೆ ಹೋದ ಕೂಡಲೆ ಮೇಘಸ್ತಂಭವು ಇಳಿದು ಆ ಡೇರೆಯ ಬಾಗಲಲ್ಲಿ ನಿಲ್ಲುತ್ತಿತ್ತು. ಆಗ ಯೆಹೋವನು ಮೋಶೆಯ ಸಂಗಡ ಮಾತಾಡುವನು. ಆ ಮೇಘಸ್ತಂಭವು ಡೇರೆಯ ಬಾಗಲಲ್ಲಿ ನಿಂತಿದ್ದನ್ನು ಜನರೆಲ್ಲರೂ ನೋಡಿ ತಮ್ಮ ತಮ್ಮ ಡೇರೆಗಳ ಬಾಗಲಲ್ಲೇ ಅಡ್ಡಬೀಳುವರು. ಮನುಷ್ಯರೊಳಗೆ ಒಬ್ಬನೂ ತನ್ನ ಸ್ನೇಹಿತನೊಡನೆ ಹೇಗೆ ಮಾತಾಡುವನೋ ಹಾಗೆಯೇ ಯೆಹೋವನು ಮೋಶೆಯ**

**ಸಂಗಡ ಮುಖಾಮುಖಿಯಾಗಿ ಮಾತಾಡುತ್ತಿದ್ದನು. ತರುವಾಯ ಮೋಶೆ ಪಾಳೆಯಕ್ಕೆ ತಿರಿಗಿ ಬರುವನು.**

**ವಿಮೋಚನಕಾಂಡ 33:17 ಯೆಹೋವನು ಮೋಶೆಗೆ ನಿನಗೆ ನನ್ನ ಅನುಗ್ರಹ ದೊರಕಿದ್ದರಿಂದಲೂ ನಾನು ನಿನ್ನ ಹೆಸರನ್ನು ಗೊತ್ತುಮಾಡಿದ್ದರಿಂದಲೂ ನಿನಗೋಸ್ಕರ ಈ ಕಾರ್ಯವನ್ನು ಮಾಡುವೆನು ಎಂದು ಹೇಳಿದನು.**

✱ *ಅವನ ಹೃದಯದ ಬೇಡಿಕೆ*

ಆದರೂ ಮೋಶೆಯು ಇನ್ನೂ ಸಂತೃಪ್ತನಾಗಿರಲಿಲ್ಲ. ಅವನು, "ನಿನ್ನ ಮಹಿಮೆಯನ್ನು ನನಗೆ ತೋರಿಸು" ಎಂದು ಕೇಳಿದನು. ಮೋಶೆಯು ಯಾವಾಗಲೂ ದೇವರಿಂದ ಹೆಚ್ಚಿನದ್ದನ್ನು ಬಯಸುತ್ತಿದ್ದನು.

**ವಿಮೋಚನಕಾಂಡ 33:18 ಅದಕ್ಕೆ ಮೋಶೆ ನಿನ್ನ ಮಹಿಮೆಯನ್ನು ದಯಮಾಡಿ ನನಗೆ ತೋರಿಸು ಎಂದು ಕೇಳಲಾಗಿ.**

✱ *ಮಹಿಮೆಯು ಇಳಿದುಬಂತು*

ದೇವರ ಸನ್ನಿಧಿಯಲ್ಲಿ, ಮಹಿಮೆಯು ಮೋಶೆಯ ಮೇಲೆ ಇಳಿದುಬಂತು.

**ವಿಮೋಚನಕಾಂಡ 34:29,30. ಮೋಶೆ ಆಜ್ಞಾಶಾಸನಗಳಾದ ಆ ಎರಡು ಕಲ್ಲಿನ ಹಲಿಗೆಗಳನ್ನು ಕೈಯಲ್ಲಿ ಹಿಡಿದುಕೊಂಡು ಸೀನಾಯಿ ಬೆಟ್ಟದಿಂದ ಇಳಿದುಬಂದಾಗ ಅವನು ಯೆಹೋವನ ಸಂಗಡ ಸಂಭಾಷಿಸಿದ್ದರಿಂದ ಅವನ ಮುಖವು ಪ್ರಕಾಶಮಾನವಾಗಿತ್ತು; ಆದರೆ ಆ ಸಂಗತಿ ಅವನಿಗೆ ತಿಳಿಯಲಿಲ್ಲ. ಮೋಶೆಯ ಮುಖವು ಪ್ರಕಾಶವಾಗಿರುವದನ್ನು ಆರೋನನೂ ಇಸ್ರಾಯೇಲ್ಯರೆಲ್ಲರೂ ನೋಡಿ ಅವನ ಹತ್ತಿರಕ್ಕೆ ಬರುವದಕ್ಕೆ ಭಯಪಟ್ಟರು.**

**ವಚನಗಳು. 33-35 ಮೋಶೆ ಅವರ ಸಂಗಡ ಮಾತಾಡುವದನ್ನು ಮುಗಿಸಿದಾಗ ತನ್ನ ಮುಖದ ಮೇಲೆ ಮುಸುಕು ಹಾಕಿಕೊಂಡನು. ಅವನು ಯೆಹೋವನ ಸಂಗಡ ಮಾತಾಡಬೇಕೆಂದು ಸನ್ನಿಧಿಗೆ ಹೋಗುವಾಗೆಲ್ಲಾ ಹೊರಗೆ ಬರುವ ತನಕ ಆ ಮುಸುಕನ್ನು ತೆಗೆದಿಡುವನು. ಅವನು ಹೊರಗೆ ಬಂದಾಗ ಯೆಹೋವನು ಆಜ್ಞಾಪಿಸಿದ್ದನ್ನೆಲ್ಲಾ ಇಸ್ರಾಯೇಲ್ಯರಿಗೆ ತಿಳಿಸುವನು. ಮೋಶೆಯ ಮುಖವು ಪ್ರಕಾಶಮಾನವಾಗಿರುವದನ್ನು ಇಸ್ರಾಯೇಲ್ಯರು ನೋಡುತ್ತಿದ್ದರು. ಆದಕಾರಣ ಅವನು ಯೆಹೋವನ ಸಂಗಡ**

**ಮಾತಾಡುವದಕ್ಕೆ ಹೋಗುವ ವರೆಗೆ ತನ್ನ ಮುಖದ ಮೇಲೆ ಆ ಮುಸುಕನ್ನು ತಿರಿಗಿ ಹಾಕಿ ಕೊಂಡಿರುವನು.**

ಮೋಶೆಯ ಜೀವನವು ಇಂದು ನಮಗೆ ದೊಡ್ಡ ಸವಾಲಾಗಿದೆ. ಮೋಶೆಯು ದೇವರ ಸ್ನೇಹಿತನಾಗಿದ್ದನು, ಆದರೂ ಅವನು ಇನ್ನೂ ಹೆಚ್ಚಿನದು ಬೇಕೆಂದು ಬಯಸಿದನು. ಅವರೊಂದಿಗೆ ಹೋಗಲು ತನ್ನ ದೇವದೂತನನ್ನು ಕಳುಹಿಸುವುದಾಗಿ ದೇವರು ಹೇಳಿದಾಗಲೂ, ಮೋಶೆಯು ಸ್ವತಃ ದೇವರ ಪ್ರಸನ್ನತೆಯೇ ಬೇಕು ಎಂದು ಕೇಳಿಕೊಂಡನು. ಅವನು ತನ್ನನ್ನು ದೇವರಿಂದ ಬೇರ್ಪಡಿಸುವ ಎಲ್ಲದರಿಂದಲೂ ಮತ್ತು ಎಲ್ಲರಿಂದಲೂ ತನ್ನನ್ನು ತಾನು ಪ್ರತ್ಯೇಕಿಸಲು ಸಿದ್ಧನಾಗಿದ್ದನು. ಅವನು ಯಾವುದೇ ರಾಜಿ ಮಾಡಿಕೊಳ್ಳಲಿಲ್ಲ.

ಅಬ್ರಹಾಮನ ತಿರ್ಮಾನ

ದೇವರು ಅವನೊಂದಿಗೆ ಮಾತನಾಡಿದಾಗ ಅಬ್ರಹಾಮನ ಜೀವನದ ಕುರಿತಾದ ಸತ್ಯವೇದದ ಕಥನವು ಪ್ರಾರಂಭವಾಯಿತು.

**ಆದಿಕಾಂಡ 12:1 ಯೆಹೋವನು ಅಬ್ರಾಮನಿಗೆ ನೀನು ಸ್ವದೇಶವನ್ನೂ ಬಂಧುಬಳಗವನ್ನೂ ತಂದೆಯ ಮನೆಯನ್ನೂ ಬಿಟ್ಟು ನಾನು ತೋರಿಸುವ ದೇಶಕ್ಕೆ ಹೊರಟು ಹೋಗು. ನಾನು ನಿನ್ನನ್ನು ದೊಡ್ಡ ಜನಾಂಗವಾಗುವಂತೆ ಮಾಡಿ ಆಶೀರ್ವದಿಸಿ ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು. ನೀನು ಆಶೀರ್ವಾದನಿಧಿಯಾಗುವಿ. ನಿನ್ನನ್ನು ಹರಸುವವರನ್ನು ಹರಸುವೆನು; ನಿನ್ನನ್ನು ಶಪಿಸುವವರನ್ನು ಶಪಿಸುವೆನು. ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವದು ಎಂದು ಹೇಳಿದನು.**

ದೇವರು ಅಬ್ರಾಮನಿಗೆ ಅಮೋಘವಾದ ಆಯ್ಕೆಯನ್ನು ಮಾಡಿಕೊಳ್ಳುವ ಅವಕಾಶವನ್ನು ಕೊಟ್ಟನು, ಆದರೆ ಅವನು ದೇವರಿಗೆ ವಿಧೇಯನಾಗಲು ನಿರ್ಧರಿಸಿದಾಗ ಮತ್ತು ಅವನು ಇದ್ದ ದೇಶವನ್ನು ಬಿಟ್ಟು ಹೊರಟು ಬಂದಾಗ ಇದೆಲ್ಲವೂ ಪ್ರಾರಂಭವಾಯಿತು.

ಹಳೆ ಒಡಂಬಡಿಕೆಯ ಪ್ರವಾದಿಗಳು

ಹಳೆ ಒಡಂಬಡಿಕೆಯಲ್ಲಿ ನಾವು ಅನೇಕ ಪ್ರವಾದಿಗಳ ಕುರಿತು ಕಲಿಯಬಹುದು ಮತ್ತು ಅವರು ಹೇಗೆ ತ್ಯಾಗಗಳನ್ನು ಮಾಡಬೇಕೆಂದು ದೇವರು ಬಯಸಿದನು ಎಂಬುದನ್ನು, ದೇವರನ್ನು ನಿಕಟವಾಗಿ

ತಿಳಿದುಕೊಳ್ಳಲು ತಮ್ಮನ್ನು ಪ್ರತ್ಯೇಕಿಸಿಕೊಳ್ಳಬೇಕಾದದ್ದು ಎಷ್ಟು ಅಗತ್ಯವೆಂಬುದನ್ನು ಅರಿತುಕೊಳ್ಳಬಹುದು.

**ಸ್ನಾನಿಕನಾದ ಯೋಹಾನನು**

ಯೋಹಾನನು ಇಸ್ರಾಯೇಲ್ ಜನರಿಂದ ತನ್ನನ್ನ ತಾನು ಹೇಗೆ ಪ್ರತ್ಯೇಕಿಸಿಕೊಂಡನು ಎಂಬುದರ ಕುರಿತು ನಮಗೆ ಹೇಳಲಾಗಿಲ್ಲ, ಆದರೆ ಅವನ ಜನನಕ್ಕಿಂತ ಮುಂಚೆಯೇ ಅವನು ಸಾಮಾನ್ಯರಿಂದ ಪ್ರತ್ಯೇಕಿಸಲ್ಪಟ್ಟನಾಗಿದ್ದನು ಎಂಬುದು ನಮಗೆ ತಿಳಿದಿದೆ.

**ಲೂಕ 1:15 ಅವನು ಕರ್ತನ ದೃಷ್ಟಿಯಲ್ಲಿ ಮಹಾ ಪುರುಷನಾಗಿರುವನು; ದ್ರಾಕ್ಷಾರಸವನ್ನಾಗಲಿ ಯಾವ ಮದ್ಯವನ್ನಾಗಲಿ ಕುಡಿಯದವನಾಗಿರುವನು; ಅವನು ಹುಟ್ಟಿದಂದಿನಿಂದಲೂ ಪವಿತ್ರಾತ್ಮ ಭರಿತನಾಗಿರುವನು.**

ಮತ್ತಾಯನ ಸುವಾರ್ತೆಯಲ್ಲಿ ನಾವು ಹೀಗೆ ಓದುತ್ತೇವೆ,

**ಮತ್ತಾಯ 3:1-4 ಆ ದಿನಗಳಲ್ಲಿ ಸ್ನಾನಿಕನಾದ ಯೋಹಾನನು ಪರಲೋಕ ರಾಜ್ಯವು ಸಮೀಪವಾಯಿತು ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ಯೂದಾಯದ ಅಡವಿಯಲ್ಲಿ ಸಾರಿ ಹೇಳುತ್ತಾ ಬಂದನು. ಕರ್ತನ ದಾರಿಯನ್ನು ಸಿದ್ಧಮಾಡಿರಿ ಆತನ ಹಾದಿಯನ್ನು ನೆಟ್ಟಗೆ ಮಾಡಿರಿ ಎಂದು ಅಡವಿಯಲ್ಲಿ ಕೂಗುವವನ ಶಬ್ಧವದೆ ಎಂಬದಾಗಿ ಪ್ರವಾದಿಯಾದ ಯೆಶಾಯನಿಂದ ಸೂಚಿತನಾದವನೇ ಇವನೇ. ಈ ಯೋಹಾನನು ಒಂಟೇ ಕೂದಲಿನ ಹೊದಿಕೆಯೂ ಸೊಂಟದಲ್ಲಿ ತೊಗಲಿನ ನಡುಕಟ್ಟು ಇದ್ದವು. ಅವನಿಗೆ ಮಿಡತೆ ಮತ್ತು ಕಾಡುಜೇನು ಆಹಾರವಾಗಿದ್ದವು.**

ಯೋಹಾನನು ಜನರಿಂದ ತನ್ನನ್ನು ಪ್ರತ್ಯೇಕಿಸಿಕೊಂಡು ಅರಣ್ಯಕ್ಕೆ ಹೋದನು. ಅವನು ತಾನು ವಸ್ತ್ರವನ್ನು ಧರಿಸಿಕೊಳ್ಳುವುದರಲ್ಲಿಯೂ ಮತ್ತು ತಿನ್ನುವುದರಲ್ಲಿಯೂ ಸಹ ತನ್ನನ್ನು ಪ್ರತ್ಯೇಕಿಸಿಕೊಂಡನು.

"ಯೋಹಾನನು ಒಂಟೆ ಕೂದಲಿನ ವಸ್ತ್ರವನ್ನು ಧರಿಸಿಕೊಳ್ಳುವುದರಲ್ಲಿ ಮತ್ತು ಮಿಡತೆಯನ್ನು ತಿನ್ನುವುದರಲ್ಲಿ ಆನಂದಿಸುತ್ತಿದ್ದನು ಎಂದು ನೀವು ಭಾವಿಸುತ್ತೀರಾ?" ಎಂದು ಯಾರಾದರೂ ಕೇಳಬಹುದು.

ಇಲ್ಲ, ಅವನು ಅದರಲ್ಲಿ ಆನಂದಿಸುತ್ತಿದ್ದನು ಎಂದು ನಾನು ಭಾವಿಸುವುದಿಲ್ಲ ಎಂದು ನಾವು ಉತ್ತರಿಸುತ್ತೇವೆ. ಆದರೆ ಅದು ತನ್ನ

ಜೀವನದ ಕುರಿತಾಗಿದ್ದ ದೇವರ ಕರೆಯುವಿಕೆಗೆ ನಿಷ್ಠೆಯಿಂದಿರಲು ಅವನು ಕಟ್ಟಿದ ಬೆಲೆಯ ಒಂದು ಭಾಗವಾಗಿತ್ತು.

ದೇವರ ಮಗನಾದ ಯೇಸು

ಈ ಭೂಮಿಗೆ ಬಂದು ಇಲ್ಲಿ ಮನುಷ್ಯನಾಗಿ ಜೀವಿಸಲು ಸ್ವರ್ಗದ ಸಕಲ ಮಹಿಮೆಗಳನ್ನು ಬಿಟ್ಟುಕೊಟ್ಟ ಯೇಸುವಿಗಿಂತ ದೊಡ್ಡ ಮಾದರಿಯು ಮತ್ತೊಂದಿಲ್ಲ. ಆತನು ದೇವರಾಗಿದ್ದ ತನ್ನ ಎಲ್ಲ ಅಧಿಕಾರಗಳಿಂದ ಮತ್ತು ಹಕ್ಕುಗಳಿಂದ ತನ್ನನ್ನು ಪ್ರತ್ಯೇಕಿಸಿಕೊಂಡನು ಮತ್ತು ಮನುಷ್ಯನಾಗಿ ಈ ಭೂಮಿಗೆ ಬಂದನು.

**ಫಿಲಿಪ್ಪಿ 2:7 ತನ್ನನ್ನು ಬರಿದು ಮಾಡಿಕೊಂಡು ದಾಸನ ರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸದೃಶನಾದನು.**

ನಮ್ಮ ತೀರ್ಮಾನ

ಅನೇಕ ತೀರ್ಮಾನಗಳನ್ನು ಕೇವಲ ಒಂದೇ ಬಾರಿ ಮಾಡುವುದಿಲ್ಲ, ಆದರೆ ಸತತವಾಗಿ ತೀರ್ಮಾನಗಳನ್ನು ಮಾಡುತ್ತೇವೆ ಮತ್ತು ಅದುವೇ ಜೀವನಶೈಲಿಯಾಗಿ ಬಿಡುತ್ತದೆ. ಯೇಸು ನಮಗೆ ಹೇಳಿದ್ದೇನಂದರೆ,

**ಮತ್ತಾಯ 6:33 … ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ.**

ಅಪೊಸ್ತಲನಾದ ಪೌಲನು ಹೀಗೆ ಹೇಳಿದನು,

**1 ಕೊರಿಂಥ 10:31 ಹೀಗಿರಲಾಗಿ ನೀವು ಉಂಡರೂ ಕುಡಿದರೂ ಇನ್ನೇನು ಮಾಡಿದರೂ ಎಲ್ಲವನ್ನೂ ದೇವರ ಘನತೆಗಾಗಿ ಮಾಡಿರಿ.**

*ನಮ್ಮ ಸುತ್ತಲಿನ ಜಗತ್ತಿಗೆ ಮಹಿಮೆಯನ್ನು ಹೊತ್ತು ಸಾಗುವವರಾಗಲು – ನಮ್ಮ ಕುರಿತಾದ ದೈವ ಚಿತ್ತವನ್ನು ನೆರವೇರಿಸಲು ಮತ್ತು ಅದರಂತೆ ಜೀವಿಸಲು ನಾವು ಪ್ರತ್ಯೇಕಿಸಲ್ಪಟ್ಟವರಾಗಿರುವುದು ಬಹಳ ಅಗತ್ಯವಾಗಿರುತ್ತದೆ.*

ಯೆಹೋಶುವನು ಇಸ್ರಾಯೇಲ್ಯರು ಮಾಡಬೇಕಾದ ತೀರ್ಮಾನದ ವಿಷಯದಲ್ಲಿ ಅವರಿಗೆ ಸವಾಲು ಹಾಕಿದನು, ಮತ್ತು ನಾವೆಲ್ಲರೂ ಸಹ ಅದೇ ತೀರ್ಮಾನವನ್ನು ಮಾಡಬೇಕೆಂದು ದೇವರು ಬಯಸುತ್ತಾನೆ.

**ಯೆಹೋಶುವ 24:15… ಯೆಹೋವನನ್ನು ಸೇವಿಸುವುದು ನಿಮಗೆ ಸರಿ ಕಾಣದಿದ್ದರೆ ಯಾರನ್ನು ಸೇವಿಸಬೇಕೆಂದಿದ್ದಿರಿ? ಈ ಹೊತ್ತೇ ಆರಿಸಿಕೊಳ್ಳಿರಿ… ನಾನೂ, ನನ್ನ ಮನೆಯವರೂ ಯೆಹೋವನನ್ನೇ ಸೇವಿಸುವೆವು" ಎಂದನು.**

ಪರಿಶುದ್ಧ ಜೀವನ ನಡೆಸುವುದು

ದೇವರ ಪ್ರಸನ್ನತೆಯು ಮತ್ತು ಮಹಿಮೆಯು ಪಾಪದೊಂದಿಗೆ ಒಟ್ಟಾಗಿರಲು ಸಾಧ್ಯವೇ ಇಲ್ಲ. ನಾವು ದೇವರ ಪ್ರಸನ್ನತೆಯನ್ನು ಮತ್ತು ಮಹಿಮೆಯನ್ನು ಅನುಭವಿಸಬೇಕಾದರೆ ನಾವು ದೇವರ ಪರಿಶುದ್ಧತೆಯಲ್ಲಿ ಜೀವಿಸುವ ಮತ್ತು ನಡೆಯುವ ಸಲುವಾಗಿ ಶರೀರದ ಕಲ್ಮಶತೆಯಿಂದ ನಮ್ಮನ್ನು ನಾವು ಪ್ರತ್ಯೇಕಿಸಿಕೊಳ್ಳಬೇಕು ಮತ್ತು ಶುಚಿಮಾಡಿಕೊಳ್ಳಬೇಕು.

ಅಪೊಸ್ತಲನಾದ ಪೌಲನು ಹೀಗೆ ಬರೆದಿದ್ದಾನೆ,

**2 ಕೊರಿಂಥ 6:17,18, 7:1 ಆದದರಿಂದ ಅನ್ಯಜನರ ಮಧ್ಯದಲ್ಲಿಂದ ಹೊಟುಬಂದು ಪ್ರತ್ಯೇಕವಾಗಿರಿ. ಅಶುದ್ಧವಾದ ಯಾವುದನ್ನೂ ಮುಟ್ಟದಿರಿ ಎಂದು ಕರ್ತನು ಹೇಳುತ್ತಾನೆ. ಇದಲ್ಲದೆ ನಾನು ನಿಮ್ಮನ್ನು ಸೇರಿಸಿಕೊಂಡು ನಿಮಗೆ ತಂದೆಯಾಗಿರುವೆನು. ನೀವು ನನಗೆ ಕುಮಾರ ಕುಮಾರಿಯರು ಆಗಿರುವಿರೆಂದು ಸರ್ವಶಕ್ತನಾದ ಕರ್ತನು ಹೇಳುತ್ತಾನೆ. ಪ್ರಿಯರೇ ಈ ವಾಗ್ದಾನಗಳು ನಮಗಿರುವದರಿಂದ ನಾವು ಶರೀರಾತ್ಮಗಳ ಕಲ್ಮಶವನ್ನು ತೊಲಗಿಸಿ ನಮ್ಮನ್ನು ಶುಚಿಮಾಡಿಕೊಂಡು ದೇವರ ಭಯದಿಂದ ಕೂಡಿದವರಾಗಿ ಪವಿತ್ರತ್ವವನ್ನು ಸಿದ್ಧಿಗೆ ತರುವದಕ್ಕೆ ಪ್ರಯತ್ನಿಸೋಣ.**

ಅಪೊಸ್ತಲನಾದ ಪೇತ್ರನು ಹೀಗೆ ಹೇಳಿದ್ದಾನೆ,

**1 ಪೇತ್ರ 1:13-16 ಆದದರಿಂದ ನೀವು ಮನಸ್ಸಿನ ನಡುವನ್ನು ಕಟ್ಟಿಕೊಂಡು ಸ್ವಸ್ಥರಾಗಿದ್ದು ಯೇಸು ಕ್ರಿಸ್ತನು ಪ್ರತ್ಯಕ್ಷನಾಗುವಾಗ ನಿಮಗೆ ದೊರಕುವ ಭಾಗ್ಯದ ಮೇಲೆ ನಿಮ್ಮ ನಿರೀಕ್ಷೆಯನ್ನು ಸಂಪೂರ್ಣವಾಗಿ ಇಡಿರಿ. ನೀವು ಮುಂಚೆ ಅಜ್ಞಾನಿಗಳಾಗಿದ್ದಾಗ ನಿಮಗಿದ್ದ ದುರಾಶೆಗಳನ್ನು ಅನುಸರಿಸಿ ನಡೆಯುವವರಾಗಿರದೆ, ನಿಮ್ಮನ್ನು ಕರೆದಾತನು ಪರಿಶುದ್ಧನಾಗಿರುವ ಪ್ರಕಾರವೇ ನೀವೂ ವಿಧೇಯರಿಗೆ ತಕ್ಕಂತೆ ನಿಮ್ಮ ಎಲ್ಲಾ ನಡವಳಿಕೆಯಲ್ಲಿ**

**ಪರಿಶುದ್ದರಾಗಿರಿ. ನಾನು ಪರಿಶುದ್ದನಾಗಿರುವದರಿಂದ ನೀವೂ ಪರಿಶುದ್ದರಾಗಿರಬೇಕು ಎಂದು ಬರೆದಿದೆಯಲ್ಲಾ.**

**ಯಾಕೋಬನ ಸಂತತಿ**

---

*ದೇವರು ತನ್ನನ್ನು ಸತ್ಯಭಾವದಿಂದ ಆರಾಧಿಸು ವವರನ್ನು ಹುಡುಕುತ್ತಿದ್ದಾನೆ. ಅಪೊಸ್ತಲನಾದ ಯೋಹಾನನು ಹೀಗೆ ಬರೆದಿದ್ದಾನೆ,*

***ಯೋಹಾನ 4:23,24 ಅದಿರಲಿ, ಸತ್ಯಭಾವದಿಂದ ಆರಾಧನೆ ಮಾಡುವವರು ಆತ್ಮೀಯ ರಿತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ತಂದೆಯನ್ನು ಆರಾಧಿಸುವ ಕಾಲ ಬರುತ್ತದೆ. ಅದು ಈಗಲೇ ಬಂದಿದೆ. ತಂದೆಯು ತನ್ನನ್ನು ಆರಾಧಿಸುವವರು ಇಂಥವರೇ ಆಗಿರಬೇಕೆಂದು ಅಪೇಕ್ಷೀಸುತ್ತಾನಲ್ಲವೇ, ದೇವರು ಆತ್ಮಸ್ವರೂಪನು ಆತನನ್ನು ಆರಾಧಿಸುವವರು ಆತ್ರೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು ಅಂದನು.***

**ದೇವರ ಮುಖವನ್ನು ಹುಡುಕುವುದು**

*ನಾವು ಮಹಿಮೆ ಸಂತತಿಯ - ಯಾಕೋಬನ ಸಂತತಿಯ - ಕರ್ತನನ್ನು ಮತ್ತು ಆತನ ಮುಖವನ್ನು ಹುಡುಕುವವರ ಸಂತತಿಯ ಭಾಗವಾಗಿರಬೇಕು ಎಂಬುದು ನಮ್ಮ ತೀರ್ಮಾನವಾಗಿರಬೇಕು.*

*ಮೋಶೆ ಯಾವಾಗಲೂ ದೇವರನ್ನು ಹೆಚ್ಚೆಚ್ಚಾಗಿ ತಿಳಿದುಕೊಳ್ಳಲು ಬಯಸಿದಂತೆಯೇ, ನಾವು ಸಹ ಆತನನ್ನು ಹುಡುಕಬೇಕು.*

**ಕೀರ್ತನೆ 24:6 ಇಂಥವರೇ ಆತನ ದರ್ಶನವನ್ನು ಬಯಸುವವರು. ಯಾಕೋಬ್ಯರ ದೇವರೇ, ನಿನ್ನ ಸಾನ್ನಿಧ್ಯವನ್ನು ಸೇರುವವರು ಇಂಥವರೇ.**

ದಾವೀದನು ಮುಂದುವರೆಸಿ ಹೀಗೆ ಹೇಳಿದನು,

**ಕೀರ್ತನೆಗಳು 27:8 ನನ್ನ ಸಾನ್ನಿಧ್ಯಕ್ಕೆ ಬಾ ಎಂಬ ನಿನ್ನ ಮಾತಿಗೆ ನಾನು – ಯೆಹೋವನೇ, ನಿನ್ನ ಸಾನ್ನಿಧ್ಯಕ್ಕೆ ಬರಲೇ ಬರುವೆನು ಎಂದು ಉತ್ತರಕೊಟ್ಟೆನು.**

**ವಚನ 4 ನನ್ನ ಜೀವಮಾನದಲ್ಲೆಲ್ಲಾ ಯೆಹೋವನ ಮನೆಯಲ್ಲಿ ವಾಸಮಾಡುತ್ತಾ ಆತನ ಪ್ರಸನ್ನತೆಯನ್ನು ನೋಡುವದಕ್ಕೂ ಆತನ ಮಂದಿರದಲ್ಲಿ ಧ್ಯಾನಮಾಡುವದಕ್ಕೂ ನನಗೆ ಅಪ್ಪಣೆಯಾಗಬೇಕೆಂಬ**

**ಒಂದೇ ವರವನ್ನು ಯೆಹೋವನಿಂದ ಕೇಳಿಕೊಂಡು ಅದನ್ನೇ ಎದುರು ನೋಡುತ್ತಿರುವೆನು.**

**ಕೀರ್ತನೆಗಳು 26: 8 ಯೆಹೋವನೇ, ನಿನ್ನ ನಿವಾಸವು ನನಗೆ ಎಷ್ಟೋ ಪ್ರಿಯ; ನಿನ್ನ ಪ್ರಭಾವಸ್ಥಾನವು ನನಗೆ ಇಷ್ಟ.**

**ಪವಿತ್ರಾತ್ಮವರದಲ್ಲಿ ಪಾಲುಗಾರರು**

**ಇಬ್ರಿಯ 6:4 ಒಂದು ಸಾರಿ ಜ್ಞಾನಪ್ರಕಾಶದಲ್ಲಿ ಸೇರಿ ಪರಲೋಕದಿಂದಾದ ದಾನದ ಅನುಭವವನ್ನು ಹೊಂದಿ, ಪವಿತ್ರಾತ್ಮವರದಲ್ಲಿ ಪಾಲುಗಾರರಾಗಿ,**

**ಫಿಲಿಪ್ಪಿ 3:12 ಇಷ್ಟರೊಳಗೆ ನಾನು ಬಿರುದನ್ನು ಪಡಕೊಂಡು ಸಿದ್ಧಿಗೆ ಬಂದವನೆಂದು ಹೇಳುವದಿಲ್ಲ; ನಾನು ಯಾವದನ್ನು ಹೊಂದುವದಕ್ಕಾಗಿ ಕ್ರಿಸ್ತ ಯೇಸು ನನ್ನನ್ನು ಹಿಡಿದು ಕೊಂಡನೋ ಅದನ್ನು ಹಿಡಿದುಕೊಳ್ಳುವದಕ್ಕೋಸ್ಕರ ಓಡುತ್ತಾ ಇದ್ದೇನೆ.**

ಹೇಗೆ ಮೋಶೆಯು ಅತ್ಯಲ್ಪ ವಿಷಯವಾಗಿರುವ ದೇವದೂತನನ್ನು ಕಳುಹಿಸುವುದರಲ್ಲಿ ತೃಪ್ತನಾಗಿರಲು ಸಿದ್ಧನಿರಲಿಲ್ಲವೋ, ಹಾಗೆಯೇ ನಾವು ಸಹ ಎಂದಿನಂತೆ ಸಭೆಗಾಗಿ ಅತ್ಯಲ್ಪವಾದ ವಿಷಯದಲ್ಲಿ ತೃಪ್ತರಾಗಲು ಸಿದ್ಧರಿಲ್ಲ, ಆದರೆ ದೇವರ ಅತಿಶಯವಾದ ಪ್ರಸನ್ನತೆಯಲ್ಲಿ ಮಾತ್ರವೇ ನಾವು ತೃಪ್ತರಾಗಲು ಬಯಸಬೇಕು.

**ಆತ್ಮನಲ್ಲಿ ಜೀವಿಸುವುದು**

ಆತ್ಮನ ಹೊಸ ಚಲಿಸುವಿಕೆಯಲ್ಲಿ ಭಾಗವಾಗಿರುವವರು, ಸಾಮಾನ್ಯವಾಗಿ ಆತ್ಮನ ಹಳೆಯ ಚಲಿಸುವಿಕೆಯ ಭಾಗವಾಗಿರುವವರಿಂದ ಹಿಂಸೆಗೊಳಗಾಗುತ್ತಾರೆ. ಇದು ಯಾವಾಗಲೂ ನಿಜವಾಗಿರುತ್ತದೆ. ಈಗಾಗಲೇ ಸ್ಥಾಪಿಸಲ್ಪಟ್ಟಿರುವ ಪ್ರಕಟಣೆಯಲ್ಲಿ ನೆಲೆಗೊಳ್ಳುವುದು ಮತ್ತು ದೇವರು ಇಂದು ಹೇಳುತ್ತಿರುವಂಥದ್ದರ ಕಡೆಗೆ ಹೋಗದಿರುವಂಥದ್ದು ಸುಲಭವಾದ ಕಾರ್ಯ. ಈ ಗುಂಪಿನವರು ಆತ್ಮನ ಮಂಡಲದಲ್ಲಿ ಜೀವಿಸಲು ಪ್ರಾರಂಭಿಸಿದರು, ಆದರೆ ಈಗ ಅವರು ಶರೀರದ ಮಂಡಲದಲ್ಲಿ ಜೀವಿಸುತ್ತಿದ್ದಾರೆ.

**ಗಲಾತ್ಯ 4:29 ಆದರೆ ಪೂರ್ವದಲ್ಲಿ ಸ್ವಾಭಾವಿಕವಾಗಿ ಹುಟ್ಟಿದವನು ದೇವರಾತ್ಮ ಬಲದಿಂದ ಹುಟ್ಟಿದವನನ್ನು ಹಿಂಸೆಪಡಿಸಿದಂತೆಯೇ ಈಗಲೂ ಅದೆ.**

**1 ಕೊರಿಂಥ 2:14 ಪ್ರಾಕೃತ ಮನುಷ್ಯನು ದೇವರಾತ್ಮ ವಿಷಯಗಳನ್ನು ಬೇಡವೆನ್ನುತ್ತಾನೆ. ಅವು ಅವನಿಗೆ ಹುಚ್ಚು ಮಾತಾಗಿ ತೋರುತ್ತವೆ. ಅವು ಆತ್ಮವಿಚಾರದಿಂದ ತಿಳಿಯತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು.**

**ರೂಪಾಂತರಗೊಳ್ಳುತ್ತಿದ್ದೇವೆ**

ಈ ಹಿಂಸೆ ಮತ್ತು ಸಂಕಟಗಳ ನಡುವೆ, ದೇವರು ನಮ್ಮನ್ನು ಇನ್ನೂ ಹೆಚ್ಚಾದ ಮಹಿಮೆಯ ಕಡೆಗೆ ಕೊಂಡೊಯ್ಯಲು ನಮ್ಮ ಜೀವನದಲ್ಲಿ ಕಾರ್ಯ ಮಾಡುತ್ತಿದ್ದಾನೆ.

**2 ಕೊರಿಂಥ 4:17 ಹೇಗೆಂದರೆ ಕ್ಷಣಮಾತ್ರವಿರುವ ನಮ್ಮ ಹಗುರವಾದ ಸಂಕಟವು ಅತ್ಯಂತಾಧಿಕವಾಗಿ ಪ್ರತಿಫಲವನ್ನು ಉಂಟುಮಾಡಿ ನಮಗೆ ನಿರಂತರವಾಗಿರುವ ಗೌರವವಾದ ಪ್ರಭಾವವನ್ನು ದೊರಕಿಸುತ್ತದೆ.**

**ಇಬ್ರಿಯ 2:10 ಸಮಸ್ತವು ಯಾವನಿಗೋಸ್ಕವೂ ಯಾವನಿಂದಲೂ ಉಂಟಾಯಿತೋ ಆತನು ಬಹು ಮಂದಿ ಪುತ್ರರನ್ನು ಪ್ರಭಾವಕ್ಕೆ ಸೇರಿಸುವಲ್ಲಿ ಅವರ ರಕ್ಷಣಾ ಕರ್ತನನ್ನು ಬಾಧೆಗಳ ಮೂಲಕ ಸಿದ್ಧಿಗೆ ತರುವದು ಆತನಿಗೆ ಯುಕ್ತವಾಗಿತ್ತು.**

ಆತನ ಮಹಿಮೆ ನಮ್ಮನ್ನು ರೂಪಾಂತರಗೊಳಿಸುತ್ತದೆ.

**2 ಕೊರಿಂಥ 3:18 ನಾವೆಲ್ಲರೂ ಮುಸುಕು ತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ. ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕನುಸಾರವಾದದ್ದೇ.**

ಆತನು ತನ್ನ ಮಹಿಮೆಯನ್ನು ನಮಗೆ ಕೊಟ್ಟಿದ್ದಾನೆ.

**ಯೋಹಾನ 17:22 ನಾವು ಒಂದಾಗಿರುವ ಪ್ರಕಾರ ಅವರೂ ಒಂದಾಗಿರಬೇಕೆಂದು ನೀನು ನನಗೆ ಕೊಟ್ಟಿರುವ ಮಹಿಮೆಯನ್ನು ನಾನು ಅವರಿಗೆ ಕೊಟ್ಟಿದ್ದೇನೆ.**

ನಾವು ಆತನ ಮಹಿಮೆಯುಳ್ಳ ಸಭೆಯಾಗಿದ್ದೇವೆ.

**ಎಫೆಸ 5:27 ಅದನ್ನು ಕಳಂಕ ಸುಕ್ಕು ಮುಂತಾದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧಮಾಡಿದನು.**

ಆತನ ಮಹಿಮೆಯು ಪ್ರಕಾಶಿಸಲಿ

ಆತನ ಮಹಿಮೆ ನಮ್ಮ ಮೇಲೆ ತೋರಿಬರುತ್ತದೆ. ಅನೇಕರು ಅಸಾಧಾರಣವಾದ ರೀತಿಯಲ್ಲಿ ಮಹಿಮೆಯ ಕಡೆಗೆ ಸೆಳೆಯಲ್ಪಡುತ್ತಾರೆ. ಬಹು ಸಂತೋಷವು ಮತ್ತು ಹೇರಳವಾದ ಸಂಪತ್ತು ಇರುತ್ತದೆ.

**ಯೆಶಾಯ 60:1-5 ಏಳು, ಪ್ರಕಾಶಿಸು, ನಿನಗೆ ಬೆಳಕು ಬಂತು, ಯೆಹೋವನ ತೇಜಸ್ಸು ನಿನ್ನ ಮೇಲೆ ಉದಯಿಸಿದೆ. ಇಗೋ, ಕತ್ತಲು ಭೂಮಿಯನ್ನು ಆವರಿಸಿದೆ, ಕಾರ್ಗತ್ತಲು ಜನಾಂಗಗಳನ್ನು ಮುಚ್ಚಿದೆ; ನಿನ್ನ ಮೇಲಾದರೋ ಯೆಹೋವನು ಉದಯಿಸುವನು, ಆತನ ತೇಜಸ್ಸು ನಿನ್ನಲ್ಲಿ ಕಾಣಿಸುವದು. ಜನಾಂಗಗಳು ನಿನ್ನ ಬೆಳಕಿಗೆ ನೆರೆಯುವವು, ಅರಸರು ನಿನ್ನಲ್ಲಿನ ಉದಯಪ್ರಕಾಶಕ್ಕೆ ಬರುವರು. ಕಣ್ಣೆತ್ತಿ ಸುತ್ತಲು ನೋಡು, ನಿನ್ನ ಮಕ್ಕಳೆಲ್ಲರೂ ಗುಂಪುಕೂಡಿ ನಿನ್ನ ಬಳಿಗೆ ಸೇರುತ್ತಿದ್ದಾರೆ; ಗಂಡುಮಕ್ಕಳು ದೂರದಿಂದ ಸಮೀಪಿಸುತ್ತಾರೆ, ಹೆಣ್ಣುಮಕ್ಕಳು ಕಂಕುಳಿನಲ್ಲಿ ಕುಳಿತು ಬರುತ್ತಾರೆ. ನೀನು ನೋಡಿ ಕಳೆಗೊಳ್ಳುವಿ, ನಿನ್ನ ಹೃದಯವು ಅದರುತ್ತಾ ಉಬ್ಬುವದು; ಏಕೆಂದರೆ ಸಮುದ್ರ ವ್ಯಾಪಾರ ಸಮೃದ್ಧಿಯು ನಿನ್ನ ಕಡೆಗೆ ತಿರುಗುವದು, ಜನಾಂಗಗಳ ಐಶ್ವರ್ಯವು ನಿನಗೆ ದೊರೆಯುವದು.**

ಲೂಕನು ಸಹ ಈ ಬೆಳಕಿನ ಬಗ್ಗೆ ಉಲ್ಲೇಖಿಸಿದ್ದಾನೆ.

**ಲೂಕ 11:36 ನಿನ್ನ ದೇಹವೆಲ್ಲಾ ಬೆಳಕಾಗಿದ್ದು ಒಂದು ಭಾಗದಲ್ಲಿಯೂ ಕತ್ತಲಿಲ್ಲದ್ದಾಗಿದ್ದರೆ ದೀಪವು ಹೊಳೆದು ನಿನಗೆ ಬೆಳಕನ್ನು ಕೊಡುವ**

**ಕಾಲದಲ್ಲಿ ಹೇಗೋ ಹಾಗೆಯೇ ಅದು ಪೂರ್ಣವಾಗಿ ಬೆಳಕಾಗಿರುವದು ಅಂದನು.**

**ಆತನ ಮಹಿಮೆಯನ್ನು ಅಪೇಕ್ಷಿಸುವುದು**

- *ಮೋಶೆ ಮಾಡಿದಂತೆ ಮಾಡಬೇಕು*

ಮೋಶೆಯು ಮಹಿಮೆಯನ್ನು ಕಾಣಬೇಕೆಂದು ಹೇಗೆ ಹಂಬಲಿಸಿದನು ಎಂಬುದನ್ನು ನೆನಪಿಸಿಕೊಳ್ಳಿರಿ.

**ವಿಮೋಚನಕಾಂಡ 33:18 ಅದಕ್ಕೆ ಮೋಶೆ ನಿನ್ನ ಮಹಿಮೆಯನ್ನು ದಯಮಾಡಿ ನನಗೆ ತೋರಿಸು ಎಂದು ಕೇಳಲಾಗಿ,**

- *ದಾವೀದನು ಮಾಡಿದಂತೆ ಮಾಡಬೇಕು*

ದಾವೀದನು ಮಹಿಮೆಗಾಗಿ ಹಂಬಲಿಸಿದನು.

**ಕೀರ್ತನೆಗಳು 26:8 ಯೆಹೋವನೇ, ನಿನ್ನ ನಿವಾಸವು ನನಗೆ ಎಷ್ಟೋ ಪ್ರಿಯ; ನಿನ್ನ ಪ್ರಭಾವಸ್ಥಾನವು ನನಗೆ ಇಷ್ಟ.**

- *ಯೇಸು ಮಾಡಿದಂತೆ ಮಾಡಬೇಕು*

ಯೇಸು ಮಹಿಮೆಗಾಗಿ ಹಂಬಲಿಸಿದನು.

**ಯೋಹಾನ 17:1 ಯೇಸು ಈ ಮಾತುಗಳನ್ನಾಡಿದ ಮೇಲೆ ಆಕಾಶದ ಕಡೆಗೆ ಕಣ್ಣೆತ್ತಿ ಹೇಳಿದ್ದೇನಂದರೆ- ತಂದೆಯೇ ಕಾಲ ಬಂದಿದೆ ನಿನ್ನ ಮಗನನ್ನು ಮಹಿಮೆಪಡಿಸು. ಆಗ ಮಗನು ನಿನ್ನನ್ನು ಮಹಿಮೆಪಡಿಸುವದಕ್ಕಾಗುವದು.**

**ಯೋಹಾನ 17:5 ಈಗ ತಂದೆಯೇ ನೀನು ನಿನ್ನ ಬಳಿಯಲ್ಲಿ ನನ್ನನ್ನು ಮಹಿಮೆಪಡಿಸು. ಲೋಕ ಉಂಟಾಗುವದಕ್ಕಿಂತ ಮುಂಚೆ ನಿನ್ನ ಬಳಿಯಲ್ಲಿ ನನಗಿದ್ದ ಮಹಿಮೆಯಿಂದಲೇ ನನ್ನನ್ನು ಮಹಿಮೆಪಡಿಸು.**

ಯೇಸು ತನ್ನ ಮಹಿಮೆಯನ್ನು ನಮಗೆ ಕೊಡಬೇಕೆಂದು ಹಾತೊರೆಯುತ್ತಾನೆ.

**ಯೋಹಾನ 17:22 ನಾವು ಒಂದಾಗಿರುವ ಪ್ರಕಾರ ಅವರೂ ಒಂದಾಗಿರಬೇಕೆಂದು ನೀನು ನಿನಗೆ ಕೊಟ್ಟಿರುವ ಮಹಿಮೆಯನ್ನು ನಾನು ಅವರಿಗೆ ಕೊಟ್ಟಿದ್ದೇನೆ.**

**ಯೋಹಾನ 17:24 ತಂದೆಯೇ, ನೀನು ಯಾರನ್ನು ನನಗೆ ಕೊಟ್ಟೀಯೋ ಅವರು ನಾನಿರುವ ಸ್ಥಳದಲ್ಲಿ ನನ್ನ ಕೂಡ ಇದ್ದುಕೊಂಡು ಲೋಕವು ಹುಟ್ಟುವದಕ್ಕಿಂತ ಮುಂಚೆಯೇ ನೀನು ನನ್ನನ್ನು ಪ್ರೀತಿಸಿ ನನಗೆ ಕೊಟ್ಟಿರುವ ಮಹಿಮೆಯನ್ನು ನೋಡಬೇಕೆಂದು ಇಚ್ಛೈಸುತ್ತೇನೆ.**

✱ *ಮಹಿಮೆಯನ್ನು ಹೊಂದಿಕೊಳ್ಳುವುದು*

**1 ಪೂರ್ವಕಾಲವೃತ್ತಾಂತ 16:27 ಆತನ ಸಾನಿಧ್ಯದಲ್ಲಿ ಮಾನ ಮಹಿಮೆಗಳು ಆತನ ಪವಿತ್ರಾಲಯದಲ್ಲಿ ಬಲಸಂತೋಷಗಳೂ ಇರುತ್ತವೆ.**

ಆತ್ಮನ ಐಕ್ಯತೆ

ಯೇಸು ಇಡೀ ಮಾನವಕುಲಕ್ಕಾಗಿ ಯಜ್ಞವಾಗಿ ಶಿಲುಬೆಗೇರಿಸಲ್ಪಡುವ ಸಂಗತಿಯನ್ನು ಎದುರುಗೊಳ್ಳ ಹೋಗುತ್ತಿರುವಾಗ, ಆತನು ದೇವರನ್ನು ಮಹಿಮೆಪಡಿಸುವುದಕ್ಕಾಗುವಂತೆ ದೇವರು ಆತನನ್ನು ಮಹಿಮೆಪಡಿಸಬೇಕೆಂದು ಪ್ರಾರ್ಥಿಸಿದನು.

✱ *ತಂದೆಯು ಯೇಸುವಿನಲ್ಲಿ ಮಹಿಮೆ ಹೊಂದಿದನು*

**ಯೋಹಾನ 17:1 ಯೇಸು ಈ ಮಾತುಗಳನ್ನಾಡಿದ ಮೇಲೆ ಆಕಾಶದ ಕಡೆಗೆ ಕಣ್ಣೆತ್ತಿ ಹೇಳಿದ್ದೇನಂದರೆ- ತಂದೆಯೇ ಕಾಲ ಬಂದಿದೆ ನಿನ್ನ ಮಗನನ್ನು ಮಹಿಮೆಪಡಿಸು. ಆಗ ಮಗನು ನಿನ್ನನ್ನು ಮಹಿಮೆಪಡಿಸುವದಕ್ಕಾಗುವದು,**

**ವಚನಗಳು 4-5 ಮಾಡಬೇಕೆಂದು ನೀನು ನನಗೆ ಕೊಟ್ಟ ಕೆಲಸವನ್ನು ನಾನು ನೆರವೇರಿಸಿ ನಿನ್ನನ್ನು ಭೂಲೋಕದಲ್ಲಿ ಮಹಿಮೆಪಡಿಸಿದೆನು. ಈಗ ತಂದೆಯೇ ನೀನು ನಿನ್ನ ಬಳಿಯಲ್ಲಿ ನನ್ನನ್ನು ಮಹಿಮೆಪಡಿಸು. ಲೋಕ ಉಂಟಾಗುವದಕ್ಕಿಂತ ಮುಂಚೆ ನಿನ್ನ ಬಳಿಯಲ್ಲಿ ನನಗಿದ್ದ ಮಹಿಮೆಯಿಂದಲೇ ನನ್ನನ್ನು ಮಹಿಮೆಪಡಿಸು.**

✱ *ಯೇಸು ನಮ್ಮಲ್ಲಿ ಮಹಿಮೆ ಹೊಂದಿದನು*

ಯೇಸು ನಮ್ಮಲ್ಲಿ ಮಹಿಮೆ ಹೊಂದುವನು ಎಂದು ಆತನು ಹೇಳಿದನು.

**ವಚನಗಳು 9-10 ನಾನು ಇವರಿಗೋಸ್ಕರ ಕೇಳಿಕೊಳ್ಳುತ್ತೇನೆ. ಲೋಕಕ್ಕೋಸ್ಕರ ಕೇಳಿಕೊಳ್ಳದೆ ನೀನು ನನಗೆ ಕೊಟ್ಟವರಿಗೋಸ್ಕರವೇ ಕೇಳಿಕೊಳ್ಳುತ್ತೇನೆ ನಿನ್ನವರಾಗಿದ್ದಾರೆ.**

ನನ್ನದೆಲ್ಲಾ ನಿನ್ನದೇ ನಿನ್ನದೆಲ್ಲಾ ನನ್ನದೇ. ಮತ್ತು ಇವರಿಂದ ನನಗೆ ಮಹಿಮೆ ಉಂಟಾಗಿದೆ.

* *ಆತನ ಮಹಿಮೆಯನ್ನು ನಮಗೆ ಕೊಡುತ್ತಿದ್ದಾನೆ*

**ವಚನಗಳು 20-22 ಆದರೆ ಇವರಿಗೋಸ್ಕರ ಮಾತ್ರವಲ್ಲದೆ ಇವರ ವಾಕ್ಯದಿಂದ ನನ್ನನ್ನು ನಂಬುವವರಿಗೋಸ್ಕರ ಸಹ ಕೇಳಿಕೊಳ್ಳುತ್ತೇನೆ. ನೀನು ನನ್ನನ್ನು ಕಳುಹಿಸಿಕೊಟ್ಟಿದ್ದೀ ಎಂದು ಲೋಕವು ನಂಬುವದಕ್ಕಾಗಿ ಅವರೆಲ್ಲರೂ ಒಂದಾಗಿರಬೇಕೆಂತಲೂ ತಂದೆಯೇ ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರೂ ನಮ್ಮಲ್ಲಿ ಇರಬೇಕೆಂತಲೂ ಕೇಳಿಕೊಳ್ಳುತ್ತೇನೆ. ನಾವು ಒಂದಾಗಿರುವ ಪ್ರಕಾರ ಅವರೂ ಒಂದಾಗಿರಬೇಕೆಂದು ನೀನು ನನಗೆ ಕೊಟ್ಟಿರುವ ಮಹಿಮೆಯನ್ನು ನಾನು ಅವರಿಗೆ ಕೊಟ್ಟಿದ್ದೇನೆ.**

ನಾವು ಆತನ ಮಹಿಮೆಯನ್ನು ನೋಡುತ್ತಾ ನಿತ್ಯತೆಯನ್ನು ಕಳೆಯಬೇಕಾಗಿದೆ.

**ವಚನ 24 ತಂದೆಯೇ, ನೀನು ಯಾರನ್ನು ನನಗೆ ಕೊಟ್ಟೀಯೋ ಅವರು ನಾನಿರುವ ಸ್ಥಳದಲ್ಲಿ ನನ್ನ ಕೂಡ ಇದ್ದುಕೊಂಡು ಲೋಕವು ಹುಟ್ಟುವದಕ್ಕಿಂತ ಮುಂಚೆಯೇ ನೀನು ನನ್ನನ್ನು ಪ್ರೀತಿಸಿ ನನಗೆ ಕೊಟ್ಟಿರುವ ಮಹಿಮೆಯನ್ನು ನೋಡಬೇಕೆಂದು ಇಚ್ಛೈಸುತ್ತೇನೆ.**

ದೇವರಿಗಾಗಿ ಮತ್ತು ಆತನ ಮಹಿಮೆಗಾಗಿ ಇರುವ ದಾಹ

ನಾವು ಆತನಿಗಾಗಿ ಹೇಗೆ ಕಡಿಮೆ ದಾಹವುಳ್ಳವರಾಗಿರಬಹುದು? ನಾವು ಎಷ್ಟು ಹೆಚ್ಚಾಗಿ ದಾಹವುಳ್ಳವರಾಗಿರುತ್ತೇವೋ ಅಷ್ಟು ಹೆಚ್ಚಾಗಿ ನಾವು ಹೊಂದಿಕೊಳ್ಳುತ್ತೇವೆ.

**ಕೀರ್ತನೆಗಳು 63:1,2 ದೇವರೇ, ನೀನೇ ನನ್ನ ದೇವರು; ನಾನು ನಿನ್ನ ದರ್ಶನವನ್ನು ಕುತೂಹಲದಿಂದ ಎದುರುನೋಡುತ್ತೇನೆ. ನೀರಿಲ್ಲದೆ ಒಣಗಿದ ಭೂಮಿಯಲ್ಲಿದ್ದವನು ನೀರಿಗಾಗಿಯೋ ಎಂಬಂತೆ ನನ್ನ ಆತ್ಮವು ನಿನಗಾಗಿ ಆತುರಗೊಳ್ಳುತ್ತದೆ; ಶರೀರವು ಕಂದಿಹೋಗುತ್ತದೆ. ನಿನ್ನ ಮಂದಿರದಲ್ಲಿ ನಾನು ನಿನ್ನ ಮಹತ್ತನ್ನೂ ಪ್ರಭಾವವನ್ನೂ ಕಂಡ ಪ್ರಕಾರ ಈಗಲೂ ಕಾಣಬೇಕೆಂದು ಅಪೇಕ್ಷಿಸುತ್ತೇನೆ.**

**ಕೀರ್ತನೆಗಳು 42:1,2 ದೇವರೇ, ಬಾಯಾರಿದ ಜಿಂಕೆಯು ನೀರಿನ ತೊರೆಗಳನ್ನು ಹೇಗೋ ಹಾಗೆಯೇ ನನ್ನ ಮನಸು ನಿನ್ನನ್ನು**

**ಬಯಸುತ್ತದೆ. ನನ್ನ ಮನಸ್ಸು ದೇವರಿಗಾಗಿ, ಚೈತನ್ಯಸ್ವರೂಪನಾದ ದೇವರಿಗಾಗಿ ಹಾರೈಸುತ್ತದೆ; ನಾನು ಯಾವಾಗ ಹೋಗಿ ದೇವರ ಸನ್ನಿಧಿಯಲ್ಲಿ ಸೇರುವೆನೋ?**

**ಮತ್ತಾಯ 5:6 ನೀತಿಗೆ ಹಸಿದು ಬಾಯಾರಿದವರು ಧನ್ಯರು ಅವರಿಗೆ ತೃಪ್ತಿಯಾಗುವದು.**

ಮುನ್ನುಗ್ಗುವುದು

ನಾವು ಆತನನ್ನು ಹಿಡಿದುಕೊಳ್ಳಲು "ಮುನ್ನುಗ್ಗ" ಬೇಕು.

**ಫಿಲಿಪ್ಪಿ 3:12 ... ನಾನು ಯಾವದನ್ನು ಹೊಂದುವದಕ್ಕಾಗಿ ಕ್ರಿಸ್ತ ಯೇಸು ನನ್ನನ್ನು ಹಿಡಿದು ಕೊಂಡನೋ ಅದನ್ನು ಹಿಡಿದುಕೊಳ್ಳುವದಕ್ಕೋಸ್ಕರ ಓಡುತ್ತಾ ಇದ್ದೇನೆ.**

ದಾವೀದನು ಹೀಗೆ ಬರೆದಿದ್ದಾನೆ,

**ಕೀರ್ತನೆಗಳು 63:8 ನನ್ನ ಆತ್ಮವು ನಿನ್ನನ್ನು ಅಂಟಿಕೊಂಡು ಹಿಂಬಾಲಿಸಿರುವದು ...**

ಒಳಗೆ ಬರುವುದಕ್ಕಾಗಿ ಹೊರಗೆ ಬನ್ನಿರಿ

ಇದೇ ಪದಗಳಿಂದ ನಾವು ಈ ಪಾಠವನ್ನು ಪ್ರಾರಂಭಿಸಿದ್ದೇವೆ. ದೇವರು ನಮಗಾಗಿ ಇಟ್ಟಿರುವ ಎಲ್ಲದರ ಬಳಿಗೆ ಬರಲು ನಾವು ಹೊರಬರಬೇಕು ಮತ್ತು ಪ್ರತ್ಯೇಕವಾಗಿರಬೇಕು. ದೇವರು ತನ್ನ ಅಪಾರವಾದ ಮಹಿಮೆಯಿಂದ ನಮ್ಮ ಮಧ್ಯದಲ್ಲಿ ಬರುವುದಕ್ಕಿಂತ ಮೊದಲು, ನಾವು ಬೆರಕೆಯಾಗಿರುವಂಥ ಪರಿಸ್ಥಿತಿಗಳಿಂದ ನಮ್ಮನ್ನು ಪ್ರತ್ಯೇಕಿಸಿಕೊಳ್ಳಬೇಕು. ಇಬ್ರಿಯ ಪುಸ್ತಕದ ಬರಹಗಾರನು ಇದನ್ನು ಓಟಕ್ಕೆ ಹೋಲಿಸಿದ್ದಾನೆ. ಅವನು ಹೀಗೆ ಹೇಳಿದ್ದಾನೆ,

**ಇಬ್ರಿಯ 12:1 ಆದಕಾರಣ ಇಷ್ಟು ಮಂದಿ ಸಾಕ್ಷಿಯವರು ಮೇಘದೋಪಾದಿಯಲ್ಲಿ ನಮ್ಮ ಸುತ್ತಲು ಇರುವದರಿಂದ ನಮಗೆ ಅಭ್ಯಂತರ ಮಾಡುವ ಎಲ್ಲಾ ಭಾರವನ್ನು ಹತ್ತಿಕೊಳ್ಳುವ ಪಾಪವನ್ನು ನಾವು ಸಹ ತೆಗೆದಿಟ್ಟು.**

ಆ ಭಾರವು ಎಂಥದ್ದೆ ಆಗಿರಲಿ, ಅದು ನಮ್ಮ ಮತ್ತು ದೇವರ ನಡುವೆ ಇರುವುದಕ್ಕೆ ಯೋಗ್ಯವಲ್ಲ. ಯಾವುದೇ ಸಂಬಂಧವಾಗಿರಲಿ, ಯಾವುದೇ ಸಂಸ್ಥೆಯಾಗಿರಲಿ, ಯಾವುದೇ ಸಂಪ್ರದಾಯಗಳಾಗಿರಲಿ,

ಭೂತಕಾಲದ ಯಾವುದೇ ಸಂಬಂಧಗಳಾಗಿರಲಿ, ನಮ್ಮ ಮತ್ತು ದೇವರ ಹಾಗೂ ನಮ್ಮ ಜೀವನಕ್ಕಾಗಿ ಆತನು ಇಟ್ಟಿರುವ ಉದ್ದೇಶದ ನಡುವೆ ಬರಲು ಅವಕಾಶ ಮಾಡಿಕೊಡುವಷ್ಟು ಅವು ಯೋಗ್ಯವಲ್ಲ.

ನಾವು ನಮ್ಮ ತೀರ್ಮಾನವನ್ನು ಮಾಡಿಕೊಂಡಿದ್ದೇವೆ. ಫಿಲಿಪ್ಪಿ 3:13 ಮತ್ತು 14 ರಲ್ಲಿ ಪೌಲನು ಹೇಳಿರುವ ಮಾತುಗಳೊಂದಿಗೆ ನಾವು ಅದನ್ನು ಘೋಷಿಸಬಹುದು,

**ಸಹೋದರರೇ, ನಾನಂತೂ ಹಿಡಿದು ಕೊಂಡವನೆಂದು ನನ್ನನ್ನು ಈ ವರೆಗೂ ಎಣಿಸಿಕೊಳ್ಳುವದಿಲ್ಲ; ಆದರೆ ಒಂದು, ನಾನು ಹಿಂದಿನ ಸಂಗತಿಗಳನ್ನು ಮರೆತುಬಿಟ್ಟು ಮುಂದಿನವುಗಳನ್ನು ಹಿಡಿಯುವದಕ್ಕೆ ಎದೆಬೊಗ್ಗಿದವನಾಗಿ ದೇವರು ಕ್ರಿಸ್ತನ ಮೂಲಕವಾಗಿ ನಮ್ಮನ್ನು ಮೇಲಕ್ಕೆ ಕರೆದು ನಮ್ಮ ಮುಂದೆ ಇಟ್ಟಿರುವ ಬಿರುದನ್ನು ಗುರಿಮಾಡಿಕೊಂಡು ಓಡುತ್ತಾ ಇದ್ದೇನೆ.**

**ಪರಾಮರ್ಶೆಗಾಗಿರುವ ಪ್ರಶ್ನೆಗಳು**

---

1. ಮೋಶೆಯ ತೀರ್ಮಾನ ಏನಾಗಿತ್ತು? ಇದು ದುಬಾರಿಯಾದ ತೀರ್ಮಾನವಾಗಿತ್ತಾ?

2. ಯಾಕೋಬನ ಸಂತತಿಯ ಆರು ಗುಣಲಕ್ಷಣಗಳನ್ನು ತಿಳಿಸಿರಿ.

## ಪಾಠ 3

# ಮಹಿಮೆಯನ್ನು ಪ್ರವೇಶಿಸುವುದು

**ಮೋಶೆಯ ದೇವದರ್ಶನ ಗುಡಾರ**

ಮೋಶೆಯ ದೇವದರ್ಶನ ಗುಡಾರವು ಪ್ರಗತಿಯ ಪ್ರಕಟಣೆಯನ್ನು ನಮಗೆ ಕೊಡುತ್ತದೆ, ಆ ಮೂಲಕ ನಾವು ಇಂದು ದೇವರ ಸನ್ನಿಧಿಗೆ ಪ್ರವೇಶಿಸಬಹುದು.

ಮೋಶೆಯ ದೇವದರ್ಶನ ಗುಡಾರವು "ಪರಲೋಕದಲ್ಲಿರುವ ವಸ್ತುಗಳ ಪ್ರತಿರೂಪವೂ ಮತ್ತು ಛಾಯೆಯು" ಆಗಿದೆ ಎಂದು ಇಬ್ರಿಯ ಪುಸ್ತಕದ ಲೇಖಕನು ಹೇಳುತ್ತಾನೆ. ಇದು ಚಾಕ್ಷುಷ ಪ್ರದರ್ಶನವಾಗಿದ್ದು, ಈ ಪ್ರಕ್ರಿಯೆಯು ನಾವು ಇಂದು ದೇವರ ಅದ್ಭುತಕರವಾದ ಪ್ರಸನ್ನತೆಯ ಮಹಿಮೆಯನ್ನು ಪ್ರವೇಶಿಸಬಹುದು ಎಂಬುದನ್ನು ಪ್ರಕಟಪಡಿಸುತ್ತದೆ.

**ಇಬ್ರಿಯ 8:5 ಅವರು ಪರಲೋಕದಲ್ಲಿರುವ ದೇವಾಲಯದ ಪ್ರತಿರೂಪವೂ ಛಾಯೆಯೂ ಆಗಿರುವ ಆಲಯದಲ್ಲಿ ಯಾಜಕತ್ವವನ್ನು**

**ನಡಿಸುವವರು. ಮೋಶೆಯು ದೇವದರ್ಶನದ ಗುಡಾರವನ್ನು ಮಾಡುವದಕ್ಕಿರುವಾಗ ಬೆಟ್ಟದಲ್ಲಿ ನಾನು ನಿನಗೆ ತೋರಿಸಿದ ಮಾದರಿಯ ಪ್ರಕಾರವೇ ಎಲ್ಲವನ್ನು ಮಾಡಿಸಬೇಕು. ಎಂಬ ದೈವೋಕ್ತಿಯು ಅವನಿಗೆ ಉಂಟಾಯಿತಲ್ಲಾ.**

**ಹೊರಗಣ ಅಂಗಳ**

---

**ದ್ವಾರಗಳ ಮೂಲಕ ಪ್ರವೇಶಿಸುವುದು**

**ಕೀರ್ತನೆ 100:4 ಕೃತಜ್ಞತಾಸ್ತುತಿಯೊಡನೆ ಆತನ ಮಂದಿರ ದ್ವಾರಗಳಿಗೂ ಕೀರ್ತನೆಯೊಡನೆ ಆತನ ಅಂಗಳಗಳಿಗೂ ಬನ್ನಿರಿ; ಆತನ ಉಪಕಾರ ಸ್ಮರಿಸಿರಿ; ಆತನ ನಾಮವನ್ನು ಕೊಂಡಾಡಿರಿ.**

ನಮ್ಮ ಮಹಾ ರಕ್ಷಣೆಗಾಗಿ ಮತ್ತು ಆತನು ನಮಗಾಗಿ ಒದಗಿಸಿರುವ ಎಲ್ಲದಕ್ಕಾಗಿ ದೇವರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಯ ವ್ಯಕ್ತಪಡಿಸುವುದರೊಂದಿಗೆ ದ್ವಾರಗಳ ಮೂಲಕ ಬರುವುದರ ಮೂಲಕ ನಾವು ಪ್ರಾರಂಭಿಸಬೇಕು.

ಬಾಗಿಲು, ಅಥವಾ ಮಾರ್ಗವು ಯೇಸುವಿನ ಮೂಲಕವಿದೆ.

**ಯೋಹಾನ 14:6 ಯೇಸು ಅವನಿಗೆ ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ.**

ಯೇಸು ಕ್ರಿಸ್ತನ ಮುಖಾಂತರ ರಕ್ಷಣೆಯ ದ್ವಾರದ ಮೂಲಕ ಬರುವ ಮುಖೇನ ದೇವರ ಅದ್ಭುತಕರವಾದ ಪ್ರಸನ್ನತೆಯ ಮಹಿಮೆಯೊಳಕ್ಕೆ ಪ್ರವೇಶಿಸುವ ನಮ್ಮ ಪ್ರಯಾಣವನ್ನು ನಾವು ಪ್ರಾರಂಭಿಸುತ್ತೇವೆ. ಕರ್ತನೊಂದಿಗಿನ ನಿಕಟ ಸಂಬಂಧವನ್ನು ಹೊಂದಿಕೊಳ್ಳುವುದಕ್ಕೆ ಮುಂದೆ ಸಾಗುವ ಮತ್ತು ಪ್ರಯತ್ನಿಸುವ ಬದಲು ಅನೇಕರು ದ್ವಾರಗಳ ಒಳಗೆ ವಾಸಿಸಲು ತೀರ್ಮಾನಿಸಿಕೊಂಡಿದ್ದಾರೆ. ಅವರು ವಿಶ್ವಾಸಿಗಳಾಗಿದ್ದರೆ, ಆದರೆ ಇನ್ನೂ ಶಿಷ್ಯರಾಗಿಲ್ಲ.

ಅವರು ಐಗುಪ್ತವನ್ನು ಬಿಟ್ಟು ಬಂದಿದ್ದಾರೆ ಆದರೆ ಇನ್ನೂ ವಾಗ್ದತ್ತ ದೇಶವನ್ನು ಪ್ರವೇಶಿಸಿಲ್ಲ. ದೇವರೊಂದಿಗಿನ ಅವರ ಸಂಬಂಧ ದೂರವಾಗಿದೆ, ಅವರು ದೇವರ ಹತ್ತಿರವಾಗಿ ಜೀವಿಸುತ್ತಿಲ್ಲ.

ಹೊರಗಣ ಅಂಗಳದಲ್ಲಿ ಯಾವುದೇ ಮರೆಯು ಇರಲಿಲ್ಲ, ಸುತ್ತಮುತ್ತಲಿನ ಎಲ್ಲಾ ಶಬ್ದಗಳು ಕೇಳುತ್ತಿದ್ದವು. ಆತ್ಮಿಕ ಮಂಡಲದಲ್ಲಿ

ಇಲ್ಲಿ ವಾಸಿಸುತ್ತಿರುವುದನ್ನು ಎಂದರೆ ಗೋಡೆಯ ಮೇಲಿನಿಂದ ಬರುವ ಶತ್ರುಗಳ "ಅಗ್ನಿ ಬಾಣಗಳಿಂದ" ನಮಗೆ ಯಾವುದೇ ಸಂರಕ್ಷಣೆ ಇರುವುದಿಲ್ಲ ಎಂದರ್ಥ.

**ಪಾಪದ ಪ್ರಜ್ಞೆಯುಳ್ಳವರಾಗಿರುವುದು**

ಲೋಕಕ್ಕೆ ಹತ್ತಿರವಾಗಿ ಅಪಾಯಕ್ಕೊಳಪಟ್ಟು ಜೀವಿಸಲು ನಿರ್ಧರಿಸಿದವರು ಲೋಕದ ಗೊಂದಲ, ಪ್ರಭಾವ ಮತ್ತು ಪ್ರಲೋಭನೆಗಳಿಗೆ ಗುರಿಯಾಗುತ್ತಾರೆ. ಅವರು ಹಿಂಜಾರಿ ಹೋಗಲು ಅಥವಾ ಬಿದ್ದು ಹೋಗಲು ಬಯಸುತ್ತಾರೆ.

**ಸರ್ವಾಂಗಹೋಮದ ಯಜ್ಞವೇದಿ**

ಹೊರಗಣ ಅಂಗಳದಲ್ಲಿ ತಾಮ್ರದ ಯಜ್ಞವೇದಿ ಮತ್ತು ತಾಮ್ರದ ಬೋಗುಣಿ ಇತ್ತು. ತಾಮ್ರವು ಪಾಪದ ಕುರಿತಾದ ನ್ಯಾಯತೀರ್ಪಿನ ಬಗ್ಗೆ ಹೇಳುತ್ತದೆ.

ತಾಮ್ರದ ಯಜ್ಞವೇದಿಯು ಸರ್ವಾಂಗಹೋಮಗಳನ್ನು, ಸಮಾಧಾನ ಯಜ್ಞಗಳನ್ನು ಮತ್ತು ದೋಷಪರಿಹಾರಕ ಯಜ್ಞಗಳನ್ನು ಅರ್ಪಿಸುವ ಸ್ಥಳವಾಗಿತ್ತು. ಯೇಸು ನಮ್ಮ ಪಾಪದ ನ್ಯಾಯತೀರ್ಪನ್ನು ತನ್ನ ಮೇಲೆ ಹೊತ್ತುಕೊಂಡನು.

**ತಾಮ್ರದ ಬೋಗುಣಿ**

ತಾಮ್ರದ ಬೋಗುಣಿಯು ಕರ್ಮಾಚರಣೆಯ ಶುದ್ಧೀಕರಣಕ್ಕಾಗಿತ್ತು, ಮತ್ತು ಇದು ಯೇಸುವಿನ ರಕ್ತವು ನಮ್ಮ ಶುದ್ಧೀಕರಿಸುವುದರ ಹೋಲಿಕೆಯಾಗಿದೆ.

ವಿಶ್ವಾಸಿಗಳಾದ ನಾವು ಪಾಪ ಮಾಡಿದಾಗ, ದೇವರು ನಮ್ಮನ್ನು ಕ್ಷಮಿಸಿ ಎಲ್ಲಾ ಪಾಪಗಳಿಂದ ಶುದ್ಧೀಕರಿಸುವ ಒದಗಿಸುವಿಕೆಯನ್ನು ಉಂಟುಮಾಡಿದ್ದಾನೆ.

**1 ಯೋಹಾನ 1:9 ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು.**

ನಾವು "ಪರಿಶುದ್ಧ ಸ್ಥಳ" ಕ್ಕೆ ಹೋಗಬೇಕಾದರೆ ಇದು ಬಹಳ ಮುಖ್ಯ ಏಕೆಂದರೆ ಪಾಪಕ್ಕೆ ದೇವರ ಪ್ರಸನ್ನತೆಯ ಪರಿಶುದ್ಧತೆಗೆ ಬರಲು ಸಾಧ್ಯವಿಲ್ಲ.

ಆದಾಗ್ಯೂ, ಆತ್ಮಿಕವಾಗಿ ಹೊರಗಣ ಅಂಗಳದಲ್ಲಿ ಇರುವುದು ಎಂದರೆ ಪಾಪದ ಮತ್ತು ನ್ಯಾಯತೀರ್ಪಿನ ಕುರಿತು ಸತತವಾದ ಜ್ಞಾಪನೆ ಉಳ್ಳವರಾಗಿರುವುದು. ನಾವು "ಹೊರಗಣ ಅಂಗಳದ ಕ್ರೈಸ್ತರಾಗಿ" ಬದುಕುವುದನ್ನು ಬಿಟ್ಟು ಅದಕ್ಕಿಂತ ಹೆಚ್ಚಾಗಿ ಮುಂದೆ ಸಾಗಬೇಕೆಂದು ದೇವರು ಬಯಸುತ್ತಾನೆ. ನಾವು ಆತನೊಂದಿಗಿರುವ ಅನ್ಯೋನ್ಯತೆಯ ಅಗಾಧವಾದ ಸ್ಥಳಕ್ಕೆ ಪ್ರವೇಶಿಸಬೇಕೆಂದು ಆತನು ಬಯಸುತ್ತಾನೆ.

**ಲೋಟನು**

ಲೋಟನು ಸೊದೋಮಿನಲ್ಲಿ ವಾಸಿಸಲು ಆಯ್ಕೆಮಾಡಿಕೊಂಡಾಗ "ಹೊರಂಗಣ ಅಂಗಳದ" ಕ್ರೈಸ್ತರಿಗೆ ಅವನು ದೃಷ್ಟಾಂತವಾಗಿದ್ದಾನೆ.

**ಆದಿಕಾಂಡ 13:12 ಹೀಗೆ ಅವರಿಬ್ಬರೂ ಪ್ರತ್ಯೇಕವಾದರು; ಅಬ್ರಾಮನು ಕಾನಾನ್ ದೇಶದಲ್ಲಿ ವಾಸಮಾಡಿದನು; ಲೋಟನು ಯೊರ್ದನ್ ಹೊಳೆಯ ಸುತ್ತಣ ಊರುಗಳಲ್ಲಿ ಗುಡಾರ ಹಾಕಿಸಿ ವಸತಿ ಮಾಡುತ್ತಾ ಸೊದೋಮಿಗೆ ಬಂದನು.**

**ವಚನ 13 ಆದರೆ ಸೊದೋಮ್ ಪಟ್ಟಣದವರು ದುಷ್ಟರೂ ಯೆಹೋವನಿಗೆ ಮಹಾಪರಾಧಿಗಳೂ ಆಗಿದ್ದರು.**

ಅವರು ಸುಲಭವಾಗಿ ಸೈತಾನನಿಂದ ಪ್ರಲೋಭನೆಗೆ ಒಳಗಾದರು ಮತ್ತು ಪೀಡಿಸಲ್ಪಟ್ಟರು.

ಅವರ ಆತ್ಮಿಕ ಜೀವನವು ಅನೇಕವೇಳೆ ನೀರಸ, ನಿಷ್ಕ್ರಿಯ, ದುರ್ಬಲ ಮತ್ತು ಶಕ್ತಿಹೀನವಾದದ್ದು ಆಗಿರುತ್ತದೆ. ಅವರು ಅನೇಕವೇಳೆ ಸೋತು ಸೊರಗಿ ಹೋಗಿರುವ ಜೀವನವನ್ನು ನಡೆಸುತ್ತಾರೆ.

ಆದಾಗ್ಯೂ, ಹೊರಂಗಣ ಅಂಗಳದಲ್ಲಿ, ಪ್ರತಿಯೊಬ್ಬರೂ ದೇವರೊಂದಿಗೆ ನಿಕಟವಾದ ಹಾಗೂ ಅತಿ ಆಪ್ತವಾದ ಸಂಬಂಧದ ಮತ್ತು ಅನ್ಯೋನ್ಯತೆಯ ಒಳಕ್ಕೆ ಪ್ರವೇಶಿಸಲು ದೇವರು ಅವಕಾಶವನ್ನು ಮಾಡಿಕೊಟ್ಟಿದ್ದಾನೆ.

**ಪರಿಶುದ್ಧ ಸ್ಥಳ**

ಹಳೆಯ ಒಡಂಬಡಿಕೆಯ ಕಾಲದಲ್ಲಿ, ಯಾಜಕರು ಕರ್ತನಿಗೆ ಸೇವೆ ಮಾಡಲು ಪ್ರತಿದಿನವು ಪರಿಶುದ್ಧ ಸ್ಥಳಕ್ಕೆ ಹೋಗುತ್ತಿದ್ದರು. ವಿಶ್ವಾಸಿಗಳಾಗಿರುವ ಯಾಜಕರಾದ ನಾವು ಪರಿಶುದ್ಧ ಸ್ಥಳಕ್ಕೆ ಹೋಗಿ ಕರ್ತನಿಗೆ ಸೇವೆಯನ್ನು ಮಾಡಬೇಕು.

**ಅಪೊಸ್ತಲರ ಕೃತ್ಯಗಳು 13:2 ಇವರ ಕರ್ತನನ್ನು ಸೇವಿಸುತ್ತಾ ಉಪವಾಸಮಾಡುತ್ತಾ ಇದ್ದಾಗ ಪವಿತ್ರಾತ್ಮನು - ನಾನು ಬಾರ್ನಬ ಸೌಲರನ್ನು ಕರೆದ ಕೆಲಸಕ್ಕಾಗಿ ಅವರನ್ನು ಪ್ರತ್ಯೇಕಿಸಿರಿ ಎಂದು ಹೇಳಿದನು.**

ಪರಿಶುದ್ಧ ಸ್ಥಳವನ್ನು ಮುಗ್ಧ ಪ್ರಾಣಿಗಳ ಚರ್ಮದಿಂದ ಹೊದಿಸಲಾಗಿತ್ತು ಆ ಹೊದಿಕೆಯನ್ನು ಒದಗಿಸಲು ಅವುಗಳು ತಮ್ಮ ರಕ್ತವನ್ನು ಸುರಿಸಬೇಕಾಗಿತ್ತು. "ಲೋಕದ ಪಾಪಗಳನ್ನು ನಿವಾರಿಸುವ ದೇವರ ಕುರಿಮರಿ" ಆದ ಯೇಸುವಿನ ರಕ್ತವು ಸುರಿಸಲ್ಪಟ್ಟಿತು ಆ ರಕ್ತವು ಒದಗಿಸಿರುವ "ಹೊದಿಕೆಯಿರುವ/ಮರೆಯುಳ್ಳ" ಸ್ಥಳವು ಇಂದು ವಿಶ್ವಾಸಿಗಳಾದ ನಮಗಿದೆ.

**ಪವಿತ್ರಾತ್ಮನ ಪ್ರಜ್ಞೆಯುಳ್ಳವರಾಗಿರುವುದು**

ಪರಿಶುದ್ಧ ಸ್ಥಳದಲ್ಲಿರುವುದು ಎಂದರೆ ಸಂರಕ್ಷಣೆಯ ಸ್ಥಳದಲ್ಲಿರುವುದು ಎಂದರ್ಥ ಮತ್ತು ಇದು ಹೊರಗಿನ ಪ್ರಪಂಚದ ಶಬ್ದಗಳಿಂದ ನಾವು ಬೇರ್ಪಟ್ಟು ಇರುವಂಥ ಸ್ಥಳವಾಗಿದೆ. ಇದು ದೇವರ ಸ್ವರವನ್ನು ಕೇಳಿಸಿಕೊಳ್ಳಲು ಸುಲಭವಾದ ಸ್ಥಳವಾಗಿದೆ.

**ಬಂಗಾರದ ದೀಪಸ್ತಂಭ,**

**ನೈವೇದ್ಯದ ರೊಟ್ಟಿಯ ಮೇಜು,**

**ಧೂಪವೇದಿ**

ಪರಿಶುದ್ಧ ಸ್ಥಳದಲ್ಲಿ, ಮೂರು ಪೀಠೋಪಕರಣಗಳು ಇದ್ದವು, ಪ್ರತಿಯೊಂದೂ ನಿಖರವಾದ ವಿನ್ಯಾಸದ ಪ್ರಕಾರ ಮಾಡಲ್ಪಟ್ಟಿದ್ದವು. ಇವುಗಳಲ್ಲಿ ಪ್ರತಿಯೊಂದೂ ವಸ್ತುವು ಆತ್ಮಿಕ ಸತ್ಯದ ಪ್ರಕಟಣೆಯನ್ನು ಒದಗಿಸಿ ಕೊಡುತ್ತಿದ್ದವು.

ಬಂಗಾರದ ದೀಪಸ್ತಂಭಕ್ಕೆ ಪ್ರತಿದಿನವು ತಾಜಾವಾದ ತೈಲವನ್ನು ಹಾಕಬೇಕಿತ್ತು. ಇದು ನಮ್ಮ ಜೀವನದಲ್ಲಿ ಪವಿತ್ರಾತ್ಮನೆಂಬ ತೈಲದಿಂದ ಪ್ರತಿದಿನವು ತುಂಬಿರುವಂಥ ಕಾರ್ಯಕ್ಕೆ

ಹೋಲಿಕೆಯಾಗಿದೆ. ಇಲ್ಲಿ, "ನೈಸರ್ಗಿಕ ಬೆಳಕಿಗೆ" ಬದಲಾಗಿ ಪವಿತ್ರಾತ್ಮನ ಬೆಳಕು ಇದೆ. ಪರಿಶುದ್ಧ ಸ್ಥಳದಲ್ಲಿರುವುದು ಎಂದರೆ ಪವಿತ್ರಾತ್ಮನೊಂದಿಗಿನ ನಿಕಟವಾದ ಸಂಬಂಧವುಳ್ಳ ಸ್ಥಳದಲ್ಲಿರುವುದು ಎಂದರ್ಥ.

## ಅತಿ ಪರಿಶುದ್ಧ ಸ್ಥಳ

---

### ಒಡಂಬಡಿಕೆಯ ಮಂಜೂಷ

ಒಡಂಬಡಿಕೆಯ ಮುಂಜೂಷವನ್ನು ಅತಿ ಪರಿಶುದ್ಧ ಸ್ಥಳದಲ್ಲಿ ಅಥವಾ "ಮಹಾ ಪರಿಶುದ್ಧ ಸ್ಥಳ" ದಲ್ಲಿ ಇಡಲಾಗಿತು, ಇದು ದೇವರ ಸ್ವರ್ಗೀಯ ಸಿಂಹಾಸನವನ್ನು ಪ್ರತಿನಿಧಿಸುತ್ತದೆ.

ಅತಿ ಪರಿಶುದ್ಧ ಸ್ಥಳದಲ್ಲಿರುವುದು ಎಂದರೆ ತಂದೆಯ ಸಿಂಹಾಸನ ಇರುವ ಕೋಣೆಯಲ್ಲಿರುವುದು ಎಂದರ್ಥ. ಅತಿ ಪರಿಶುದ್ಧ ಸ್ಥಳದಲ್ಲಿರುವುದು ಎಂದರೆ ಸಮೃದ್ಧಿಕರವಾದ ಜೀವನವನ್ನು, ಅರ್ಥಪೂರ್ಣವಾದ ಜೀವನವನ್ನು, ಉತ್ಕೃಷ್ಟವಾದ ಜೀವನವನ್ನು, ಪುನರುತ್ಥಾನಗೊಂಡಿರುವ ಜೀವನವನ್ನು, ಜೊಯಿ ಜೀವನವನ್ನು ಮತ್ತು ಮಹಿಮಾನ್ವಿತವಾದ ಜೀವನವನ್ನು ಅನುಭವಿಸುವುದು ಎಂದರ್ಥ.

### ದೇವರ ಪ್ರಜ್ಞೆಯುಳ್ಳವರಾಗಿರುವುದು

ಅತಿ ಪರಿಶುದ್ಧ ಸ್ಥಳವು ದೇವರು ಯಾರಾಗಿದ್ದಾನೆ ಎಂಬುದರ ಕುರಿತು ನಾವು ಸಂಪೂರ್ಣವಾಗಿ ಪ್ರಜ್ಞೆಯುಳ್ಳವರಾಗಿರುವಂಥ ಸ್ಥಳವಾಗಿದೆ. ಇಲ್ಲಿ ನಾವು ನಮ್ಮ ಆತ್ಮಿಕ ಇಂದ್ರಿಯಗಳ ಮೂಲಕ ಆತ್ಮ ಮಂಡಲದಲ್ಲಿ ಕಾರ್ಯನಿರ್ವಹಿಸುತ್ತೇವೆ.

**ಇಬ್ರಿಯ 5:14; 6:1 ಗಟ್ಟಿಯಾದ ಆಹಾರವು ಪ್ರಾಯಸ್ಥರಿಗೋಸ್ಕರ ಅಂದರೆ ಜ್ಞಾನೇಂದ್ರಿಯಗಳನ್ನು ಸಾಧನೆಯಿಂದ ಶಿಕ್ಷಿಸಿಕೊಂಡು ಇದು ಒಳ್ಳೆಯದು ಅದು ಕೆಟ್ಟದ್ದು ಎಂಬ ಭೇಧವನ್ನು ತಿಳಿದವರಿಗೋಸ್ಕರವಾಗಿವೆ. ಆದುದರಿಂದ ನಿರ್ಜಿವ ಕರ್ಮಗಳ ಮೇಲಣ ನಂಬಿಕೆಯನ್ನು ಬಿಟ್ಟು ಬಿಟ್ಟು ದೇವರಲ್ಲಿಯೇ ನಂಬಿಕೆಯಿಡಬೇಕಾದದ್ದು.**

ಅತಿ ಪರಿಶುದ್ಧ ಸ್ಥಳದಲ್ಲಿರುವುದು ಎಂದರೆ ದೇವರ ಅಗಾಧವಾದ ಮಹಿಮೆಯ ಮೇಘದಲ್ಲಿ ಆವರಿಸಲ್ಪಟ್ಟವರಾಗಿರುವುದು ಎಂದರ್ಥ.

ದೇವದರ್ಶನ ಗುಡಾರವನ್ನು ಕಟ್ಟಿಸಿ ಮುಗಿಸಿದ ನಂತರ, ಒಡಂಬಡಿಕೆಯ ಮುಂಜೂಷವನ್ನು ಅದರಲ್ಲಿ ತಂದಿಡಲಾಯಿತು.

**ವಿಮೋಚನಕಾಂಡ 40:34-37 ಆಗ ಮೇಘವು ದೇವದರ್ಶನದ ಗುಡಾರವನ್ನು ಮುಚ್ಚಿತು; ಯೆಹೋವನ ತೇಜಸ್ಸು ಗುಡಾರವನ್ನು ತುಂಬಿತು. ಮೇಘವು ದೇವದರ್ಶನದ ಗುಡಾರದ ಮೇಲೆ ನೆಲೆಯಾಗಿರುವದರಿಂದಲೂ ಯೆಹೋವನ ತೇಜಸ್ಸು ಗುಡಾರದೊಳಗೆ ತುಂಬಿರುವದರಿಂದಲೂ ಮೋಶೆ ಗುಡಾರದಲ್ಲಿ ಹೋಗಲಾರದೆ ಇದ್ದನು. ಆ ಮೇಘವು ಗುಡಾರವನ್ನು ಬಿಟ್ಟು ಮೇಲಕ್ಕೆ ಹೋದಾಗ ಇಸ್ರಾಯೇಲ್ಯರು ಮುಂದೆ ಪ್ರಯಾಣ ಮಾಡುವರು; ಆ ಮೇಘವು ಬಿಡದೆ ಇರುವಾಗ ಅದು ಬಿಡುವ ತನಕ ಪ್ರಯಾಣಮಾಡದೆ ಇರುವರು.**

ಸ್ವರ್ಗೀಯ ಸಿಂಹಾಸನದ ಕೋಣೆಯನ್ನು ಹೋಲುವ ಐಹಿಕ ಪ್ರತಿರೂಪವಾದ ಅತಿ ಪರಿಶುದ್ಧ ಸ್ಥಳಕ್ಕೆ ಹೋಗುವುದು ಎಂದರೆ, ದೇವರ ಅದ್ಭುತಕರವಾದ ಪ್ರಸನ್ನತೆಯ ಅನ್ಯೋನ್ಯತೆಯ ಮಂಡಲಕ್ಕೆ ಹೋಗುವುದು ಎಂದರ್ಥ. ಇದು ಅಲೌಕಿಕ ಮಂಡಲಕ್ಕೆ, ಆತ್ಮ ಮಂಡಲಕ್ಕೆ, ಮಹಿಮೆಯ ವಾತಾವರಣಕ್ಕೆ, ತೆರೆದಿರುವ ಸ್ವರ್ಗ ಮಂಡಲಕ್ಕೆ, ದೇವದೂತರ ಮಂಡಲಕ್ಕೆ, ಮತ್ತು ಅದ್ಭುತಕರವಾದ ಮಂಡಲಕ್ಕೆ ಹೋಗುವಂಥದ್ದಾಗಿದೆ.

## ಅತಿ ಪರಿಶುದ್ಧ ಸ್ಥಳಕ್ಕಿರುವ ಮಾರ್ಗ

ವರ್ಷಕ್ಕೊಮ್ಮೆ ದೋಷ ಪರಿಹಾರಕ ದಿನದಂದು, ಮಹಾ ಯಾಜಕನು ಅತಿ ಪರಿಶುದ್ಧ ಸ್ಥಳಕ್ಕೆ ಹೋಗಬೇಕಾಗಿತ್ತು. ಇದು ಅಮೋಘವಾದ ಅವಕಾಶವಾಗಿತ್ತು. ಅತಿ ಪರಿಶುದ್ಧ ಸ್ಥಳದಲ್ಲಿರುವುದು ಎಂದರೆ ತಂದೆಯ ಸಿಂಹಾಸನದ ಕೋಣೆಯಲ್ಲಿ, ದೇವರ ಅದ್ಭುತಕರವಾದ ಪ್ರಸನ್ನತೆಯಲ್ಲಿ ಇರುವುದು ಎಂದರ್ಥ. ಪಾಪಕ್ಕೆ ದೇವರ ಸನ್ನಿಧಿಗೆ ಪ್ರವೇಶಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ದೇವರ ಪ್ರಸನ್ನತೆಯಲ್ಲಿರುವ ಪರಿಶುದ್ಧತೆಗೆ ಬರಲು ಮಹಾಯಾಜಕನ ಜೀವನದಲ್ಲಿ ಪರಿಹರಿಸಲ್ಪಡದ ಯಾವುದೇ ಪಾಪವು ಇರಬಾರದು.

ಆ ದಿನದಲ್ಲಿ ಅವನು ಪರಿಶುದ್ಧ ಸ್ಥಳವನ್ನು ಅತಿ ಪರಿಶುದ್ಧ ಸ್ಥಳದಿಂದ ಬೇರ್ಪಡಿಸಿರುವ ದಪ್ಪನೆಯ ತೆರೆಯ ಮುಂದೆ ನಿಂತಿದ್ದನು. ಅವನು ಈಗತಾನೇ ಮುಗ್ಧ ಕುರಿಮರಿಯ ರಕ್ತವನ್ನು ಸುರಿಸಿದ್ದನು, ಅದು ಸುರಿಸಲ್ಪಟ್ಟಿರುವ ಯೇಸುವಿನ ರಕ್ತದ ಪ್ರತಿರೂಪವಾಗಿದೆ. ಅವನ

ಕೈಯಲ್ಲಿ ರಕ್ತದ ಪಾತ್ರೆ, ಹಿಸ್ಸೋಪ್, ಧೂಪದ್ರವ್ಯ ಮತ್ತು ಯಜ್ಞವೇದಿಯ ಕೆಂಡಗಳು ಇದ್ದವು. ಅವನು ತೆರೆಯ ಮುಂದೆ ನಿಂತಿದ್ದನು. ಇದು ಗೋಡೆಯಿಂದ ಇನ್ನೊಂದು ಗೋಡೆಯವರೆಗೆ ಮತ್ತು ನೆಲದಿಂದ ಚಾವಣಿಯವರೆಗೆ ವಿಸ್ತರಿಸಿಕೊಂಡಿತು. ಇದು ಅನೇಕ ಇಂಚುಗಳಷ್ಟು ದಪ್ಪವಾಗಿತ್ತು ಎಂದು ಇತಿಹಾಸಕಾರರು ನಮಗೆ ಹೇಳುತ್ತಾರೆ. ಈಗ ಒಳಗೆ ಹೋಗುವ ಸಮಯ ಬಂದಿದೆ. ಆದರೆ ಅಲ್ಲಿ ಬಾಗಿಲು ಇರಲಿಲ್ಲ. ಅವನು ಹೇಗೆ ಒಳಗೆ ಹೋಗಬೇಕಾಗಿತ್ತು? ಈ ಪ್ರಶ್ನೆಗೆ ಸಂಬಂಧಿಸಿದಂತೆ ಇಬ್ರಿಯ ಪುಸ್ತಕದ ಲೇಖಕನು ಹೀಗೆ ಹೇಳುತ್ತಾನೆ:

**ಇಬ್ರಿಯ 9:6-9 ಇವುಗಳು ಹೀಗೆ ಸಿದ್ದಮಾಡಲ್ಪಟ್ಟ ಮೇಲೆ ಯಾಜಕರು ಯಾವಾಗಲೂ ಗುಡಾರದ ಮುಂದಣ ಭಾಗದೊಳಗೆ ಹೋಗಿ ದೇವಾರಾಧಾನೆಯನ್ನು ನಡಿಸುತ್ತಾರೆ. ಆದರೆ ಎರಡನೆಯ ಭಾಗದೊಳಗೆ ಮಹಾಯಾಜಕನೊಬ್ಬನೇ ವರುಷಕ್ಕೆ ಒಂದೇ ಸಾರಿ ಹೊಗುತ್ತಾನೆ. ಅವನು ರಕ್ತವನ್ನು ತಕ್ಕೊಳ್ಳದೆ ಹೋಗುವದಿಲ್ಲ. ಆ ರಕ್ತವನ್ನು ತನಗೋಸ್ಕರವೂ ಜನರ ತಪ್ಪುಗಳಿಗೋಸ್ಕರವೂ ಸಮರ್ಪಿಸುತ್ತಾನೆ. ಈ ಏರ್ಪಾಟಿನಿಂದ ಗುಡಾರದಲ್ಲಿ ಮುಂದಣ ಭಾಗವು ಇರುವ ತನಕ ದೇವರ ಸಮಕ್ಷಮಕ್ಕೆ ಹೋಗುವ ಮಾರ್ಗವು ಇದುವರೆಗೆ ಪ್ರಕಟವಾಗಲಿಲ್ಲವೆಂಬದನ್ನು ಪವಿತ್ರಾತ್ಮನು ವ್ಯಕ್ತಪಡಿಸುತ್ತಾನೆ. ಆ ಗುಡಾರವು ಈಗಿನ ಕಾಲದವರಿಗೋಸ್ಕರ ಒಂದು ಒಳಗಣ ಅರ್ಥವನ್ನು ಸೂಚಿಸುತ್ತದೆ. ಏನಂದರೆ ಅದರ ಕ್ರಮದ ಮೇರೆಗೆ ಸಮರ್ಪಣೆಯಾಗುವ ಕಾಣಿಕೆಗಳೂ ಯಜ್ಞಗಳೂ ದೇವಾರಾಧನೆ ಮಾಡುವವರನ್ನು ಮನಸಾಕ್ಷಿಯು ಒಪ್ಪುವಂತೆ ಸಿದ್ಧಿಗೆ ತರಲಾರದೆ ...**

ಮೊದಲ ದೇವದರ್ಶನ ಗುಡಾರ ಇನ್ನೂ ಇರುವವರೆಗೂ ಮಹಾಯಾಜಕನನ್ನು ಹೊರತುಪಡಿಸಿ ಬೇರೆ ಯಾರಿಗೂ ‘‘ಮಾರ್ಗ’’ ವು ಪ್ರಕಟವಾಗಲಿಲ್ಲ. ‘‘ಇದು ಪ್ರಸ್ತುತ ಕಾಲಕ್ಕೆ ಒಳಗಣ ಅರ್ಥವನ್ನು ಕೊಡುವಂಥದ್ದಾಗಿದೆ…’’ ನಾವು ಇಂದು ‘‘ತೆರೆಯೊಳಗೆ’’ ದೇವರ ಅದ್ಭುತಕರವಾದ ಪ್ರಸನ್ನತೆಯಿರುವ ಸಿಂಹಾಸನದ-ಕೋಣೆಗೆ ಹೇಗೆ ಹೋಗಬೇಕು ಎಂಬುದರ ಒಳಗಣ ಅರ್ಥವುಳ್ಳದ್ದಾಗಿದೆ.

ಯೆಹೆಜ್ಕೇಲನು "ಒಳಗಣ ಅಂಗಳ" ಕ್ಕೆ ಒಯ್ಯಲ್ಪಡುವುದರ ಬಗ್ಗೆ ಉಲ್ಲೇಖಿಸಿದ್ದಾನೆ.

**ಯೆಹೆಜ್ಕೇಲ 43:5 ದೇವರಾತ್ಮವು ನನ್ನನ್ನು ಎತ್ತಿ ಒಳಗಣ ಪ್ರಾಕಾರಕ್ಕೆ ತರಲು ಆಹಾ, ಯೆಹೋವನ ತೇಜಸ್ಸು ದೇವಸ್ಥಾನವನ್ನು ತುಂಬಿಕೊಂಡಿತ್ತು.**

ಇದು ಅಸಾಧಾರಣವಾದ ಕಾರ್ಯವು ಮತ್ತು ಪವಿತ್ರಾತ್ಮನ ತೋರ್ಪಡಿಸುವಿಕೆಯ ಕಾರ್ಯವು ಆಗಿದೆ. ಬಹುಶಃ ಇದು ಗಾಜದ ಮರುಭೂಮಿಯಲ್ಲಿ ಐಥಿಯೋಪ್ಯದವನಾದ ಕಂಚುಕಿಗೆ ಫಿಲಿಪ್ಪನು ದೀಕ್ಷಾಸ್ನಾನ ಮಾಡಿಸಿದ ನಂತರ ಅವನು ಅನುಭವಿಸಿದ್ದ ಅನುಭವವಾಗಿರಬಹುದು. ಅವನು ಇದ್ದಕ್ಕಿದ್ದಂತೆ ಅನೇಕ ಮೈಲುಗಳಷ್ಟು ದೂರವಿರುವ ಅಜೋತ್ ಪಟ್ಟಣದಲ್ಲಿರುವುದಾಗಿ ಕಂಡುಕೊಂಡನು.

**ಅಪೊಸ್ತಲರ ಕೃತ್ಯಗಳು 8:38-40 ಫಿಲಿಪ್ಪನು ಕಂಚುಕಿಯು ಇಬ್ಬರೂ ನೀರಿನೊಳಗೆ ಇಳಿದರು. ಫಿಲಿಪ್ಪನು ಅವನಿಗೆ ದೀಕ್ಷಾಸ್ನಾನ ಮಾಡಿಸಿದನು. ಅವರು ನೀರನ್ನು ಬಿಟ್ಟು ಮೇಲಕ್ಕೆ ಬಂದಾಗ ಕರ್ತನ ಆತ್ಮ ಫಿಲಿಪ್ಪನನ್ನು ಎತ್ತಿ ಕೊಂಡುಹೋಗಲಾಗಿ ಕಂಚುಕಿಯು ಸಂತೋಷವುಳ್ಳವನಾಗಿ ತನ್ನ ದಾರಿಯನ್ನು ಹಿಡಿದು ಅವನನ್ನು ಕಾಣಲೇ ಇಲ್ಲ. ತರುವಾಯ ಫಿಲಿಪ್ಪನು ಅಜೋತಿನಲ್ಲಿ ಕಾಣಿಸಿಕೊಂಡು ಅಲ್ಲಿಂದ ಕೈಸರೈಯದ ತನಕ ಎಲ್ಲಾ ಊರುಗಳಲ್ಲಿ ಸುವಾರ್ತೆಯನ್ನು ಸಾರುತ್ತಾ ಹೋದನು...**

ಅದೇ ರೀತಿಯಲ್ಲಿ ಮಹಾ ಯಾಜಕನನ್ನು ಆತ್ಮನು ಎತ್ತಿಕೊಂಡು ತೆರೆಯೊಳಗಿಂದ ಅತಿ ಪರಿಶುದ್ಧ ಸ್ಥಳಕ್ಕೆ ಒಯ್ಯದನು ಎಂದು ತೋರುತ್ತದೆ.

ಅತಿ ಪರಿಶುದ್ಧ ಸ್ಥಳವು ದೇವರ ಸಿಂಹಾಸನದ-ಕೋಣೆಯನ್ನು ಪ್ರತಿನಿಧಿಸುತ್ತದೆ, ಅದು ತಂದೆಯನ್ನು ಅತ್ಯಾಸಕ್ತಿಯಿಂದ ಆರಾಧಿಸುವ ಸ್ಥಳವಾಗಿತ್ತು.

## ನಾವು ಪ್ರವೇಶಿಸಬಹುದು

**ಯೋಹಾನ 4:23,24 ಅದಿರಲಿ, ಸತ್ಯಭಾವದಿಂದ ಆರಾಧನೆ ಮಾಡುವವರು ಆತ್ಮೀಯ ರಿತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ತಂದೆಯನ್ನು ಆರಾಧಿಸುವ ಕಾಲ ಬರುತ್ತದೆ. ಅದು ಈಗಲೇ ಬಂದಿದೆ. ತಂದೆಯು ತನ್ನನ್ನು ಆರಾಧಿಸುವವರು ಇಂಥವರೇ ಆಗಿರಬೇಕೆಂದು ಅಪೇಕ್ಷೀಸುತ್ತಾನಲ್ಲವೇ, ದೇವರು ಆತ್ಮಸ್ವರೂಪನು ಆತನನ್ನು**

**ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು ಅಂದನು.**

ಆದ್ದರಿಂದ ವಿಶ್ವಾಸಿಗಳಾಗಿರುವ-ಯಾಜಕರಾದ ನಾವು ಸಹ ತಂದೆಯನ್ನು ಆತ್ಮದಲ್ಲಿಯೂ ಮತ್ತು ಸತ್ಯದಲ್ಲಿಯೂ ಆರಾಧಿಸಬೇಕು. ಆತ್ಯಾಸಕ್ತಿಯಿಂದ ಆರಾಧನೆ ಮಾಡುವ ಸ್ಥಳವು ಆತ್ಮ ಮಂಡಲದಲ್ಲಿ ಇರುವಂಥದ್ದಾಗಿದೆ. ಆತನು ನಮಗಾಗಿ ಮಾಡಿದಂಥ ಎಲ್ಲದಕ್ಕಾಗಿ ನಾವು ದೇವರನ್ನು ಸ್ತುತಿಸುತ್ತಿರುವಾಗ ನಾವು "ಸ್ತುತಿಯ ಅಂಗಳ" ವನ್ನು ಹಾದು ಬಂದಿದ್ದೇವೆ. ಇದ್ದಕ್ಕಿದ್ದಂತೆ ದೇವರ ಆತ್ಮನು "ನಮ್ಮನ್ನು ಎತ್ತಿಕೊಂಡಾಗ" ನಮ್ಮನ್ನು ತೆರೆಯೊಳಕ್ಕೆ ಕೊಂಡೊಯ್ಯುತ್ತಾನೆ. ನಾವು ಈ ಸ್ಥಳದಲ್ಲಿ ತಂದೆಯು ಎಂಥವನಾಗಿದ್ದಾನೆ ಎಂಬುದನ್ನು ಅರಿತು ಆತ್ಮದಲ್ಲಿಯೂ ಮತ್ತು ಸತ್ಯದಲ್ಲಿಯೂ ಆತನನ್ನು ಆರಾಧಿಸುತ್ತೇವೆ.

**ಇಬ್ರಿಯ 10:19-22 ಹೀಗಿರುವಲ್ಲಿ ಸಹೋದರರೇ ಯೇಸು ನಮಗೋಸ್ಕರ ಪ್ರತಿಷ್ಠಿಸಿದ ಜೀವವುಳ್ಳ ಹೊಸ ದಾರಿಯಲ್ಲಿ ಆತನ ರಕ್ತದ ಮೂಲಕ ಆತನ ಶರೀರವೆಂಬ ತೆರೆಯ ಮುಖಾಂತರ ದೇವರ ಸಮಕ್ಷಮದಲ್ಲಿ ಪ್ರವೇಶಿಸುವದಕ್ಕೆ ನಮಗೆ ಧೈರ್ಯವುಂಟಾಯಿತು. ದೇವರ ಮನೆಯ ಮೇಲೆ ಅಧಿಕಾರಿಯಾಗಿರುವ ಶ್ರೇಷ್ಠನಾದ ಯಾಜಕನು ನಮಗಿದ್ದಾನೆ. ಆದಕಾರಣ ನಿರಪರಾಧಿಯೆಂದು ನಮ್ಮ ಮನಸ್ಸು ನಮಗೆ ಸಾಕ್ಷಿ ಹೇಳದಂತೆ ನಾವು ಹೃದಯವನ್ನು ಪ್ರೋಕ್ಷಿಸಿಕೊಂಡು ದೇಹವನ್ನು ತಿಳಿನೀರಿನಿಂದ ತೊಳೆದುಕೊಂಡು ಪರಿಪೂರ್ಣವಾದ ನಂಬಿಕೆಯುಳ್ಳವರಾಗಿಯೂ ಯಥಾರ್ಥ ಹೃದಯವುಳ್ಳವರಾಗಿಯೂ ದೇವರ ಮುಂದೆ ಬರೋಣ.**

ನಾವು ವಿಶೇಷ ಸಂದರ್ಭಗಳಲ್ಲಿನ ಭೇಟಿಗಾಗಿ ಮಾತ್ರ ಈ ಕ್ಷೇತ್ರದಲ್ಲಿ ಪ್ರವೇಶಿಸುವಂಥರಾಗಿರಬಾರದು, ಆದರೆ ದೇವರ ಅದ್ಭುತಕರವಾದ ಮಹಿಮೆಯ ಸ್ಥಳದಲ್ಲಿ ವಾಸಿಸಲು ನಾವು ಪ್ರವೇಶಿಸಬೇಕು.

## ಬಂಗಾರದ ಧೂಪವೇದಿ

ಬಂಗಾರದ ಧೂಪವೇದಿಯು ದೇವರ ಚಲಿಸುವಿಕೆಯ ಕುರಿತಾದ ಪ್ರವಾದನಾತ್ಮಕ ಪ್ರಕಟಣೆಯಾಗಿದೆ, ಅದು ದೇವರ ಅಂತಿಮ ಚಲಿಸುವಿಕೆಯ - ಮಹಿಮೆಯ ಕಡೆಗೆ ನಮ್ಮನ್ನು ಕೊಂಡೊಯ್ಯುತ್ತದೆ!

ದೇವರು ಮೋಶೆಗೆ ಕೊಟ್ಟ ಆಜ್ಞೆಗಳ ಪ್ರಕಾರ, ಬಂಗಾರದ ಧೂಪವೇದಿಯನ್ನು ಪರಿಶುದ್ಧ ಸ್ಥಳದಲ್ಲಿ, ತೆರೆಗೆ ಎದುರಾಗಿ, ಆದರೆ ಒಡಂಬಡಿಕೆಯ ಮಂಜೂಷದ ಮುಂದೆ ಇಡಲಾಯಿತು. ಇದು ಆರಾಧನೆ ಮತ್ತು ಪ್ರಾರ್ಥನೆಯ ಕುರಿತು ಹೇಳುತ್ತದೆ.

**ವಿಮೋಚಕಕನಕಾಂಡ 30:1,6-8 ಸುಗಂಧದ್ರವ್ಯಗಳಿಂದ ಧೂಪ ಹಾಕುವದಕ್ಕೆ ಜಾಲೀಮರದ ಧೂಪವೇದಿಯನ್ನು ಮಾಡಿಸಬೇಕು. ಆಜ್ಞಾಶಾಸನದ ಮಂಜೂಷದ ಮುಂದಣ ತೆರೆಗೆ ಎದುರಾಗಿ ಅಂದರೆ ಆಜ್ಞಾಶಾಸನಗಳ ಮೇಲಿರುವಂಥ ಮತ್ತು ನಾನು ನಿನಗೆ ದರ್ಶನ ಕೊಡುವಂಥ ಕೃಪಾಸನದ ಮುಂದೆ ಅದನ್ನು ಇರಿಸಬೇಕು. ಆರೋನನು ಪ್ರತಿನಿತ್ಯ ಹೊತ್ತಾರೆಯಲ್ಲಿ ದೀಪಗಳನ್ನು ಸರಿಪಡಿಸುವಾಗಲೂ ಸಾಯಂಕಾಲದಲ್ಲಿ ದೀಪಗಳನ್ನು ಹೊತ್ತಿಸುವಾಗಲೂ ಅದರ ಮೇಲೆ ಸುಗಂಧದ್ರವ್ಯಗಳಿಂದ ಧೂಪವನ್ನು ಹಾಕಬೇಕು. ಹೀಗೆ ನಿಮ್ಮಿಂದಲೂ ನಿಮ್ಮ ಸಂತತಿಯವರಿಂದಲೂ ಯೆಹೋವನ ಸನ್ನಿಧಿಯಲ್ಲಿ ನಿತ್ಯವಾದ ಧೂಪ ಸಮರ್ಪಣೆಯು ಇರಬೇಕು.**

ಧೂಪವೇದಿಯು ಪರಲೋಕದ ಸಿಂಹಾಸನದ ಬಳಿಯಲ್ಲಿರುವ ಬಂಗಾರದ ಯಜ್ಞವೇದಿಯ ಪ್ರತಿರೂಪವಾಗಿದೆ.

**ಪ್ರಕಟನೆ 8:3 ಆ ಮೇಲೆ ಮತ್ತೊಬ್ಬ ದೇವದೂತನು ಬಂದು ಯಜ್ಞವೇದಿಯ ಬಳಿಯಲ್ಲಿ ನಿಂತನು. ಅವನ ಕೈಯಲ್ಲಿ ಚಿನ್ನದ ಧೂಪಾರತಿ ಇತ್ತು. ಸಿಂಹಾಸನದ ಮುಂದಣ ಚಿನ್ನದ ಧೂಪವೇದಿಯ ಮೇಲೆ ದೇವಜನರೆಲ್ಲರ ಪ್ರಾರ್ಥನೆಗಳ ಜೊತೆಯಲ್ಲಿ ಸಮರ್ಪಿಸುವದಕ್ಕಾಗಿ ಅವನಿಗೆ ಬಹಳ ಧೂಪ ಕೊಡಲ್ಪಟ್ಟಿತು.**

### ಧೂಪವೇದಿಯ ಸ್ಥಳ ಬದಲಾವಣೆ ಮಾಡಲಾಯಿತು

ಬಂಗಾರದ ಧೂಪವೇದಿಯು ಈಗ ಅತಿ ಪರಿಶುದ್ಧ ಸ್ಥಳದಲ್ಲಿ ಇದೆ ಎಂದು ಇಬ್ರಿಯ ಪುಸ್ತಕವು ತಿಳಿಯಪಡಿಸುತ್ತದೆ. ಅತ್ಯಾಸಕ್ತಿಯುಳ್ಳ ಆರಾಧನೆ ಮತ್ತು ಪ್ರಾರ್ಥನೆಯು ದೇವರ ಸನ್ನಿಧಿಯೊಳಕ್ಕೆ ಸೇರುವಂಥ ಸಂಪೂರ್ಣವಾದ ಬದಲಾವಣೆಯನ್ನು ಮತ್ತು ವರ್ಗಾವಣೆಯನ್ನು ಉಂಟುಮಾಡಿದೆ.

**ಇಬ್ರಿಯ 9:2-4 ಅದರ ಮೊದಲನೆಯ ಭಾಗದಲ್ಲಿ ದೀಪಸ್ತಂಭ ಮೇಜು ಸಮರ್ಪಿಸಿದ ರೊಟ್ಟಿ ಇವುಗಳಿದ್ದವು. ಅದಕ್ಕೆ ಪವಿತ್ರಸ್ಥಾನ ಎಂದು**

**ಹೆಸರು. ಎರಡನೆಯ ತೆರೆಯ ಆಚೆಯಲ್ಲಿ ಅತಿ ಪವಿತ್ರ ಸ್ಥಾನವೆನಿಸಿಕೊಳ್ಳುವ ಇನ್ನೊಂದು ಭಾಗವಿತ್ತು. ಅದರಲ್ಲಿ ಚಿನ್ನದ ಧೂಪಾರತಿ ಒಳಗೂ ಹೊರಗೂ ಚಿನ್ನದ ತಗಡನ್ನು ಮಡಾಯಿಸಿದ್ದ ಒಡಂಬಡಿಕೆಯ ಮಂಜೂಷ ಇವುಗಳಿದ್ದವು.**

ಪರಿಶುದ್ಧ ಸ್ಥಳದಲ್ಲಿ ಮತ್ತು ಅತಿ ಪರಿಶುದ್ಧ ಸ್ಥಳದಲ್ಲಿ ಕಂಡುಬರುವ ವಸ್ತುಗಳನ್ನು ಜೋಡಿಸಿರುವ ವ್ಯವಸ್ಥೆಯ ಮೂಲಕ, ದೇವರ ಅಂತ್ಯಕಾಲದ ಚಲಿಸುವಿಕೆಗಳ ಕುರಿತಾದ ಪ್ರವಾದನಾತ್ಮಕವಾದ ಪ್ರಕಟಣೆಯನ್ನು ನಾವು ಕಾಣುತ್ತೇವೆ.

ಅತಿ ಪರಿಶುದ್ಧ ಸ್ಥಳದಲ್ಲಿರುವ ಒಡಂಬಡಿಕೆಯ ಮಂಜೂಷದ ಮೂಲಕ ಅಂತಿಮ ಚಲಿಸುವಿಕೆಯು ತೋರಿಬರುತ್ತದೆ. ಇದು ಮಹಿಮೆಯ, ಶಕ್ತಿಯ ಮತ್ತು ಪರಿಶುದ್ಧತೆಯ ಚಲಿಸುವಿಕೆಯಾಗಿದೆ. ಆದಾಗ್ಯೂ, ಈ ಚಲಿಸುವಿಕೆಗಿಂತ ಮುಂಚೆಯಿರುವ, ಇನ್ನೊಂದು ಚಲಿಸುವಿಕೆಯಿದೆ ಅದು ನಮ್ಮನ್ನು ಅತಿ ಪರಿಶುದ್ಧ ಸ್ಥಳಕ್ಕೆ ಕೊಂಡೊಯ್ಯುವಂಥದ್ದಾಗಿದೆ.

ಈ ಚಲಿಸುವಿಕೆಯ ಪ್ರಕಟಣೆಯು ಬಂಗಾರದ ಧೂಪವೇದಿಯನ್ನು ಇಟ್ಟಿರುವ ರೀತಿಯಲ್ಲಿ ಕಂಡುಬರುತ್ತದೆ, (ಇದನ್ನು ಪರಿಶುದ್ಧ ಸ್ಥಳದಲ್ಲಿ, ತೆರೆಯ ಹೊರಗಡೆ, ಅತಿ ಪರಿಶುದ್ಧ ಸ್ಥಳದ ಬಳಿಯಲ್ಲಿ ಮತ್ತು ಒಡಂಬಡಿಕೆಯ ಮಂಜೂಷದ ಹತ್ತಿರದಲ್ಲಿ ಇಡಲಾಗಿದೆ).

ಬಂಗಾರದ ಧೂಪವೇದಿಯು ತೆರೆಯನ್ನು ದಾಟಿ ಉನ್ನತ ಮಂಡಲಕ್ಕೆ ಅಂದರೆ ಅತಿ ಪರಿಶುದ್ಧ ಸ್ಥಳಕ್ಕೆ ನಮ್ಮನ್ನು ಕೊಂಡೊಯ್ಯುತ್ತದೆ.

ಇದು ಮಧ್ಯಸ್ಥಿಕೆ ಮತ್ತು ಆರಾಧನೆಯ ಕುರಿತು ಮಾತನಾಡುತ್ತದೆ.

**ಪ್ರಕಟನೆ 5:8... ಆ ನಾಲ್ಕು ಜೀವಿಗಳೂ ಇಪ್ಪತ್ತು ನಾಲ್ಕು ಮಂದಿ ಹಿರಿಯರೂ ಯಜ್ಞದ ಕುರಿಯಾದಾತನ ಪಾದಕ್ಕೆ ಬಿದ್ದರು. ಹಿರಿಯರ ಕೈಗಳಲ್ಲಿ ವೀಣೆಗಳೂ ದೇವ ಜನರ ಪ್ರಾರ್ಥನೆಗಳೆಂಬ ಧೂಪದಿಂದ ತುಂಬಿದ್ದ ಚಿನ್ನದ ಧೂಪಾರತಿಗಳು ಇದ್ದವು.**

ವೀಣೆಯು ಮತ್ತು ಧೂಪದ ಹೊಗೆಯು ಅತ್ಯಾಸಕ್ತಿಯುಳ್ಳ ಪ್ರಾರ್ಥನೆ ಮತ್ತು ಆರಾಧನೆಯನ್ನು ಪ್ರತಿಬಿಂಬಿಸುತ್ತದೆ.

**ಪ್ರಕಟನೆ 8:3,4 ಆ ಮೇಲೆ ಮತ್ತೊಬ್ಬ ದೇವದೂತನು ಬಂದು ಯಜ್ಞವೇದಿಯ ಬಳಿಯಲ್ಲಿ ನಿಂತನು. ಅವನ ಕೈಯಲ್ಲಿ ಚಿನ್ನದ ಧೂಪಾರತಿ ಇತ್ತು. ಸಿಂಹಾಸನದ ಮುಂದಣ ಚಿನ್ನದ ಧೂಪವೇದಿಯ**

**ಮೇಲೆ ದೇವಜನರೆಲ್ಲರ ಪ್ರಾರ್ಥನೆಗಳ ಜೊತೆಯಲ್ಲಿ ಸಮರ್ಪಿಸುವದಕ್ಕಾಗಿ ಅವನಿಗೆ ಬಹಳ ಧೂಪ ಕೊಡಲ್ಪಟ್ಟಿತು. ಆಗ ಧೂಪದ ಹೊಗೆಯು ದೇವದೂತನ ಕೈಯೊಳಗಿಂದ ಹೊರಟು ದೇವಜನರ ಪ್ರಾರ್ಥನೆಗಳೊಂದಿಗೆ ಕೂಡಿ ದೇವರ ಸನ್ನಿಧಿಗೆ ಏರಿಹೋಯಿತು.**

ಪ್ರವಾದನಾತ್ಮಕವಾದ ಪ್ರಾರ್ಥನೆ ಮತ್ತು ಆರಾಧನೆಯು ನಮ್ಮನ್ನು ಮಹಿಮೆಯ ಮಂಡಲಕ್ಕೆ, ಅತಿ ಪರಿಶುದ್ಧ ಸ್ಥಳಕ್ಕೆ - ದೇವರ ಅದ್ಭುತಕರವಾದ ಪ್ರಸನ್ನತೆಯಿರುವ ಸಿಂಹಾಸನದ ಕೋಣೆಗೆ ಕೊಂಡೊಯ್ಯುತ್ತದೆ. ನಮ್ಮ ಪ್ರಾರ್ಥನೆಗಳು ಮತ್ತು ಆರಾಧನೆಗಳು ಸುಗಂಧ ವಾಸನೆಯುಳ್ಳ ಯಜ್ಞವಾಗಿ ಏರಿಹೋಗುವಾಗ ನಾವು ಆತ್ಮ ಮಂಡಲಕ್ಕೆ ಒಯ್ಯಲ್ಪಡುತ್ತೇವೆ. ಪ್ರಾರ್ಥಿಸುವುದಕ್ಕೆ ನಮಗೆ ಗೊತ್ತಿಲ್ಲದ ವಿಷಯಗಳಿಗಾಗಿಯೂ ನಾವು ಪ್ರಾರ್ಥಿಸುತ್ತಿರುವುದಾಗಿ ನಾವು ಗಮನಿಸುತ್ತೇವೆ. ಪ್ರವಾದನಾತ್ಮಕ ಆರಾಧನೆಯಲ್ಲಿ, ಕರ್ತನ ಹಾಡು ನಮ್ಮನ್ನು ದೇವರ ಪ್ರಸನ್ನತೆಯ ಮತ್ತು ಮಹಿಮೆಯ ಉನ್ನತ ಮಂಡಲಗಳಿಗೆ ಎತ್ತಿಕೊಂಡು ಹೋಗುತ್ತದೆ.

ಬಂಗಾರದ ಧೂಪವೇದಿಯು (ನಮ್ಮ ಪ್ರಾರ್ಥನೆಗಳು ಮತ್ತು ನಮ್ಮ ಆರಾಧನೆ) ನಮ್ಮನ್ನು ಅತಿ ಪರಿಶುದ್ಧ ಸ್ಥಳದ ಉನ್ನತ ಮಂಡಲಕ್ಕೆ ಕೊಂಡೊಯ್ಯುತ್ತದೆ ಎಂದು ಇದರ ಮೂಲಕ ನಮಗೆ ಪ್ರಕಟಣೆಯು ಉಂಟಾಗುತ್ತದೆ. ಒಡಂಬಡಿಕೆಯ ಮಂಜೂಷದ ಸಮೀಪವಿರುವ ಪರಿಶುದ್ಧ ಸ್ಥಳದಲ್ಲಿ ಪ್ರಾರಂಭವಾಗುವ ಈ ಸೇವೆಯು ನಮ್ಮನ್ನು ತೆರೆಯನ್ನು ದಾಟಿ ಆಚೆ ಕಡೆಗೆ ಕೊಂಡೊಯ್ಯುತ್ತದೆ.

ಅಂತ್ಯ ದಿನಗಳಲ್ಲಿ ಕೃಪೆಯ ಮತ್ತು ಬಿನ್ನಹದ ಆತ್ಮವು ಸುರಿಸಲ್ಪಡುತ್ತದೆ.

**ಜೆಕರ್ಯ 12:10 ದಾವೀದ ವಂಶದವರಲ್ಲಿಯೂ ಯೆರೂಸಲೇಮಿನವರಲ್ಲಿಯೂ ದೇವರ ದಯೆಯನ್ನು ಹಂಬಲಿಸಿ ಬೇಡುವ ಭಾವವನ್ನು ಸುರಿಸುವೆನು.**

ದೇವದೂತರು ನಮ್ಮ ಪ್ರಾರ್ಥನೆ ಮತ್ತು ಆರಾಧನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ ಮತ್ತು ಅವರು ಅಂತಿಮವಾದ ಚಲಿಸುವಿಕೆಗೆ - ದೇವರ ಮಹಿಮೆಯ ಪ್ರದರ್ಶನಕ್ಕೆ ಹಾಗೂ ಅನಾವರಣಕ್ಕೆ ಮಾರ್ಗವನ್ನು ಸಿದ್ಧಪಡಿಸುತ್ತಿದ್ದಾರೆ.

ಪ್ರಾರ್ಥನೆ

**2 ಪೂರ್ವಕಾಲವೃತ್ತಾಂತ 7:1 ಸೊಲೊಮೋನನು ಪ್ರಾರ್ಥಿಸುವದನ್ನು ಮುಗಿಸಿದ ಕೂಡಲೆ ಆಕಾಶದಿಂದ ಬೆಂಕಿಬಿದ್ದು…**

**ವಚನ. 12 ಅವನಿಗೆ ರಾತ್ರಿಯಲ್ಲಿ ಪ್ರತ್ಯಕ್ಷನಾಗಿ - ನೀನು ನನಗೆ ಮಾಡಿದ ಪ್ರಾರ್ಥನೆಯನ್ನು ಲಾಲಿಸಿ …**

ಆರಾಧನೆಯೊಂದಿಗಿರುವ ಪ್ರಾರ್ಥನೆಯು ಮಹಿಮೆಯ ಕಡೆಗಿರುವ ಹಾದಿಯಾಗಿದೆ. ಪ್ರಾರ್ಥನೆ ಇಲ್ಲದೆ, ಮಹಿಮೆ ಇಲ್ಲ!

**ಲೂಕ 9:28,29 ಯೇಸು ಈ ಮಾತುಗಳನ್ನು ಕೇಳಿ ಸುಮಾರು ಎಂಟು ದಿವಸಗಳಾದ ಮೇಲೆ ಪೇತ್ರ ಯೋಹಾನ ಯಾಕೋಬರನ್ನು ಕರಕೊಂಡು ಪ್ರಾರ್ಥನೆ ಮಾಡುವದಕ್ಕೆ ಬೆಟ್ಟವನ್ನು ಹತ್ತಿದನು. ಆತನು ಪ್ರಾರ್ಥನೆ ಮಾಡುತ್ತಿರಲಾಗಿ ಆತನ ಮುಖಭಾವವು ಬೇರೆಯಾಯಿತು.**

ಆರಾಧನೆ

**2 ಪೂರ್ವಕಾಲವೃತ್ತಾಂತ 5:12-14… ನಾರು ಬಟ್ಟೆಗಳನ್ನು ಧರಿಸಿಕೊಂಡು ತಾಳ ಸ್ವರಮಂಡಲಕಿನ್ನರಿ ಇವುಗಳನ್ನು ಹಿಡಿದುಕೊಂಡ ಲೇವಿಯ ಗಾಯಕರಾದ ಆಸಾಫ್ ಹೇಮಾನ್ ಯೆದುತೂನರೂ ಇವರ ಮಕ್ಕಳೂ ಸಹೋದರರೂ ತುತೂರಿಗಳನ್ನು ಊದುತಕ್ಕ ನೂರಿಪ್ಪತ್ತು ಮಂದಿ ಯಾಜಕರೂ ಯಜ್ಞವೇದಿಯ ಪೂರ್ವದಿಕ್ಕಿನಲ್ಲಿ ನಿಂತುಕೊಂಡರು. ಮಂಜೂಷವನ್ನು ಒಳಗಿಟ್ಟ ಯಾಜಕರೂ ದೇವಾಲಯದಿಂದ ಹೊರಗೆ ಬಂದ ಕೂಡಲೆ ಒಬ್ಬನೋ ಎಂಬಂತೆ ಸ್ವರವೆತ್ತಿ ಯೆಹೋವನನ್ನು ಕೀರ್ತಿಸುವದಕ್ಕಾಗಿ ತುತೂರಿ ಊದುವವರೂ ಗಾಯನಮಾಡುವವರೂ ಅಲ್ಲಿ ನಿಂತಿದ್ದರು. ತುತೂರಿ ತಾಳ ಮೊದಲಾದ ವಾದ್ಯಗಳ ಧ್ವನಿಯೂ ಯೆಹೋವನು ಒಳ್ಳೆಯವನು, ಆತನ ಕೃಪೆಯು ಶಾಶ್ವತವಾಗಿರುವದು ಎಂದು ಕೃತಜ್ಞಾಸ್ತುತಿಮಾಡುವವರ ಸ್ವರವೂ ಕೇಳಿಸಿದೊಡನೆ ಮೇಘವು ಯೆಹೋವನ ಆಲಯದಲ್ಲಿ ತುಂಬಿಕೊಂಡಿತು. ಯೆಹೋವನ ತೇಜಸ್ಸಿನಿಂದ ವ್ಯಾಪ್ತವಾಗಿದ್ದು ಮೇಘವು ದೇವಾಲಯದಲ್ಲಿ ತುಂಬಿಕೊಂಡದರಿಂದ ಯಾಜಕರು ಅಲ್ಲಿ ನಿಂತು ಸೇವೆ ಮಾಡಲಾರದೆ ಹೋದರು.**

ಆರಾಧನೆಯು ನಮ್ಮನ್ನು ತೆರೆಯನ್ನು ದಾಟಿಸಿ ದೇವರ ಪ್ರಸನ್ನತೆಯ ಮಹಿಮೆಗೆ ಕೊಂಡೊಯ್ಯುತ್ತದೆ.

**ಪ್ರವಾದನಾತ್ಮಕ ಪ್ರಾರ್ಥನೆ ಮತ್ತು ಆರಾಧನೆ**

ನಮ್ಮ ಪ್ರಾರ್ಥನೆಗಳು ಮತ್ತು ಆರಾಧನೆಗಳು ಕರ್ತನಿಗೆ ಸುಗಂಧ ವಾಸನೆಯ ಯಜ್ಞವಾಗಿ ಏರಿಹೋಗುವಾಗ ನಾವು ಆತ್ಮ ಮಂಡಲಕ್ಕೆ ಒಯ್ಯಲ್ಪಡುತ್ತೇವೆ. ಪ್ರಾರ್ಥಿಸುವುದಕ್ಕೆ ನಮಗೆ ಗೊತ್ತಿಲ್ಲದ ವಿಷಯಗಳಿಗಾಗಿಯೂ ನಾವು ಪ್ರಾರ್ಥಿಸುತ್ತಿರುವುದಾಗಿ ನಾವು ಗಮನಿಸುತ್ತೇವೆ. ಪ್ರವಾದನಾತ್ಮಕ ಆರಾಧನೆಯಲ್ಲಿ, ಕರ್ತನ ಹಾಡು ನಮ್ಮನ್ನು ದೇವರ ಪ್ರಸನ್ನತೆಯ ಮತ್ತು ಮಹಿಮೆಯ ಉನ್ನತ ಮಂಡಲಗಳಿಗೆ ಎತ್ತಿಕೊಂಡು ಹೋಗುತ್ತದೆ.

**ಆತನ ಪ್ರಸನ್ನತೆಯಲ್ಲಿ ತಲ್ಲೀನರಾಗುವುದು**

ನಾವು ಆತನ ಪ್ರಸನ್ನತೆಯಲ್ಲಿ ತಲ್ಲೀನರಾಗುವುದರಲ್ಲಿ ಸಮಯವನ್ನು ಕಳೆಯುವಾಗ ನಮ್ಮ ಆತ್ಮವು ಬಲಗೊಳ್ಳುತ್ತದೆ, ಶಕ್ತಿ ಪಡೆದುಕೊಳ್ಳುತ್ತದೆ ಮತ್ತು ಶಕ್ತಿಯುತವಾಗಿರುತ್ತದೆ. ನಾವು ಆತನ ಪ್ರಸನ್ನತೆಯಲ್ಲಿ ಆಳವಾಗಿ ಹೋಗಬೇಕು ಮತ್ತು ಆತನ ಪ್ರಸನ್ನತೆಯ ಮಹಿಮೆಯಲ್ಲಿ ತಲ್ಲೀನರಾಗಿ ಧೀರ್ಘ ಸಮಯವನ್ನು ಕಳೆಯಬೇಕು.

ಈ ಕಾರಣಕ್ಕಾಗಿಯೇ, ಆದ್ಯ ಅಪೊಸ್ತಲರು ಹೀಗೆ ಹೇಳಿದ್ದಾರೆ:

**ಅಪೊಸ್ತಲರ ಕೃತ್ಯಗಳು 6:4 ನಾವಾದರೋ ಪ್ರಾರ್ಥನೆಯನ್ನೂ ವಾಕ್ಯೋಪದೇಶವನ್ನೂ ಮಾಡುವದರಲ್ಲಿ ನಿರತರಾಗಿರುವೆವು ಎಂದು ಹೇಳಿದರು.**

ನಾವು ಮಾಡುವ ಕೃತಜ್ಞತಾಸ್ತುತಿ, ಸ್ತೋತ್ರ, ಸತ್ಯವೇದದ ಓದುವಿಕೆ, ಧ್ಯಾನ ಮತ್ತು ಅಧ್ಯಯನ, ಪ್ರಾರ್ಥನೆ, ಆತ್ಮ ಪರಿಶೋಧನೆ, ಪಶ್ಚಾತ್ತಾಪ, ಅರಿಕೆ, ಆಲಿಸುವುದು, ಹೊಂದಿಕೊಳ್ಳುವುದು, ಮಧ್ಯಸ್ಥಿಕೆ ಮತ್ತು ದೀರ್ಘಕಾಲದ ಆರಾಧನೆಯಲ್ಲಿ ದೇವರೊಂದಿಗೆ ಒಡನಾಡುವ ಈ ಸಮಯಗಳಲ್ಲಿ, ದೇವರು ತನ್ನ ವಾಕ್ಯದ ಮೂಲಕ ನಮ್ಮೊಂದಿಗೆ ಮಾತನಾಡುತ್ತಾನೆ. *ರೀಮಾ* ನಮಗೆ ದೊರಕಿದಾಗ, ಅದರ ಬಗ್ಗೆ ಧ್ಯಾನ ಮಾಡಲು ಸಮಯ ತೆಗೆದುಕೊಳ್ಳಿರಿ, ಅದರ ವಿಷಯವಾಗಿ ಪ್ರಾರ್ಥಿಸಿರಿ, ಅದನ್ನು ಅರ್ಥಮಾಡಿಕೊಂಡು ನಮ್ಮ ಜೀವನದಲ್ಲಿ ಮತ್ತು ಸೇವೆಯಲ್ಲಿ ಉಪಯೋಗಿಸಿಕೊಳ್ಳಬೇಕು.

ದೇವರೊಂದಿಗಿನ ನಮ್ಮ ಸಂಬಂಧ, ವಿಶ್ವಾಸಿಗಳಾಗಿರುವ ನಮ್ಮ ನಡೆಯು, ಆತನೊಂದಿಗಿನ ನಮ್ಮ ಸಮಯ ಯಾವಾಗಲೂ ಪ್ರಗತಿಶೀಲವಾಗಿರುತ್ತದೆ.

**ಮಾರ್ಗ - ಸತ್ಯ - ಜೀವ**

**ಯೋಹಾನ 14:6 ಯೇಸು ಅವನಿಗೆ ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ.**

- *ಮಾರ್ಗ*

ಹೊರಂಗಣ ಅಂಗಳವು ಮಾರ್ಗವಾಗಿದೆ - ಯೇಸುವಿನೊಂದಿಗಿನ ಸಂಬಂಧವಾಗಿದೆ

ಯೇಸು ಮಾತ್ರವೇ ತಂದೆಯ ಬಳಿಗೆ ಹೋಗಲು ಇರುವ ಏಕೈಕ ಮಾರ್ಗವಾಗಿದ್ದಾನೆ. ಇಲ್ಲಿ, ನಾವು ಯೇಸುವಿನೊಂದಿಗಿನ ಸಂಬಂಧವುಳ್ಳವರಾಗಿದ್ದೇವೆ

- *ಸತ್ಯ*

ಪರಿಶುದ್ಧ ಸ್ಥಳವು ಸತ್ಯವಾಗಿದೆ - ಪವಿತ್ರಾತ್ಮದೊಂದಿಗಿನ ಸಂಬಂಧವಾಗಿದೆ

**1 ಯೋಹಾನ 5:6. ನೀರಿನಿಂದ ಮಾತ್ರವಲ್ಲ ನೀರಿನಿಂದಲೂ ರಕ್ತದಿಂದಲೂ ಸಾಕ್ಷಿ ಹೊಂದಿದವನಾಗಿದ್ದನೆ.**

**ಕೀರ್ತನೆ 51:6 ಯಥಾರ್ಥಚಿತ್ತವೇ ನಿನಗೆ ಸಂತೋಷ; ಸುಜ್ಞಾನದ ರಹಸ್ಯಗಳನ್ನು ನನಗೆ ತಿಳಿಯಪಡಿಸು.**

ಇಲ್ಲಿ ನಾವು ಪವಿತ್ರಾತ್ಮದೊಂದಿಗಿನ ಸಂಬಂಧವುಳ್ಳವರಾಗಿದ್ದೇವೆ.

- *ಜೀವ*

ಅತಿ ಪರಿಶುದ್ಧ ಸ್ಥಳವು ಜೀವವಾಗಿದೆ - ತಂದೆಯೊಂದಿಗಿನ ಸಂಬಂಧವಾಗಿದೆ

**ಇಬ್ರಿಯ 10:19 ಹೀಗಿರುವಲ್ಲಿ ಸಹೋದರರೇ ಯೇಸು ... ರಕ್ತದ ಮೂಲಕ ... ತೆರೆಯ ಮುಖಾಂತರ ದೇವರ ಸಮಕ್ಷಮದಲ್ಲಿ ಪ್ರವೇಶಿಸುವದಕ್ಕೆ ನಮಗೆ ಧೈರ್ಯವುಂಟಾಯಿತು.**

**ಯೋಹಾನ 4:23,24 ಅದಿರಲಿ, ಸತ್ಯಭಾವದಿಂದ ಆರಾಧನೆ ಮಾಡುವವರು ಆತ್ಮೀಯ ರಿತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ತಂದೆಯನ್ನು ಆರಾಧಿಸುವ ಕಾಲ ಬರುತ್ತದೆ. ಅದು ಈಗಲೇ ಬಂದಿದೆ. ತಂದೆಯು ತನ್ನನ್ನು ಆರಾಧಿಸುವವರು ಇಂಥವರೇ ಆಗಿರಬೇಕೆಂದು ಅಪೇಕ್ಷೀಸುತ್ತಾನಲ್ಲವೇ, ದೇವರು ಆತ್ಮಸ್ವರೂಪನು ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು ಅಂದನು.**

ಅತಿ ಪರಿಶುದ್ಧ ಸ್ಥಳದಲ್ಲಿರುವುದು ಎಂದರೆ ತಂದೆಯ ಪ್ರಸನ್ನತೆಯಲ್ಲಿ ಮತ್ತು ಆತನೊಂದಿಗಿನ ಆತ್ಮೀಯ ಸಂಬಂಧದಲ್ಲಿ ಇರುವುದಾಗಿದೆ.

**ಪಾಪ ಪ್ರಜ್ಞೆ - ಪವಿತ್ರಾತ್ಮ ಪ್ರಜ್ಞೆ - ದೇವರ ಪ್ರಜ್ಞೆ**

ಹೊಸ ವಿಶ್ವಾಸಿಗಳಾಗಿರುವ ನಾವು ನಮ್ಮ ಹಿಂದಿನ ಪಾಪಗಳ ಪ್ರಜ್ಞೆಯುಳ್ಳರಾಗಿರಬಹುದು. ಹಿಂತಿರುಗಿ ಹೋಗುವ ಬಯಕೆ ಇರಬಹುದು.

ನಾವು ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನವನ್ನು ಹೊಂದಿಕೊಂಡಾಗ, ನಮ್ಮ ಅಸ್ತಿತ್ವಗಳ, ನಮ್ಮ ಅಗತ್ಯತೆಗಳ, ನಮ್ಮ ಆಸೆಗಳ ಬಗ್ಗೆ ನಾವು ಇನ್ನೂ ಬಹಳಷ್ಟು ಪ್ರಜ್ಞೆಯುಳ್ಳವರಾಗಿರುತ್ತೇವೆ, ಆದರೆ ನಮ್ಮೊಳಗೆ ದೇವರ ಶಕ್ತಿ ಉಳ್ಳವರಾಗಿರುವ ಆಯಾಮವನ್ನು ನಾವು ಹೊಂದಿಕೊಂಡಿದ್ದೇವೆ.

ಆದರೆ ಉನ್ನತ ಸ್ಥಳವಿದೆ, ಮತ್ತು ಅದು ದೇವರ ಸನ್ನಿಧಿಯಲ್ಲಿದೆ. ಇಲ್ಲಿ ನಾವು ನಮ್ಮ ಬಗ್ಗೆ ಮರೆತು ಆತನ ಮೇಲೆ ಗಮನವಿಡುತ್ತೇವೆ.

**ಮಗನ ಪ್ರಕಟಣೆ - ಆತ್ಮನ ಪ್ರಕಟಣೆ - ತಂದೆಯ ಪ್ರಕಟನೆ**

ನಾವು ಕರ್ತನೊಂದಿಗೆ ನಡೆಯುವಾಗ, ದೇವರ ಪ್ರಗತಿಶೀಲವಾದ ಪ್ರಕಟಣೆಯು ಉಂಟಾಗುತ್ತದೆ.

**ಒಳ್ಳೆಯದು - ಉತ್ತಮ - ಅತ್ಯುತ್ತಮ**

ಒಳ್ಳೆಯದು ರಕ್ಷಣೆಯಾಗಿದೆ. ಉತ್ತಮವಾದದ್ದು ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಹೊಂದಿಕೊಳ್ಳುವುದು ಆಗಿದೆ, ಮತ್ತು

ಅತ್ಯುತ್ತಮವಾದದ್ದು ಆತನ ಪ್ರಸನ್ನತೆಯ ಮಹಿಮೆಯಲ್ಲಿ ಪ್ರವೇಶಿಸುವುದು ಮತ್ತು ಜೀವಿಸುವುದು ಆಗಿದೆ.

ನಾವು ಯೇಸುವಿನೊಂದಿಗಿನ ಸಂಬಂಧದಿಂದ ಪವಿತ್ರಾತ್ಮನೊಂದಿಗಿನ ಸಂಬಂಧದ ಕಡೆಗೆ ಪ್ರಗತಿ ಹೊಂದುತ್ತೇವೆ. ನಾವು ಆತನನ್ನು ಆತ್ಮದಲ್ಲಿ ಮತ್ತು ಸತ್ಯದಲ್ಲಿ ಆರಾಧಿಸುವಾಗ ತಂದೆಯ ಪ್ರಸನ್ನತೆಯ ಮಹಿಮೆಯಲ್ಲಿ ನೆಲೆಗೊಳ್ಳಲು ಅಲ್ಲಿಂದ ಮುಂದೆ ಹೋಗುತ್ತೇವೆ.

## ದೇಹ - ಪ್ರಾಣ - ಆತ್ಮ

**1 ಥೆಸಲೋನೀಕ 5:23 ಶಾಂತಿದಾಯಕವಾದ ದೇವರು ತಾನೇ ನಿಮ್ಮನ್ನು ಪರಿಪೂರ್ಣವಾಗಿ ಪವಿತ್ರಮಾಡಲಿ. ಕರ್ತನಾದ ಯೇಸು ಕ್ರಿಸ್ತವು ಪ್ರತ್ಯಕ್ಷನಾದಾಗ ನಿಮ್ಮ ಆತ್ಮ ಪ್ರಾಣ ಶರೀರಗಳು ದೋಷವಿಲ್ಲದೆ ಸಂಪೂರ್ಣವಾಗಿ ಕಾಣಿಸುವಂತೆ ಕಾಪಾಡಲ್ಪಡಲಿ.**

* *ದೇಹ*

ದೇಹ ಎಂಬುದು ನಮ್ಮ ವ್ಯಕ್ತಿಯ ಭೌತಿಕ ಮತ್ತು ಲೌಕಿಕ ಪ್ರಜ್ಞೆಯ ಭಾಗವಾಗಿದೆ. ಇದು ನೈಸರ್ಗಿಕ ಇಂದ್ರಿಯಗಳ ತಿಳಿವಳಿಕೆಯಾಗಿದೆ, ಮತ್ತು ಶರೀರಭಾವದ ಜೀವನವು ಇದರ ಮೇಲೆ ದೊರೆತನ ಮಾಡುತ್ತದೆ.

**1 ಕೊರಿಂಥ 3:1-3 ಸಹೋದರರೇ, ನಾನಂತೂ ದೇವರಾತ್ಮನಿಂದ ನಡಿಸಿಕೊಳ್ಳುವವರಿಗೆ ತಕ್ಕಂತೆ ನಿಮ್ಮ ಸಂಗಡ ಮಾತಾಡಲಾರದೆ ಪ್ರಾಪಂಚಿಕರೂ ಕ್ರಿಸ್ತನ ವಿಷಯದಲ್ಲಿ ಎಳೆಗೂಸುಗಳೂ ಆಗಿರುವಂಥವರಿಗೆ ತಕ್ಕಂತೆ ನಿಮ್ಮ ಸಂಗಡ ಮಾತಾಡಬೇಕಾಯಿತು. ನಿಮಗೆ ಹಾಲು ಕುಡಿಸಿದೆನು ಅನ್ನ ಕೊಡಲಿಲ್ಲ. ಅನ್ನ ತಿನ್ನುವದಕ್ಕೆ ನಿಮಗೆ ಇನ್ನೂ ಶಕ್ತಿ ಇರಲಿಲ್ಲ. ಈಗಲಾದರೂ ಶಕ್ತಿ ಇಲ್ಲ. ಯಾಕಂದರೆ ಇನ್ನೂ ಶರೀರಾಧೀನ ಸ್ವಭಾವವುಳ್ಳವರಾಗಿದ್ದೀರಿ. ನಿಮ್ಮಲ್ಲಿ ಹೊಟ್ಟೆಕಿಚ್ಚು ಜಗಳಗಳು ಇರುವಲ್ಲಿ, ನೀವು ಶರೀರಾಧೀನ ಸ್ವಭಾವವುಳ್ಳವರಾಗಿದ್ದು ಕೇವಲ ನರಪ್ರಾಣಿಗಳಂತೆ ನಡೆಯುತ್ತೀರಲ್ಲವೆ?**

ಗಲಾತ್ಯ **5:16** ನಾನು ಹೇಳುವದೇನಂದರೆ ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳಿರಿ. ಆಗ ನೀವು ಶರೀರ ಭಾವದ ಅಭಿಲಾಷೆಗಳನ್ನು ಎಷ್ಟು ಮಾತ್ರಕ್ಕೂ ನೆರವೇರಿಸುವದಿಲ್ಲ.

ವಚನ **17** ಯಾಕಂದರೆ ಶರೀರಭಾವವು ಅಭಿಲಾಷಿಸುವದು ಆತ್ಮಕ್ಕೆ ವಿರುದ್ಧವಾಗಿದೆ. ಆತ್ಮನು ಅಭಿಲಾಷಿಸುವದು ಶರೀರಭಾವಕ್ಕೆ ವಿರುದ್ಧವಾಗಿದೆ. ನೀವು ಮಾಡಲಿಚ್ಚೆಸುವದನ್ನು ಮಾಡದಂತೆ ಇವು ಒಂದಕ್ಕೊಂದು ಹೋರಾಡುತ್ತವೆ.

* *ಪ್ರಾಣ*

ಪ್ರಾಣ ಎಂಬುದು ನಮ್ಮ ವ್ಯಕ್ತಿಯ (ಇಚ್ಛೆ, ಬುದ್ಧಿಶಕ್ತಿ ಮತ್ತು ಭಾವನೆಗಳು) ಸ್ವಪ್ರಜ್ಞೆಯ ಭಾಗವಾಗಿದೆ. ಇದು ಸ್ವಪ್ರಜ್ಞೆಯಾಗಿದೆ, ಪ್ರಾಣವು ದೊರೆತನಮಾಡುವ ಜೀವನದಲ್ಲಿ ಜೀವಿಸುವುದಾಗಿದೆ. ಪ್ರಾಣವು ಸ್ವಕೇಂದ್ರಿತವಾದದ್ದು ಆಗಿದೆ ಮತ್ತು ಆರಾಧನೆ ಮಾಡುವುದಕ್ಕೆ ಸಮರ್ಥವಾಗಿಲ್ಲ.

**ಯೋಹಾನ 4:24 ದೇವರು ಆತ್ಮಸ್ವರೂಪನು ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು ಅಂದನು.**

**ರೋಮಾಪುರ 12:2 ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರದದ್ದು ಅಂದರೆ ಉತ್ತಮವಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ.**

* *ಆತ್ಮ*

ನಮ್ಮ ವ್ಯಕ್ತಿಯ ಈ ಭಾಗವು ದೇವರ ಪ್ರಜ್ಞೆಯುಳ್ಳದ್ದು, ಆತ್ಮದ ಮಂಡಲಕ್ಕೆ ಸೂಕ್ಷ್ಮವಾಗಿ ಪ್ರತಿಕ್ರಿಯಿಸುವಂಥದ್ದು ಆಗಿದೆ. ಆತ್ಮ-ನಿಯಂತ್ರಿತ ಜೀವನವು ಕೃಪೆ, ಸೌಂದರ್ಯ, ಉದ್ದೇಶ ಮತ್ತು ಶಕ್ತಿಯಿಂದ ತುಂಬಿರುತ್ತದೆ.

**ಎಫೆಸ 3:16-19 ನೀವು ದೇವರಾತ್ಮನ ಮೂಲಕ ಆಂತರ್ಯದಲ್ಲಿ ವಿಶೇಷ ಬಲ ಹೊಂದಿದವರಾಗುವ ಹಾಗೆಯೂ, ಕ್ರಿಸ್ತನು ನಿಮ್ಮ ನಂಬಿಕೆಯ ಮೂಲಕ ನಿಮ್ಮ ಹೃದಯಗಳಲ್ಲಿ ವಾಸಮಾಡುವ ಹಾಗೆಯೂ ಆತನು ತನ್ನ ಮಹಿಮಾತಿಶಯದ ಪ್ರಕಾರ ಅನುಗ್ರಹಿಸಲಿ. ನೀವು ದೇವರ ಪ್ರೀತಿಯಲ್ಲಿ ನೆಲೆಗೊಂಡು ನಿಂತು ಅದರ ಅಗಲ ಉದ್ದ ಎತ್ತರ ಆಳ ಎಷ್ಟೆಂಬದನ್ನು ದೇವಜನರೆಲ್ಲರೊಂದಿಗೆ ಗ್ರಹಿಸಲೂ ಜ್ಞಾವಕ್ಕೆ ಮೀರುವ ಕ್ರಿಸ್ತನ ಪ್ರೀತಿಯನ್ನು ತಿಳುಕೊಳ್ಳನೂ ಪೂರ್ಣ ಶಕ್ತರಾಗಿದ್ದು ದೇವರ ಸಂಪೂರ್ಣತೆಯ ಮಟ್ಟಿಗೂ ಪರಿಪೂರ್ಣರಾಗುವ ಹಾಗೆ ನಿಮಗೆ ದಯಪಾಲಿಸಲಿ ಎಂದು ಆತನನ್ನು ಬೇಡಿಕೊಳ್ಳುತ್ತೇನೆ.**

**ಇಬ್ರಿಯ 6:1 ಆದುದರಿಂದ ನಿರ್ಜಿವ ಕರ್ಮಗಳ ಮೇಲಣ ನಂಬಿಕೆಯನ್ನು ಬಿಟ್ಟು ಬಿಟ್ಟು ದೇವರಲ್ಲಿಯೇ ನಂಬಿಕೆಯಿಡಬೇಕಾದದ್ದು.**

**ಮತ್ತಾಯ 5:48 ಆದದರಿಂದ ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ ನೀವೂ ದೋಷವಿಲ್ಲದವರಾಗಿರ್ರಿ.**

ಪರಿಪೂರ್ಣತೆಯ ಕಡೆಗೆ ಸಾಗುವಂಥದ್ದು (ಪ್ರಬುದ್ಧತೆ ಮತ್ತು ಸಂಪೂರ್ಣತೆ) ಅತಿ ಪರಿಶುದ್ಧ ಸ್ಥಳದಲ್ಲಿರುವ (ಸಿಂಹಾಸನ ಕೋಣೆ) ಪರಿಪೂರ್ಣನಾದವನಿಗೆ ಹತ್ತಿರವಾಗುವುದನ್ನು ಒಳಗೊಂಡಿರುತ್ತದೆ. ಆತನು ತನ್ನ ಪರಿಶುದ್ಧತೆ, ಗುಣಲಕ್ಷಣ, ಮಾರ್ಗಗಳು, ನಡವಳಿಕೆ, ಪ್ರೀತಿ, ತಿಳಿವಳಿಕೆ, ಜ್ಞಾನ ಮತ್ತು ಶಕ್ತಿಯಲ್ಲಿ ಪರಿಪೂರ್ಣವಾಗಿದ್ದಾನೆ. ಆತನ ಪ್ರಸನ್ನತೆಯಲ್ಲಿರುವಾಗ ನಾವು ಆತನ ಸಾರೂಪ್ಯಕ್ಕೆ ಅನುಗುಣವಾಗಿರುತ್ತೇವೆ. ನಾವು ಆತನ ಪ್ರಸನ್ನತೆಯಲ್ಲಿ ಸಮಯ ಕಳೆಯುವಾಗ ಆತನ ಜೀವ ಮತ್ತು ಗುಣಲಕ್ಷಣ ನಮ್ಮಲ್ಲಿ ಸುರಿಸಲ್ಪಡುತ್ತವೆ.

**ದೇವರ ಒಳ್ಳೆಯ ಚಿತ್ತ - ದೇವರ ಅಂಗೀಕಾರಾರ್ಹ ಚಿತ್ತ - ದೇವರ ಪರಿಪೂರ್ಣ ಚಿತ್ತ**

**ರೋಮಾಪುರ 12:2 ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕ ಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರದದ್ದು ಅಂದರೆ ಉತ್ತಮವಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ.**

* *ಒಳ್ಳೆಯ*

ಹೊರಂಗಣ ಅಂಗಳದ ಪ್ರದೇಶದಲ್ಲಿ ವಾಸಿಸಲು ನಿರ್ಧರಿಸುವವರು ದೇವರ ಅನುಮತಿಸಿ ಕೊಡುವ ಚಿತ್ತದಲ್ಲಿದ್ದಾರೆ. ಅವರು ಅಂಗೀಕಾರದ ಮೇರೆಯೊಳಗೆ ವಾಸಿಸುತ್ತಾರೆ, ಆದರೆ ಆತನ ಚಿತ್ತದ ಕೇಂದ್ರಬಿಂದುವಿನಿಂದ ದೂರವಿರುತ್ತಾರೆ. ಅವರು ಆತನನ್ನು ರಕ್ಷಕನೆಂದು ತಿಳಿದಿದ್ದಾರೆ ಹೊರತು ಕರ್ತನೆಂದು ತಿಳಿದಿಲ್ಲ. ಅವರು ದೇವರ ಆಶೀರ್ವಾದವನ್ನು ಬಯಸುತ್ತಾರೆ ಆದರೆ ಲೋಕದ ವಿಷಯಗಳನ್ನು ಹಂಬಲಿಸುತ್ತಾರೆ. ಅವರು ಇಬ್ಬರು ಯಜಮಾನರನ್ನು ಸೇವಿಸಲು ಪ್ರಯತ್ನಿಸುತ್ತಿರುತ್ತಾರೆ.

* *ಅಂಗೀಕಾರಾರ್ಹ*

ಅಂಗೀಕಾರಾರ್ಹ ಚಿತ್ತವು ಹೆಚ್ಚಿನ ನೆರವೇರಿಕೆ ಉಳ್ಳದ್ದಾಗಿದೆ ಆದರೂ ದೇವರ ಪರಿಪೂರ್ಣ ಚಿತ್ತಕ್ಕಿಂತ ಕೆಳಮಟ್ಟದ್ದಾಗಿರುತ್ತದೆ. ಇಲ್ಲಿ ನಾವು ಇನ್ನೂ ಆತನ ಮಹಿಮೆಯನ್ನು ಹೊಂದವವರಾಗಿರುತ್ತೇವೆ.

**ರೋಮಾಪುರ 3:23 ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೇ ಹೋಗಿದ್ದಾರೆ,**

* *ಪರಿಪೂರ್ಣ*

ದೇವರ ಪರಿಪೂರ್ಣವಾದ ಚಿತ್ತವು ದೇವರ ಚಿತ್ತದ ಕೇಂದ್ರಬಿಂದುವಿನಲ್ಲಿರುತ್ತದೆ, ದೇವರಿಗೆ ಮೆಚ್ಚಿಕೆಯಾದದ್ದು ಆಗಿರುತ್ತದೆ.

**ಲೂಕ 11:2 ಅದಕ್ಕಾತನು ನೀವು ಪ್ರಾರ್ಥಿಸುವಾಗ ತಂದೆಯೇ, ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ. ನಿನ್ನ ರಾಜ್ಯವು ಬರಲಿ.**

**ಯೋಹಾನ 4:34 ಯೇಸು ಅವರಿಗೆ ನನ್ನನ್ನು ಕಳುಹಿಸಿದಾತನ ಚಿತ್ತವನ್ನು ಮಾಡಿ ಆತನ ಕೆಲಸವನ್ನು ಪೂರೈಸುವದೇ ನನ್ನ ಆಹಾರವು.**

**ಕೀರ್ತನೆ 143:10 ನಿನ್ನ ಚಿತ್ತದಂತೆ ನಡಕೊಳ್ಳುವದನ್ನು ನನಗೆ ಕಲಿಸು; ನನ್ನ ದೇವರು ನೀನಲ್ಲವೋ? ಶುಭಕಾರಿಯಾಗಿರುವ ನಿನ್ನ ಆತ್ಮನು ನನ್ನನ್ನು ಮಟ್ಟ ನೆಲದಲ್ಲಿ ನಡಿಸಲಿ.**

**ಆರಂಭಿಕ ಅನುಭವ - ಭಾಗಶಃ ಅನುಭವ - ಸಂಪೂರ್ಣವಾದ ಅನುಭವ**

**ಎಫೆಸ 3:19 ಜ್ಞಾನಕ್ಕೆ ಮೀರುವ ಕ್ರಿಸ್ತನ ಪ್ರೀತಿಯನ್ನು ತಿಳುಕೊಳ್ಳನೂ ಪೂರ್ಣ ಶಕ್ತರಾಗಿದ್ದು ದೇವರ ಸಂಪೂರ್ಣತೆಯ ಮಟ್ಟಿಗೂ ಪರಿಪೂರ್ಣರಾಗುವ ಹಾಗೆ ನಿಮಗೆ ದಯಪಾಲಿಸಲಿ ಎಂದು ಆತನನ್ನು ಬೇಡಿಕೊಳ್ಳುತ್ತೇನೆ.**

**ಎಫೆಸ 4:13 ದೇವಜನರನ್ನು ಯೋಗ್ಯ ಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ಸಭೆಯ ಸೇವೆಗೋಸ್ಕರವೂ ಕ್ರಿಸ್ತನ ದೇಹವು ಅಭಿವೃದ್ಧಿಯಾಗುವದಕ್ಕೋಸ್ಕರವೂ ಆತನು ಇವರನ್ನು ಅನುಗ್ರಹಿಸಿದನು.**

**ಮೂವತ್ತು ಪಟ್ಟು - ಅರವತ್ತು ಪಟ್ಟು - ನೂರು ಪಟ್ಟು**

ನಾವು ಫಲಕೊಡುವ ಹೊಸ ಹಂತಗಳಿಗೆ ಬರಬಹುದು.

**ಮತ್ತಾಯ 13:23 ಒಬ್ಬನು ವಾಕ್ಯವನ್ನು ಕೇಳಿ ತಿಳುಕೊಂಡು ಫಲವಂತನಾಗಿ ನೂರರಷ್ಟಾಗಲಿ ಅರವತ್ತರಷ್ಟಾಗಲಿ, ಮೂವತ್ತರಷ್ಟಾಗಲಿ ಫಲವನ್ನು ಕೊಡುತ್ತಾನೆ. ಇವನೇ ಒಳ್ಳೆಯ ನೆಲವಾಗಿರುವವನು ಎಂದು ಹೇಳಿದನು.**

**ಎಫೆಸ 1:3 ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇವರೂ ತಂದೆಯೂ ಆಗಿರುವಾತನಿಗೆ ಸ್ತೋತ್ರ. ಆತನು ಪರಲೋಕದಲ್ಲಿನ ಸಕಲ ಆತ್ಮೀಯ ವರಗಳನ್ನು ನಮಗೆ ಕ್ರಿಸ್ತ ಯೇಸುವಿನಲ್ಲಿ ಅನುಗ್ರಹಿಸಿದ್ದಾನೆ.**

**ಕೀರ್ತನೆ 1:3 ಅವನು ನೀರಿನ ಕಾಲಿವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವನು. ಅಂಥ ಮರವು ತಕ್ಕ ಕಾಲದಲ್ಲಿ ಫಲಕೊಡುತ್ತದಲ್ಲಾ ಅದರ ಎಲೆ ಬಾಡುವದೇ ಇಲ್ಲ. ಅದರಂತೆ ಅವನ ಕಾರ್ಯವೆಲ್ಲವೂ ಸಫಲವಾಗುವದು.**

**ಉಪಸಂಹಾರ**

ನಾವು …

**ಪ್ರಾಪಂಚಿಕ ಕಲಬೆರಕೆಯಿಂದ - ಪ್ರಾಣ ಮತ್ತು ಆತ್ಮಕ್ಕೆ - ಶುದ್ಧ ಆತ್ಮಕ್ಕೆ** ಹೋಗಬಹುದು

ನಾವು …

ನೈಸರ್ಗಿಕ **ಪ್ರಕಾಶದಿಂದ - ಆತ್ಮ ಪ್ರಕಾಶಕ್ಕೆ - ದೇವರ ಮಹಿಮೆಗೆ** ಹೋಗಬಹುದು

ಒಳಗಿನಿಂದ …

**ಕೂಗುವಷ್ಟು - ಮಾತನಾಡುವಷ್ಟು – ಪಿಸುಮಾತು ಆಡುವಷ್ಟು ದೂರದವರೆಗೂ** ಹೋಗಬಹುದು

ಇದು …

**ನಿನ್ನೆ - ಇಂದು - ಎಂದೆಂದಿಗೂ**

ನಾವು …

**ವಿಶ್ವಾಸಿಯ ಅಭಿಷೇಕದಿಂದ - ಯಾಜಕನ ಅಭಿಷೇಕಕ್ಕೆ - ರಾಜನ ಅಭಿಷೇಕಕ್ಕೆ** ಹೋಗಬಹುದು

ಆತನ …

**ಪ್ರಸನ್ನತೆಯಲ್ಲಿ - ಆತನ ಬಲವಾದ ಪ್ರಸನ್ನತೆಯಲ್ಲಿ – ಮಹಿಮೆಯಲ್ಲಿ ಇರುವವರೆಗೂ** ಹೋಗಬಹುದು

ಇಂದು, ಕರ್ತನೊಂದಿಗಿರುವ ನಮ್ಮ ನಡೆಯು ಏನೇ ಆಗಿರಲಿ, ಅದು ಯಾವಾಗಲೂ ಹೆಚ್ಚು ಇರುತ್ತದೆ. ಆತನೊಂದಿಗಿನ ನಮ್ಮ ಸಂಬಂಧವು

ಪ್ರಗತಿಶೀಲವಾದದ್ದು ಆಗಿದೆ. ನಾವು ಮಹಿಮೆಯಿಂದ, ಮಹಿಮೆಯವರೆಗೂ ಸಾಗುತ್ತಲೇ ಇರಬಹುದು.

**ಪರಾಮರ್ಶೆಗಾಗಿರುವ ಪ್ರಶ್ನೆಗಳು**

1. ಮೋಶೆಯ ದೇವದರ್ಶನ ಗುಡಾರದ ಬಗ್ಗೆ ಮತ್ತು ಅದು ಸ್ತುತಿ ಆರಾಧನೆಗೆ ಹೇಗೆ ಸಂಬಂಧಿಸಿದೆ ಎಂಬುದರ ಬಗ್ಗೆ ನಿಮ್ಮ ಸ್ವಂತ ವಾಕ್ಯದಲ್ಲಿ ವಿವರಿಸಿ.

2. ಮೋಶೆಯ ದೇವದರ್ಶನ ಗುಡಾರಕ್ಕೆ ಸಂಬಂಧಿಸಿದ ನಾಲ್ಕು ಪ್ರಗತಿ ಕಾರ್ಯಗಳ ಪೈಕಿ ಮೂರು ಕಾರ್ಯಗಳನ್ನು ತಿಳಿಸಿರಿ, ಆದರೆ ಅದಕ್ಕಿಂತಲೂ ಮುಖ್ಯವಾಗಿ ಅವುಗಳನ್ನು ನಿಮ್ಮೊಂದಿಗೆ ಸಂಬಂಧ ಕಲ್ಪಿಸಿಕೊಳ್ಳಿ. ಅವು ನಿಮಗೆ ಹೇಗೆ ಸಂಬಂಧ ಉಳ್ಳವುಗಳಾಗಿವೆ ಎಂಬುದನ್ನು ವಿವರಿಸಿರಿ.

## ಪಾಠ 4

# ಮಹಿಮೆಯೊಳಕ್ಕೆ ಹೋಗಲು ಭೇದನ

**ಕತ್ತಲೆಯ ಮುಸುಕು**

ದೇವರ ಮಹಿಮೆಯ ತೋರ್ಪಡಿಸುವಿಕೆಯನ್ನು ಅನುಭವಿಸುವಲ್ಲಿ ಅನೇಕರು ವಿಫಲರಾಗಿದ್ದಾರೆ ಏಕೆಂದರೆ ಶತ್ರುವು "ಕ್ರಿಸ್ತನ ಮಹಿಮೆಯ ಸುವಾರ್ತೆಯ ಬೆಳಕು... ಅವರ ಮೇಲೆ ಉದಯಿಸಿದಂತೆ" ತಡೆಯುವ ಪ್ರಯತ್ನದಲ್ಲಿ ಅವರ ಕಣ್ಣುಗಳನ್ನು ಕುರುಡಾಗಿಸಲು ಕತ್ತಲೆಯ ಮುಸುಕನ್ನು ಹಾಕಿದ್ದಾನೆ.

**ಸೈತಾನನಿಂದ ಕಳುಹಿಸಲ್ಪಟ್ಟಿದೆ**

**2 ಕೊರಿಂಥ 4:3,4 ನಾವು ಸಾರುವ ಸುವಾರ್ತೆಯು ಕೆಲವರಿಗೆ ಮರೆಯಾಗಿರುವದಾದರೆ ನಾಶನ ಮಾರ್ಗದಲ್ಲಿರುವವರಿಗೆ ಮರೆಯಾಗಿರುವದು. ಇದರಲ್ಲಿ ದೇವರ ಪ್ರತಿರೂಪವಾಗಿರುವ ಕ್ರಿಸ್ತನ ಪ್ರಭಾವವನ್ನು ತೋರಿಸುವ ಸುವಾರ್ತೆಯ ಪ್ರಕಾಶವು ಉದಯವಾಗಬಾರದೆಂದು ಈ ಪ್ರಪಂಚದ ದೇವರು ನಂಬಿಕೆಯಿಲ್ಲದವರ ಮನಸ್ಸನ್ನು ಮಂಕು ಮಾಡಿದನು.**

ಮರೆಮಾಡುವುದು ಅಥವಾ ನೆರಳು ಕೊಡುವ ಲೂಸಿಫರ್‌ನ ಮೂಲ ಸ್ವಭಾವವಾಗಿತ್ತು.

**ಯೆಹೆಜ್ಕೇಲ 28:14 ನೀನು ರೆಕ್ಕೆ ತೆರೆದು ನೆರಳು ಕೊಡುವ ಕೆರೂಬಿಯಾಗಿದ್ದಿ; ನಾನು ನಿನ್ನನ್ನು ದೇವರ ಪರಿಶುದ್ಧಪರ್ವತದಲ್ಲಿ ನೆಲೆಗೊಳಿಸಿದೆನು; ನೀನು ಕೆಂಡದ ಮಳೆಯಲ್ಲಿ ವಿಹಾರಮಾಡುತ್ತಾ ಇದ್ದಿ.**

ಲೂಸಿಫರ್‌ನು ದಂಗೆ ಏಳುವುದಕ್ಕಿಂತ ಮುಂಚಿತವಾಗಿ, ಒಡಂಬಡಿಕೆಯ ಮೂಜೂಷದ ಮೇಲಿರುವ ಕೃಪಾಸನದ ಎರಡೂ ಬದಿಗಳಲ್ಲಿ ಕೆರೂಬಿಗಳು ಚಿತ್ರಿಸಲ್ಪಟ್ಟಿರುವಂತೆಯೇ ಆತನ ಸಿಂಹಾಸನವನ್ನು ಮರೆಮಾಡುವುದಕ್ಕಾಗಿ ತನ್ನ ಪಕ್ಕದಲ್ಲಿಯೇ ಇರುವಂತೆ ದೇವರು ಅವನನ್ನು ನೇಮಿಸಿದ್ದಾನೆಂದು ತೋರುತ್ತದೆ. ಅದು ಮಹಿಮೆಯ ಮರೆ ಅಥವಾ ಹೊದಿಕೆ ಆಗಿತ್ತು. ಲೂಸಿಫರ್‌ನು ಬಿದ್ದುಹೋಗಿರುವ ಸ್ಥಿತಿಯಲ್ಲಿದ್ದರೂ, ಮರೆಮಾಡುವಂಥದ್ದು ಈಗಲೂ ಅವನ ಸ್ವಭಾವವಾಗಿದೆ. ಆದರೆ, ಈಗ ಕ್ರಿಸ್ತನ ಮಹಿಮೆಯ ಸುವಾರ್ತೆಯ ಬೆಳಕು ಕತ್ತಲೆಯಲ್ಲಿ ಸಂಚರಿಸುತ್ತಿರುವವರಿಗೆ ಪ್ರಕಾಶಿಸದಂತೆ ಅಥವಾ ತಲುಪದಂತೆ ಮಾಡುವ ಪ್ರಯತ್ನದಲ್ಲಿ ಆತ್ಮಿಕ ಕತ್ತಲೆಯ ಮುಸುಕನ್ನು ಹಾಕಿ ಮರೆಮಾಡುವುದು ಅವನ ಉನ್ಮತ್ತ ಉದ್ದೇಶವಾಗಿದೆ.

## ಪೂರ್ಣವಾದ ಆತ್ಮಿಕ ಕತ್ತಲು

ಇಂದು ಅನೇಕರು ಪೂರ್ಣವಾದ ಆತ್ಮಿಕ ಕತ್ತಲೆಯನ್ನು ಅನುಭವಿಸುತ್ತಿದ್ದಾರೆ ಮತ್ತು ಮೇಲಿನ ಆಕಾಶವು ತಾಮ್ರದಂತೆ ತೋರುತ್ತಿದೆ.

**ಯೆಶಾಯ 60: 2 ಇಗೋ, ಕತ್ತಲು ಭೂಮಿಯನ್ನು ಆವರಿಸಿದೆ, ಕಾರ್ಗತ್ತಲು ಜನಾಂಗಗಳನ್ನು ಮುಚ್ಚಿದೆ ...**

**ಧರ್ಮೋಪದೇಶಕಾಂಡ 28:23 ಮೇಲೆ ಆಕಾಶವು (ಮಳೆಸುರಿಸದೆ) ತಾಮ್ರದಂತೆಯೂ ಕೆಳಗೆ ಭೂಮಿಯು (ಬೆಳೆಕೊಡದೆ) ಕಬ್ಬಿಣದಂತೆಯೂ ಇರುವವು.**

ಕ್ರಿಸ್ತನ ಮಹಿಮೆಯ ಸುವಾರ್ತೆಯ ಬೆಳಕು ತಮ್ಮ ಮೇಲೆ ಉದಯಿಸುವಂತೆ ಅನೇಕರು ಮೊರೆಯಿಡುತ್ತಿದ್ದಾರೆ. ಯೆಶಾಯನಂತೆ ಅವರು ಮೊರೆಯಿಡುತ್ತಿದ್ದಾರೆ.

**ಯೆಶಾಯ 62:1-2** ಚೀಯೋನಿನ ಧರ್ಮವು ಪ್ರಕಾಶಗೊಳ್ಳುವ ತನಕ, ಯೆರೂಸಲೇಮಿನ ರಕ್ಷಣೆಯು ದೀವಿಟಿಗೆಯಂತೆ ಪ್ರಜ್ವಲಿಸುವ ವರೆಗೆ ನಾನು ಮೌನವಾಗಿರದೆ ಚೀಯೋನಿನ ಹಿತವನ್ನು ಲಕ್ಷಿಸುತ್ತಿರುವೆನು; ಸುಮ್ಮನಿರದೆ ಯೆರೂಸಲೇಮಿನ ಕ್ಷೇಮವನ್ನು ಚಿಂತಿಸುತ್ತಿರುವೆನು. ಜನಾಂಗಗಳು ನಿನ್ನ ಧರ್ಮವನ್ನು, ಸಕಲ ರಾಜರು ನಿನ್ನ ವೈಭವವನ್ನು ನೋಡುವರು.

**ಯೆಶಾಯ 64:1-3** ಆಹಾ, ನೀನು ಆಕಾಶವನ್ನು ಸೀಳಿ ಇಳಿದು ಬಾರದೇ! ನಿನ್ನ ದರ್ಶನವು ಉಂಟಾಗಿ ಪರ್ವತಗಳು ಅಲುಗಿದರೆ ಎಷ್ಟೋ ಒಳ್ಳೇದು! ಒಣಗಿಡಕ್ಕೆ ಹತ್ತುವ ಕಿಚ್ಚಿನ ಪ್ರಕಾರವೂ ನೀರನ್ನು ಕುದಿಸುವ ಉರಿಯೋಪಾದಿಯಲ್ಲಿಯೂ (ನೀನು ಪ್ರತ್ಯಕ್ಷನಾಗಿ) ನಮ್ಮ ನಿರೀಕ್ಷೆಗೆ ಮೀರಿದ ಭಯಂಕರ ಕೃತ್ಯಗಳನ್ನು ನಡಿಸಿ ನಿನ್ನ ನಾಮಮಹತ್ತನ್ನು ನಿನ್ನ ಶತ್ರುಗಳಿಗೆ ತಿಳಿಯಪಡಿಸಿ ಜನಾಂಗಗಳನ್ನು ನಿನ್ನ ದರ್ಶನದಿಂದ ನಡುಗಿಸಬಾರದೇ! ಹೌದು, ನೀನು ಇಳಿದು ಬಂದು ಪರ್ವತಗಳು ನಿನ್ನ ದರ್ಶನದಿಂದ ಅಲುಗಿದರೆ ಎಷ್ಟೋ ಲೇಸು!

### ಭೇದನದ ಕುರಿತು ವಾಗ್ದಾನ

ದೇವರು ತನ್ನ ಮಹಿಮೆಯ ಅನಾವರಣದ ಕುರಿತಾಗಿ ನಮಗೆ ವಾಗ್ದಾನ ಮಾಡಿದ್ದಾನೆ.

**ಯೆಶಾಯ 25:7 ಮತ್ತು ಸಮಸ್ತ ಜನಾಂಗಗಳನ್ನು ಮುಚ್ಚಿರುವ ಮುಸುಕನ್ನೂ ಸಕಲ ದೇಶೀಯರ ಮೇಲೆ ಹಾಕಿರುವ ತೆರೆಯನ್ನೂ ಇದೇ ಪರ್ವತದಲ್ಲಿ ನಾಶಮಾಡುವನು.**

**ಯೆಶಾಯ 60:1-5 ಏಳು, ಪ್ರಕಾಶಿಸು, ನಿನಗೆ ಬೆಳಕು ಬಂತು, ಯೆಹೋವನ ತೇಜಸ್ಸು ನಿನ್ನ ಮೇಲೆ ಉದಯಿಸಿದೆ. ಇಗೋ, ಕತ್ತಲು ಭೂಮಿಯನ್ನು ಆವರಿಸಿದೆ, ಕಾರ್ಗತ್ತಲು ಜನಾಂಗಗಳನ್ನು ಮುಚ್ಚಿದೆ; ನಿನ್ನ ಮೇಲಾದರೋ ಯೆಹೋವನು ಉದಯಿಸುವನು, ಆತನ ತೇಜಸ್ಸು ನಿನ್ನಲ್ಲಿ ಕಾಣಿಸುವದು. ಜನಾಂಗಗಳು ನಿನ್ನ ಬೆಳಕಿಗೆ ನೆರೆಯುವವು, ಅರಸರು ನಿನ್ನಲ್ಲಿನ ಉದಯ ಪ್ರಕಾಶಕ್ಕೆ ಬರುವರು. ಕಣ್ಣೆತ್ತಿ ಸುತ್ತಲು ನೋಡು, ನಿನ್ನ ಮಕ್ಕಳೆಲ್ಲರೂ ಗುಂಪುಕೂಡಿ ನಿನ್ನ ಬಳಿಗೆ ಸೇರುತ್ತಿದ್ದಾರೆ; ಗಂಡುಮಕ್ಕಳು ದೂರದಿಂದ ಸಮೀಪಿಸುತ್ತಾರೆ, ಹೆಣ್ಣುಮಕ್ಕಳು ಕಂಕುಳಿನಲ್ಲಿ ಕುಳಿತು ಬರುತ್ತಾರೆ. ನೀನು ನೋಡಿ ಕಳೆಗೊಳ್ಳುವಿ, ನಿನ್ನ ಹೃದಯವು ಅದರುತ್ತಾ ಉಬ್ಬುವದು; ಏಕೆಂದರೆ ಸಮುದ್ರ ವ್ಯಾಪಾರ ಸಮೃದ್ಧಿಯು ನಿನ್ನ ಕಡೆಗೆ ತಿರುಗುವದು, ಜನಾಂಗಗಳ ಐಶ್ವರ್ಯವು ನಿನಗೆ ದೊರೆಯುವದು.**

**ಹಬಕ್ಕೂಕ 2:14 ಸಮುದ್ರದಲ್ಲಿ ನೀರು ಹೇಗೋ ಹಾಗೆಯೇ ಭೂಮಿಯಲ್ಲಿ ಯೆಹೋವನ ಮಹಿಮೆಯ ಜ್ಞಾನವು ತುಂಬಿಕೊಂಡಿರುವದು.**

### ಭೇದಿಸುವ ಕರ್ತನು

---

ಹಾಗಾದರೆ ಈಗ ಉದ್ಭವಿಸುವ ಪ್ರಶ್ನೆಯೆಂದರೆ, "ದೇವರ ಮಹಿಮೆಯ ಭೇದನವು ಉಂಟಾಗುವವರೆಗೆ ನಾವು ಕುಳಿತು ಕಾಯಬೇಕೇ ಅಥವಾ ದೇವರ ಅದ್ಭುತಕರವಾದ ಮಹಿಮೆಯ ಈ ಭೇದನವನ್ನು ಅನುಭವಿಸಲು ಯೇಸುವಿನ ಹಿಂಬಾಲಕರಾಗಿರುವ ನಾವು ಏನಾದರೂ ಮಾಡಬೇಕೇ?"

ಮೊದಲನೆಯದಾಗಿ, ದೇವರು ಭೇದಿಸುವ ಕರ್ತನು ಎಂದು ನಾವು ತಿಳಿದಿರಬೇಕು.

**ದಾವೀದನ ಭೇದನ**

* *ಮೂರನೆಯ ಅಭಿಷೇಕವನ್ನು ಹೊಂದಿಕೊಂಡನು*

ದಾವೀದನು ತನ್ನ ಮೂರನೆಯ ಮತ್ತು ಅತ್ಯುನ್ನತವಾದ ಅಭಿಷೇಕವನ್ನು ಹೊಂದಿಕೊಂಡಾಗ, ಶತ್ರುವು ದಾವೀದನನ್ನು ಹುಡುಕುತ್ತಾ ಬಂದನು. ಯೌವನಸ್ಥನಾಗಿದ್ದ ದಾವೀದನನ್ನು ಒಂದು ದಿನ ಅರಸನನ್ನಾಗಿ ಸಮುವೇಲನು ಅಭಿಷೇಕಿಸಿದನು. ಅನಂತರ ಅವನನ್ನು ಯೆಹೂದದ ಅರಸನನ್ನಾಗಿ ಅಭಿಷೇಕಿಸಲಾಯಿತು. ಆದಾಗ್ಯೂ, ಕೆಳಗಿನ ವಾಕ್ಯಭಾಗದಲ್ಲಿ, ಅವನು ತನ್ನ ಮೂರನೆಯ ಮತ್ತು ಅತ್ಯುನ್ನತವಾದ ಅಭಿಷೇಕವನ್ನು ಹೊಂದಿಕೊಂಡನು. ಅವನನ್ನು ಇಸ್ರಾಯೇಲ್ಯರೆಲ್ಲರ ಮೇಲೆ ಅರಸನನ್ನಾಗಿ ಅಭಿಷೇಕಿಸಲಾಯಿತು.

ಬಂಧನದ ಪ್ರತಿಯೊಂದು ನೊಗವನ್ನು ನಾಶಮಾಡಲು ದೇವಜನರ ಮೇಲೆ ಇಳಿದು ಬರುವ ಅಭಿಷೇಕದ ಶಕ್ತಿಯ ಬಗ್ಗೆ ಶತ್ರುವಿಗೆ ತಿಳಿದಿದೆ.

**ಯೆಶಾಯ 10:27 ... ನೀವು ಪುಷ್ಟರಾದ ಕಾರಣ ನೊಗವು ಮುರಿದು ಹೋಗುವದು.**

* *ಶತ್ರುವು ಬಂದನು*

ಶತ್ರುಗಳೆಲ್ಲರು (ಫಿಲಿಷ್ಟಿಯರು) ದಾವೀದನನ್ನು ಹುಡುಕಲು ಹೊರಟು ಹೋದರು. ಅವನನ್ನು ತಡೆಯಬೇಕು ಎಂದು ಅವರಿಗೆ ತಿಳಿದಿತ್ತು.

**2 ಸಮುವೇಲ 5:17-20 ಇಸ್ರಾಯೇಲ್ಯರು ದಾವೀದನನ್ನು ಅಭೀಷೆಕಿಸಿ ತಮ್ಮ ಅರಸನನ್ನು ಮಾಡಿಕೊಂಡರೆಂಬ ವರ್ತಮಾನವು ಫಿಲಿಷ್ಟಿಯರಿಗೆ ಮುಟ್ಟಿದಾಗ ಅವರು ಅವನನ್ನು ಹಿಡಿಯುವದಕ್ಕೆ ಹೊರಟರು. ದಾವೀದನು ಇದನ್ನು ಕೇಳಿ ದುರ್ಗಕ್ಕೆ ಹೋದನು. ಫಿಲಿಷ್ಟಿಯರು ದೇಶದೊಳಗೆ ನುಗ್ಗಿ ರೆಫಾಯಿಮ ತಗ್ಗಿಗೆ ಬಂದು ಪಾಳೆಯ ಮಾಡಿಕೊಂಡಿದ್ದಾರೆಂದು ತಿಳಿದು ದಾವೀದನು ಯೆಹೋವನನ್ನು ನಾನು ಫಿಲಿಷ್ಟಿಯರಿಗೆ ವಿರೋಧವಾಗಿ ಹೋಗಬಹುದೋ? ಅವರನ್ನು ನನ್ನ ಕೈಗೆ ಒಪ್ಪಿಸಿಕೊಡುವಿಯೋ ಎಂದು ಕೇಳಲು,**

❋ *ಬಾಳ್ ಪೆರಾಚೀಮ್*

**ಆತನು - ಹೋಗು ನಾನು ಹೇಗೂ ಅವರನ್ನು ನಿನ್ನ ಕೈಗೆ ಒಪ್ಪಿಸಿಕೊಡುವೆನು. ಎಂದು ಉತ್ತರಕೊಟ್ಟದ್ದರಿಂದ, ಅವನು ಹೋಗಿ ಅವರನ್ನು ಸೋಲಿಸಿ ಯೆಹೋವನು ಕಟ್ಟೆ ಒಡೆದ ಪ್ರವಾಹದಂತೆ ನನ್ನ ಶತ್ರುಗಳ ಮೇಲೆ ಬಿದ್ದು ಅವರನ್ನು ನನ್ನ ಕಣ್ಣ ಮುಂದೆಯೇ ನಾಶಮಾಡಿದ್ದಾನೆಂದು ಹೇಳಿ ಆ ಯುದ್ಧ ಸ್ಥಳಕ್ಕೆ ಬಾಳಪೆರಾಚೀಮ್ ಎಂದು ಹೆಸರಿಟ್ಟನು.**

ಬಾಳ್ ಪೆರಾಚೀಮ್ ಎಂದರೆ ಕರ್ತನು ಭೇದಿಸುವ ಕರ್ತನಾಗಿದ್ದಾನೆ ಎಂದರ್ಥ!

ದೇವರು ಈಗಲೂ "ಭೇದಿಸುವ ಕರ್ತನು" ಆಗಿದ್ದಾನೆ. ನಾವು ವಿಧೇಯರಾಗಿ ನಮ್ಮ ಕಾರ್ಯವನ್ನು ಮಾಡಿದರೆ ಆತನು ತನ್ನ ಕಾರ್ಯವನ್ನು ಮಾಡುತ್ತಾನೆ ಎಂದು ನಮಗೆ ತಿಳಿದಿದೆ.

ಇಂದು ಅನೇಕರು ನಂಬಿಕೆಯಲ್ಲಿ ಮತ್ತು ವಿಧೇಯತೆಯಲ್ಲಿ ನಿಂತುಕೊಂಡಿದ್ದಾರೆ, ತಮ್ಮ ಕುಟುಂಬ ಸದಸ್ಯರು ಮತ್ತು ಸ್ನೇಹಿತರು ರಕ್ಷಣೆಯನ್ನು ಹೊಂದಿಕೊಳ್ಳುವಂತೆ ಬಿಡುಗಡೆಯಾಗಬೇಕೆಂದು ದೇವರನ್ನು ನಂಬುತ್ತಿದ್ದಾರೆ. ಅನೇಕರು ತಮ್ಮ ಪ್ರಾಂತ್ಯವನ್ನು ನಿಯಂತ್ರಿಸುತ್ತಿರುವ ಅಂಧಕಾರ ಶಕ್ತಿಗಳಿಂದ ಆತ್ಮಿಕ ಬಿಡುಗಡೆಗಾಗಿ ದೇವರನ್ನು ನಂಬುತ್ತಿದ್ದಾರೆ. ಇನ್ನೂ ಅನೇಕರಿಗೆ ಅವರ ಸಂಬಂಧಗಳಲ್ಲಿ, ಅವರ ಆರೋಗ್ಯದಲ್ಲಿ ಮತ್ತು ಅವರ ಆರ್ಥಿಕತೆಯಲ್ಲಿ ಬಿಡುಗಡೆಯ ಅಗತ್ಯವಿದೆ. ಆದ್ದರಿಂದ ನಾವು ದೇವರನ್ನು ಭೇದಿಸುವ ಅಥವಾ ಬಿಡುಗಡೆಗೊಳಿಸುವ ಕರ್ತನಾಗಿದ್ದಾನೆ ಎಂದು ತಿಳಿದುಕೊಳ್ಳುವುದು ಬಹಳ ಮುಖ್ಯ. ನಾವು ನಮ್ಮ ಕಾರ್ಯವನ್ನು ಮಾಡಿದರೆ, ನಾವು ಯಾವುದೇ ಪರಿಸ್ಥಿತಿಯಲ್ಲಿದ್ದರೂ ಸರಿ ಆತನು ತನ್ನನ್ನು ತಾನು ಬಿಡುಗಡೆಯ ಕರ್ತನು ಎಂದು ತೋರ್ಪಡಿಸುತ್ತಾನೆ.

**ದಾನಿಯೇಲನ ಬಿಡುಗಡೆ**

❋ *21 ದಿನಗಳು ಉಪವಾಸ ಮಾಡಿದನು*

ದಾನಿಯೇಲನು ಬಿಡುಗಡೆಗಾಗಿ ಇಪ್ಪತ್ತೊಂದು ದಿನಗಳ ಕಾಲ ಪ್ರಾರ್ಥಿಸಿದನು ಮತ್ತು ಉಪವಾಸ ಮಾಡಿದನು.

ದಾನಿಯೇಲ **10:1-3** ಪಾರಸಿಯ ರಾಜನಾದ ಕೋರೆಷನ ಆಳಿಕೆಯ ಮೂರನೆಯ ವರುಷದಲ್ಲಿ ಬೇಲ್ತೆಶಚ್ಚರನೆಂಬ ದಾನಿಯೇಲನಿಗೆ ಒಂದು ಸಂಗತಿಯು ಪ್ರಕಟವಾಯಿತು; ಬಹು ಕಷ್ಟದ ಗಡುವಿನ ಆ ಸಂಗತಿಯು ಸತ್ಯ; ಅವನು ಕಂಡ ಕನಸನ್ನು ಗಮನಿಸಿ ಆ ಸಂಗತಿಯನ್ನು ಮಂದಟ್ಟುಮಾಡಿಕೊಂಡನು. ಆ ಕಾಲದಲ್ಲಿ ದಾನಿಯೇಲನಾದ ನಾನು ಮೂರು ವಾರ ಶೋಕಿಸುತ್ತಿದ್ದೆನು. ಮೂರು ವಾರ ಮುಗಿಯುವ ತನಕ ನಾನು ರುಚಿ ಪದಾರ್ಥವನ್ನು ತಿನ್ನಲಿಲ್ಲ, ಮಾಂಸವನ್ನೂ ದ್ರಾಕ್ಷಾರಸವನ್ನೂ ನನ್ನ ಬಾಯಿಗೆ ಹಾಕಲಿಲ್ಲ, ಎಣ್ಣೆಯನ್ನು ಹಚ್ಚಿಕೊಳ್ಳಲಿಲ್ಲ.

✱ *ದರ್ಶನ ಉಂಟಾಯಿತು*

ಆಗ ದಾನಿಯೇಲನ ಬಿಡುಗಡೆ ಬಂದಿತು.

ವಚನಗಳು **4-6** ಮೊದಲನೆಯ ತಿಂಗಳಿನ ಇಪ್ಪತ್ತು ನಾಲ್ಕನೆಯ ದಿನದಲ್ಲಿ ನಾನು ಹಿದ್ದೆಕೆಲೆಂಬ ಮಹಾನದಿಯ ದಡದ ಮೇಲೆ ಇದ್ದು ಕಣ್ಣೆತ್ತಿ ನೋಡಲು ಇಗೋ, ನಾರಿನ ಬಟ್ಟೆಯನ್ನು ಹೊದ್ದುಕೊಂಡು ಊಫಜಿನ ಅಪರಂಜಿಯ ಪಟ್ಟಿಯನ್ನು ಸೊಂಟಕ್ಕೆ ಬಿಗಿದುಕೊಂಡ ಒಬ್ಬ ಪುರುಷನು ನನಗೆ ಕಾಣಿಸಿದನು; ಅವನ ಶರೀರವು ಪೀತರತ್ನದ ಹಾಗೆ ಕಂಗೊಳಿಸಿತು, ಅವನ ಮುಖವು ಮಿಂಚಿನಂತೆ ಹೊಳೆಯಿತು, ಅವನ ಕಣ್ಣುಗಳು ಉರಿಯುವ ಪಂಜುಗಳೋಪಾದಿಯಲ್ಲಿ ನಿಗಿನಿಗಿಸಿದವು, ಅವನ ಕೈಕಾಲುಗಳು ಬೆಳಗಿದ ತಾಮ್ರದ ಹಾಗೆ ಥಳಥಳಿಸಿದವು, ಅವನ ಮಾತಿನ ಶಬ್ದವು ಸಂದಣಿಯ ಕೋಲಾಹಲದಂತೆ ಕೇಳಿಸಿತು.

ವಚನಗಳು **7-9** ದಾನಿಯೇಲನಾದ ನಾನೊಬ್ಬನೇ ಆ ದರ್ಶನವನ್ನು ಕಂಡೆನು; ನನ್ನೊಂದಿಗಿದ್ದವರು ಅದನ್ನು ಕಾಣಲಿಲ್ಲ; ದೊಡ್ಡ ನಡುಕವು ಅವರನ್ನು ಹಿಡಿಯಿತು, ಓಡಿ ಹೋಗಿ ಅವಿತುಕೊಂಡರು. ನಾನು ಏಕಾಂಗಿಯಾಗಿ ಉಳಿದು ಆ ಅದ್ಭುತದರ್ಶನವನ್ನು ಕಂಡು ಶಕ್ತಿಯನ್ನೆಲ್ಲಾ ಕಳಕೊಂಡೆನು, ನನ್ನ ಗಾಂಭೀರ್ಯವು ಹಾಳಾಯಿತು, ನಿತ್ರಾಣನಾದೆನು. ಆದರೂ ಅವನು ಮಾತಾಡುವ ಸದ್ದನ್ನು ಕೇಳಿದೆನು; ಅವನ ಮಾತಿನ ಶಬ್ದವು ನನ್ನ ಕಿವಿಗೆ ಬಿದ್ದಾಗ ನಾನು ಮೈಮರೆತು ಅಡಿಮೊಗವಾಗಿ ಅಡ್ಡಬಿದ್ದಿದ್ದೆನು.

✱ *ಬಿಡುಗಡೆ ಬಂದಿತು*

"ಅವನ ಮಾತುಗಳ ನಿಮಿತ್ತವಾಗಿ" ದಾನಿಯೇಲನ ಉಪವಾಸದ ಮೊದಲ ದಿನದಂದು ದಾನಿಯೇಲನ ಬಿಡುಗಡೆಯು ಪ್ರಾರಂಭವಾಯಿತು. ಆದರೂ, ದಾನಿಯೇಲನು ಭೂಮಿಯಲ್ಲಿ ಮಾಡುತ್ತಿರುವ ಮತ್ತು ಹೇಳುತ್ತಿರುವ ಸಂಗತಿಗಳ ನಿಮಿತ್ತವಾಗಿ ಆತ್ಮ ಮಂಡಲದಲ್ಲಿ ಯುದ್ಧ ನಡೆಯುತ್ತಿತ್ತು. ಆ ಇಪ್ಪತ್ತೊಂದು ದಿನಗಳಲ್ಲಿ ದಾನಿಯೇಲನ ನೋಡಬಹುದಾದ ಯಾವುದೇ ನೈಸರ್ಗಿಕವಾದ ಬದಲಾವಣೆಗಳು ಆಗಲಿಲ್ಲ. ಆದರೆ, ಆತ್ಮ ಜಗತ್ತಿನಲ್ಲಿ ಶಕ್ತಿಯುತ ಸಂಗತಿಗಳು ನಡೆಯುತ್ತಿದ್ದವು.

**ವಚನಗಳು 10-13 ಆಹಾ, ನನಗೆ ಹಸ್ತಸ್ಪರ್ಶವಾಯಿತು; ನಾನು ಗಡಗಡನೆ ನಡುಗುತ್ತಾ ಮೊಣಕಾಲೂರಿ ಅಂಗೈಗಳ ಮೇಲೆ ನಿಲ್ಲುವಂತೆ ಮಾಡಿತು. ಆಗ ಅವರು ನನಗೆ – ದಾನಿಯೇಲನೇ, ಅತಿ ಪ್ರಿಯನೇ, ನಾನು ನುಡಿಯುವ ಮಾತುಗಳನ್ನು ಗ್ರಹಿಸು; ನಿಂತುಕೋ, ಈಗ ನಿನ್ನ ಬಳಿಗೇ ಕಳುಹಿಸಲ್ಪಟ್ಟಿದ್ದೇನೆ ಎಂದು ಹೇಳಿದನು; ಹೇಳಿದ ಕೂಡಲೆ ನಾನು ನಡುಗುತ್ತಾ ನಿಂತುಕೊಂಡೆನು. ಆ ಮೇಲೆ ಅವನು ನನಗೆ ದಾನಿಯೇಲನೇ, ಭಯಪಡಬೇಡ, ನೀನು (ದೈವಸಂಕಲ್ಪವನ್ನು) ವಿಮರ್ಶಿಸುವದಕ್ಕೂ ನಿನ್ನನ್ನು ನಿನ್ನ ದೇವರ ಮುಂದೆ ತಗ್ಗಿಸಿಕೊಳ್ಳುವದಕ್ಕೂ ಮನಸ್ಸಿಟ್ಟ ಮೊದಲನೆಯ ದಿನದಲ್ಲಿಯೇ ನಿನ್ನ ವಿಜ್ಞಾಪನೆಯು ದೇವರಿಗೆ ಮುಟ್ಟಿತು; ಆ ವಿಜ್ಞಾಪನೆಯ ನಿಮಿತ್ತವೇ ನಾನು ಬಂದೆನು. ಪಾರಸಿಯ ರಾಜ್ಯದ ದಿವ್ಯಪಾಲಕನು ಇಪ್ಪತ್ತೊಂದು ದಿವಸ ನನ್ನನ್ನು ತಡೆಯಲು ಇಗೋ, ಪ್ರಧಾನ ದಿವ್ಯಪಾಲಕರಲ್ಲೊಬ್ಬನಾದ ಮೀಕಾಯೇಲನು ನನ್ನ ಸಹಾಯಕ್ಕೆ ಬಂದನು; ಅಲ್ಲಿ ಪಾರಸಿಯ ರಾಜರ ಸಂಗಡ ಹೋರಾಡಿ.**

ಲೂಸಿಫರನು ಮತ್ತು ಅವನ ಹಿಂಬಾಲಕರು ದೇವರಿಗೆ ವಿರುದ್ಧವಾಗಿ ದಂಗೆ ಎದ್ದಾಗ ಅವರನ್ನು ಪರಲೋಕದಿಂದ ಹೊರಗೆ ದೊಬ್ಬಿದವರು ಈ ಪ್ರಧಾನ ದೂತನಾದ ಮಿಕಾಯೇಲನು ಮತ್ತು ಅವನ ದೂತರು ಆಗಿದ್ದರು. ಇದರಲ್ಲಿ ಪಾರಸಿಯ ಅಧಿಪತಿಯೂ ಇದ್ದಾನೆ. ದಾನಿಯೇಲನು ಭೂಮಿಯಲ್ಲಿ ಮಾಡುತ್ತಿದ್ದ ಮತ್ತು ಹೇಳುತ್ತಿದ್ದ ಸಂಗತಿಗಳ ನಿಮಿತ್ತವಾಗಿ, ಮಿಕಾಯೇಲನು ಬಂದನು ಮತ್ತು ದಾನಿಯೇಲನು ತನ್ನ “ಬಿಡುಗಡೆಯನ್ನು” ಅನುಭವಿಸಿದನು.

**ಯೆಹೋಷಾಫಾಟನ ಬಿಡುಗಡೆ**

* *ಸುತ್ತುವರಿದಿದ್ದರು, ಸಂಖ್ಯಾಬಲದಲ್ಲಿ ಅಧಿಕರು*

ಅರಸನಾದ ಯೆಹೋಷಾಫಾಟನನ್ನು ಮತ್ತು ಯೆಹೂದದ ಜನರೆಲ್ಲರನ್ನು ಅಮ್ಮೋನ್, ಮೋವಾಬ್ ಮತ್ತು ಸೇಯಿರ್ ಪರ್ವತದ ಸೈನ್ಯಗಳವರು ಸುತ್ತುವರಿದಿದ್ದರು. ಅವರು ಸಂಖ್ಯಾಬಲದಲ್ಲಿ ಅಧಿಕರು ಆಗಿದ್ದರು ಎಂದು ತೋರುತ್ತದೆ.

**2 ಪೂರ್ವಕಾಲವೃತ್ತಾಂತ 20:3,4 ಯೆಹೋಷಾಫಾಟನು ಹೆದರಿ ಯೆಹೋವನನ್ನೇ ಆಶ್ರಯಿಸಿಕೊಳ್ಳಬೇಕೆಂದು ನಿರ್ಣಯಿಸಿಕೊಂಡು ಯೆಹೂದ್ಯರೆಲ್ಲರೂ ಉಪವಾಸಮಾಡಬೇಕೆಂದು ಪ್ರಕಟಿಸಿದನು. ಆಗ ಯೆಹೂದ್ಯರು ಯೆಹೋವನ ಸಹಾಯವನ್ನು ಕೇಳಿಕೊಳ್ಳುವದಕ್ಕಾಗಿ ತಮ್ಮ ಎಲ್ಲಾ ಪಟ್ಟಣಗಳಿಂದ ಆತನ ಸನ್ನಿಧಿಯಲ್ಲಿ ಕೂಡಿಬಂದರು.**

* *ಜನರು ಕರ್ತನ ಮಾರ್ಗಗಳನ್ನು ತಿಳಿದವರಾಗಿದ್ದರು*

ಟಿಪ್ಪಣಿ: ಇದಕ್ಕೂ ಮೊದಲು, ಯೆಹೋಷಾಫಾಟನು ಜನರಿಗೆ ಕರ್ತನ ಮಾರ್ಗಗಳನ್ನು ಕಲಿಸಿದ್ದನು ಹಾಗೂ ಅವರನ್ನು ಕರ್ತನ ಬಳಿಗೆ ತಿರುಗಿಸಿದ್ದನು.

**2 ಪೂರ್ವಕಾಲವೃತ್ತಾಂತ 19:4 ಯೆಹೋಷಾಫಾಟನು ಯೆರೂಸಲೇಮಿನಲ್ಲಿ ವಾಸವಾಗಿದ್ದು ಇನ್ನೊಮ್ಮೆ ಬೇರ್ಷೆಬದಿಂದ ಎಫ್ರಾಯಿಮ್ ಪರ್ವತದ ವರೆಗೂ ಸಂಚರಿಸಿ ತನ್ನ ಪ್ರಜೆಗಳನ್ನು ಅವರ ಪಿತೃಗಳ ದೇವರಾದ ಯೆಹೋವನ ಕಡೆಗೆ ತಿರುಗಿಸಿದನು.**

ಶತ್ರುವು ನಮಗೆ ವಿರುದ್ಧವಾಗಿ ಬಂದಾಗ, ನಾವು ಈ ಯೆಹೂದದವರ ಹಾಗೆ ವಾಕ್ಯವನ್ನು ಕಲಿತವರು ಮತ್ತು "ನಮ್ಮ ಪಿತೃಗಳ ದೇವರಾದ ಕರ್ತನ ಬಳಿಗೆ ತಿರುಗಿಸಲ್ಪಟ್ಟವರು ಆಗಿರಬೇಕಾದದ್ದು ಮುಖ್ಯವಾಗಿದೆ."

* *ನೀವು ನಿಂತುಕೊಳ್ಳಿರಿ*

ಅವರು ಪ್ರಾರ್ಥಿಸಲು ಪ್ರಾರಂಭಿಸಿದರು. ಅವರು ಉಪವಾಸ ಮಾಡಿ "ಬಿಡುಗಡೆಗಾಗಿ" ಕರ್ತನನ್ನು ಹುಡುಕಿದರು.

**2 ಪೂರ್ವಕಾಲವೃತ್ತಾಂತ 20:12,13 ನಮ್ಮ ದೇವರೇ, ಅವರನ್ನು ದಂಡಿಸದೆ ಬಿಡುವಿಯೋ? ನಮ್ಮ ಮೇಲೆ ಬಂದ ಈ ಮಹಾಸಮೂಹದ ಮುಂದೆ ನಿಲ್ಲುವದಕ್ಕೆ ನಮ್ಮಲ್ಲಿ ಬಲವಿಲ್ಲ, ಏನು ಮಾಡಬೇಕೆಂಬದೂ**

ತಿಳಿಯದು; ನಮ್ಮ ಕಣ್ಣುಗಳು ನಿನ್ನನ್ನೇ ನೋಡುತ್ತವೆ ಎಂದು ಪ್ರಾರ್ಥಿಸಿದನು. ಎಲ್ಲಾ ಯೆಹೂದ್ಯರೂ ಅವರ ಹೆಂಡತಿ ಮಕ್ಕಳೂ ಯೆಹೋವನ ಸನ್ನಿಧಿಯಲ್ಲಿ ನಿಂತಿದ್ದರು.

ಕರ್ತನು ಪ್ರವಾದಿಯಾದ ಯಹಜೀಯೇಲನ ಮೂಲಕ ಮಾತಾಡಿದನು:

ವಚನಗಳು. **15,17** ಈ ಮಹಾಸಮೂಹದ ನಿಮಿತ್ತವಾಗಿ ಕಳವಳಗೊಳ್ಳಬೇಡಿರಿ, ಹೆದರಬೇಡಿರಿ. ಯುದ್ಧವು ನಿಮ್ಮದಲ್ಲ. ದೇವರದೇ. ನಾಳೆ ಬೆಳಗ್ಗೆ ಅವರಿಗೆ ವಿರೋಧವಾಗಿ ಹೊರಡಿರಿ; ಇಗೋ ಅವರು ಹಚ್ಚೀಚ್ ಗಟ್ಟದ ಮಾರ್ಗವಾಗಿ ಬರುತ್ತಾರೆ. ಯೆರೂವೇಲ್ ಅರಣ್ಯದ ಮುಂದಿರುವ ಕಣಿವೆಯ ತುದಿಯಲ್ಲಿ ಅವರನ್ನು ಸಂಧಿಸುವಿರಿ. ಈ ಸಾರಿ ನೀವು ಯುದ್ಧಮಾಡುವದು ಅವಶ್ಯವಿಲ್ಲ. ಯೆಹೂದ್ಯರೇ, ಯೆರೂಸಲೇಮಿನವರೇ, ಸುಮ್ಮನೆ ನಿಂತುಕೊಂಡು ಯೆಹೋವನು ನಿಮಗೋಸ್ಕರ ನಡಿಸುವ ರಕ್ಷಣಾಕಾರ್ಯವನ್ನು ನೋಡಿರಿ; ಹೆದರಬೇಡಿರಿ, ಕಳವಳಗೊಳ್ಳಬೇಡಿರಿ. ನಾಳೆ ಅವರೆದುರಿಗೆ ಹೊರಡಿರಿ, ಯೆಹೋವನು ನಿಮ್ಮ ಸಂಗಡ ಇರುವನು ಎಂದು ಹೇಳಿದನು.

* *ದೇವರ ಮುಂದೆ ಅಡ್ಡಬಿದ್ದು ಆರಾಧಿಸಿದರು*

ವಚನ. **18,19** ಆಗ ಯೆಹೋಷಾಫಾಟನು ನೆಲದ ಮಟ್ಟಿಗೂ ತಲೆಬಾಗಿಸಿದನು. ಎಲ್ಲಾ ಯೆಹೂದ್ಯರೂ ಯೆರೂಸಲೇಮಿನವರೂ ಯೆಹೋವನ ಮುಂದೆ ಅಡ್ಡಬಿದ್ದು ನಮಸ್ಕರಿಸಿದರು. ಆ ಮೇಲೆ ಲೇವಿಯರಲ್ಲಿ ಕೆಹಾತ್ಯರೂ ಕೋರಹಿಯರೂ ಎದ್ದು ಇಸ್ರಾಯೇಲ್ ದೇವರಾದ ಯೆಹೋವನನ್ನು ಮಹಾಸ್ವರದಿಂದ ಕೀರ್ತಿಸಿದರು.

ನಾವು ಕರ್ತನನ್ನು ಮತ್ತು ಆತನ ಪ್ರವಾದಿಗಳನ್ನು ನಂಬಬೇಕು.

ವಚನ. **20** ಅವರು ಮರುದಿನ ಬೆಳಿಗ್ಗೆ ಎದ್ದು ತೆಕೋವ ಅರಣ್ಯಕ್ಕೆ ಹೊರಟರು. ಅವರಿಗೆ - ಯೆಹೂದ್ಯರೇ, ಯೆರೂಸಲೇಮಿನವರೇ, ನನ್ನ ಮಾತನ್ನು ಕೇಳಿರಿ, ಯೆಹೋವನಲ್ಲಿ ಭರವಸವಿಡಿರಿ, ಆಗ ಸುಕ್ಷಿತರಾಗಿರುವಿರಿ; ಆತನ ಪ್ರವಾದಿಗಳನ್ನು ನಂಬಿರಿ, ಆಗ ಸಾರ್ಥಕರಾಗುವಿರಿ ಎಂದು ಹೇಳಿದನು.

ಯೆಹೋಷಾಫಾಟನು ಜನರೊಂದಿಗೆ ಸೇರಿ ಆಲೋಚಿಸಬಹುದಾಗಿತ್ತು ಏಕೆಂದರೆ ಅವನು ಅವರಿಗೆ ಕರ್ತನ ವಾಕ್ಯವನ್ನು ಕಲಿಸಿದ್ದನು. ಅವನು ಹಾಡಬೇಕಾದವರನ್ನು ಮತ್ತು ಸ್ತುತಿಸಬೇಕಾದವರನ್ನು ಸೈನ್ಯದ ಮುಂದೆ ನಿಲ್ಲಿಸಿದನು.

**ವಚನ. 21 ಆ ಮೇಲೆ ಅವನು ಜನರ ಸಮ್ಮತಿಯಿಂದ ಯೆಹೋವನಿಗೋಸ್ಕರ ಗಾಯನಮಾಡುವದಕ್ಕಾಗಿ ಕೆಲವರನ್ನು ಆರಿಸಿಕೊಂಡು ಅವರಿಗೆ - ಪರಿಶುದ್ಧತ್ವವೆಂಬ ಭೂಷಣದೊಡನೆ ಭಟರ ಮುಂದೆ ಹೋಗುತ್ತಾ - ಯೆಹೋವನಿಗೆ ಕೃತಜ್ಞತಾಸ್ತುತಿಮಾಡಿರಿ, ಆತನ ಕೃಪೆಯು ಶಾಶ್ವತವಾಗಿದೆ ಎಂದು ಭಜಿಸಿರಿ ಎಂಬದಾಗಿ ಆಜ್ಞಾಪಿಸಿದನು.**

✱ *ಅವರ ಶತ್ರುಗಳು ಒಬ್ಬರನ್ನೊಬ್ಬರು ಸಂಹಾರಮಾಡಿಕೊಂಡರು*

ಅವರ ಎಲ್ಲಾ ಶತ್ರುಗಳಿಗೆ ದೇವದೂತ ದಂಡು ಹೊಂಚು ಹಾಕಿದ್ದರು.

**ವಚನ. 22,23 ಅವರು ಉತ್ಸಾಹಧ್ವನಿಂದ ಕೀರ್ತಿಸುವದಕ್ಕೆ ಪ್ರಾರಂಭಿಸಲು ಯೆಹೋವನು ಯೆಹೂದ್ಯರಿಗೆ ವಿರೋಧವಾಗಿ ಬಂದ ಅಮ್ಮೋನಿಯರನ್ನೂ ಮೋವಾಬ್ಯರನ್ನೂ ಸೇಯಿರ್ ಪರ್ವತದವರನ್ನೂ ನಶಿಸುವದಕ್ಕೋಸ್ಕರ ಅವರಲ್ಲಿ ಹೊಂಚುಹಾಕುವವರನ್ನು ಇರಿಸಿದ್ದರಿಂದ ಅಮ್ಮೋನಿಯರೂ ಮೋವಾಬ್ಯರೂ ಸೇಯಿರ್ ಪರ್ವತದವರ ಮೇಲೆ ಬಿದ್ದು ಅವರನ್ನು ಪೂರ್ಣವಾಗಿ ಸಂಹರಿಸಿಬಿಟ್ಟರು; ಅವರನ್ನು ಮುಗಿಸಿಬಿಟ್ಟ ಮೇಲೆ ತಾವೇ ಒಬ್ಬರನ್ನೊಬ್ಬರು ಕೊಲ್ಲುವದಕ್ಕೆ ಪ್ರಾರಂಭಿಸಿದರು ಯೆಹೂದ್ಯರು ಅರಣ್ಯದಲ್ಲಿನ ಬುರುಜಿಗೆ ಬಂದು ಆ ಸಮೂಹವಿದ್ದ ಕಡೆಗೆ ನೋಡಿದಾಗ ನೆಲದ ಮೇಲೆ ಬಿದ್ದಿರುವ ಹೆಣಗಳ ಹೊರತಾಗಿ, ಜೀವದಿಂದುಳಿದವರು ಯಾರು ಕಾಣಿಸಲಿಲ್ಲ.**

✱ *ನಮಗಾಗಿರುವ ಒಂದು ದೃಷ್ಟಾಂತ*

ಲೂಸಿಫರನನ್ನು "ಅಭಿಷೀಕ್ತ ಕೆರೂಬ್" ಎಂದು ವರ್ಣಿಸಲಾಗಿದೆ. ಸತ್ಯವೇದವು "ನಿನ್ನಲ್ಲಿದ್ದ ದಮ್ಮಡಿಗಳು ಮತ್ತು ಕೊಳಲುಗಳು... (ಯೆಹೆಜ್ಕೇಲ 28:13) ಇವು ತಾಳವಾದ್ಯ ಮತ್ತು ನಾದವಾದ್ಯ ಉಪಕರಣಗಳಾಗಿವೆ. ಇದು "ನಿನ್ನ ವೀಣಾನಾದ" (ಯೆಶಾಯ 14:11) ಎಂಬುದನ್ನು ಸಹ ಸೂಚಿಸುತ್ತದೆ. ಲೂಸಿಫರನನ್ನು ಸಂಗೀತಕ್ಕಾಗಿ ಸೃಷ್ಟಿಸಲಾಗಿತ್ತು.

ಅವನು ಮತ್ತು ಅವನೊಂದಿಗೆ ಪರಲೋಕದಿಂದ ದೊಬ್ಬಲ್ಪಟ್ಟ "ಅವನ ದೂತರು" ಪರಲೋಕದಲ್ಲಿ ಮಾಜಿ ಆರಾಧಕರಾಗಿದ್ದರು ಎಂದು ತೋರುತ್ತದೆ. ಅವರಿಗೆ ಎದುರಿಸಿ ನಿಲ್ಲಲು ಸಾಧ್ಯವಾಗದಂಥದ್ದು ಯಾವುದಾದರೂ ಇರುವುದಾದರೆ, ಅದು ಸ್ತುತಿ ಮತ್ತು ಆರಾಧನೆಯ ಶಬ್ದವಾಗಿದೆ. ಇದು ಅವರು ತಮ್ಮ ಕತ್ತಿಗಳನ್ನು ಮತ್ತು ಗುರಾಣಿಗಳನ್ನು ಬಿಸಾಡಿ, ಕೈಗಳಿಂದ ಕಿವಿಗಳನ್ನು ಮುಚ್ಚಿಕೊಂಡು ಭಯಭೀತರಾಗಿ ಕಿರುಚುತ್ತಿರುವರೋ ಎಂಬಂತಿರುತ್ತದೆ. ಅದು ಅವರನ್ನು ಭಾರಿ ಗೊಂದಲಕ್ಕೆ ದೂಡುತ್ತದೆ. ಈ ಗೊಂದಲದಲ್ಲಿ, ಅವರು ಪರಸ್ಪರ ಒಬ್ಬರಿಗೆ ವಿರುದ್ಧವಾಗಿ ಇನ್ನೊಬ್ಬರು ತಿರುಗಿ ಬೀಳುತ್ತಾರೆ. ದೇವರನ್ನು ಮತ್ತು ದೇವರ ಮಕ್ಕಳಾಗಿರುವ ನಮ್ಮ ಪ್ರತಿಯೊಬ್ಬರನ್ನು ದ್ವೇಷಿಸುವುದರಲ್ಲಿ ಒಂದಾಗಿರುವ ವೈರಿಯು, ಪ್ರಾದೇಶಿಕವಾದ ಸೈನ್ಯವು ಸಹ ಆಗಿದಾರೆ. ಅವರು ತಮ್ಮ ಗೊಂದಲದಿಂದ ಪರಸ್ಪರ ಒಬ್ಬರನ್ನೊಬ್ಬರು ನಾಶ ಮಾಡಿಕೊಂಡಿದ್ದಾರೆ.

(ಟಿಪ್ಪಣಿ: *ಸ್ತುತಿ ಮತ್ತು ಆರಾಧನೆ ದೇವರ ಆರಾಧಕರಾಗುವುದು* ಎಂಬ ಗಿಲ್ ರವರ ಕೈಪಿಡಿಯಲ್ಲಿ ಈ ವಿಷಯದ ಕುರಿತಾದ ಪೂರ್ಣವಾದ ಅಧ್ಯಯನವಿದೆ.)

## ಆರಾಧನೆಯು ಪರಲೋಕವನ್ನು ತೆರೆಯುತ್ತದೆ

### ಬೇತೇಲಿನಲ್ಲಿ

ದೇವರ ಸ್ನೇಹಿತನಾಗಿರುವ ಅಬ್ರಹಾಮನು ಹೋದಲ್ಲೆಲ್ಲಾ ಯಜ್ಞವೇದಿಯನ್ನು ಕಟ್ಟಿ ದೇವರನ್ನು ಆರಾಧಿಸುತ್ತಿದ್ದನು. ಅವನು ಯಜ್ಞವೇದಿಯನ್ನು ಕಟ್ಟಿ ದೇವರನ್ನು ಆರಾಧಿಸಿದ ನಂತರ, ದೇವದೂತರು ಅಥವಾ ಸ್ವತಃ ದೇವರೇ ಅಬ್ರಹಾಮನಿಗೆ ಕಾಣಿಸಿಕೊಂಡು ಮಾತನಾಡಿದನು ಎಂಬುದನ್ನು ನಾವು ಓದುತ್ತೇವೆ. ಆ ಸ್ಥಳಗಳ ಪೈಕಿ ಬೇತೇಲ್ ಎಂಬುದು ಒಂದು ಸ್ಥಳವಾಗಿತ್ತು. ಅನೇಕ ವರ್ಷಗಳ ನಂತರ ಅಬ್ರಹಾಮನ ಮೊಮ್ಮಗನಾದ ಯಾಕೋಬನು ಬೇತೇಲಿಗೆ ಹೋದನು.

**ಆದಿಕಾಂಡ 28: 10,11 ಯಾಕೋಬನು ಖಾರಾನಿಗೆ ಹೋಗಬೇಕೆಂದು ಬೇರ್ಷೆಬದಿಂದ ಹೊರಟನು. ಅವನು ಹೋಗುತ್ತಿರಲು ಒಂದು ಸ್ಥಳಕ್ಕೆ ಸೇರಿದಾಗ ಹೊತ್ತು ಮುಣುಗಿದ್ದರಿಂದ ಆ ರಾತ್ರಿ ಅಲ್ಲಿಯೇ**

**ಇಳಿದುಕೊಂಡನು. ಅವನು ಅಲ್ಲಿದ್ದ ಕಲ್ಲುಗಳಲ್ಲಿ ಒಂದು ಕಲ್ಲನ್ನು ತಲೆದಿಂಬಾಗಿ ಇಟ್ಟುಕೊಂಡು ಆ ಸ್ಥಳದಲ್ಲಿ ಮಲಗಿಕೊಂಡನು.**

✱ *ಆ ಸ್ಥಳ*

ಆ ಸ್ಥಳ ಎಂಬ ಪದಗಳನ್ನು ಗಮನಿಸಿರಿ. ಯಾಕೋಬನು ಅಲ್ಲಿ ಇಳಿದುಕೊಳ್ಳಲು ತಾನಾಗಿಯೇ ಬಯಸಿದ್ದಲ್ಲ. ಅವನಿಗೆ ಗೊತ್ತಿಲ್ಲದಿದ್ದರೂ ಅದು ಆ ಸ್ಥಳವಾಗಿತ್ತು. ಅಬ್ರಹಾಮನು ಯಜ್ಞವೇದಿಯನ್ನು ಕಟ್ಟಿ ದೇವರನ್ನು ಆರಾಧಿಸಿದ ನಿಖರವಾದ ಸ್ಥಳದಲ್ಲಿ ಯಾಕೋಬನು ಇದ್ದನು ಎಂದು ತೋರುತ್ತದೆ. ಬಹುಶಃ ಆ "ಕಲ್ಲುಗಳು" ಅವನ ಅಜ್ಜನು ಕಟ್ಟಿದ್ದ ಯಜ್ಞವೇದಿಯ ಭಾಗವಾಗಿದ್ದವುಗಳು ಆಗಿರಬಹುದು.

✱ ದೇವದೂತರ ಕಾರ್ಯಕಲಾಪದ ಕನಸು

**ವಚನ. 12 ಆ ರಾತ್ರಿ ಅವನು ಕನಸುಕಂಡನು ಆ ಕನಸಿನಲ್ಲಿ ಒಂದು ನಿಚ್ಚಣಿಗೆ ನೆಲದ ಮೇಲೆನಿಂತಿತ್ತು; ಅದರ ತುದಿ ಆಕಾಶವನ್ನು ಮುಟ್ಟಿತ್ತು; ಅದರ ಮೇಲೆ ದೇವದೂತರು ಹತ್ತುತ್ತಾ ಇಳಿಯುತ್ತಾ ಇದ್ದರು.**

ಯಾಕೋಬನಿಗೆ ಆತ್ಮಿಕ ಕನಸು ಬಿತ್ತು, ಆ ಸಮಯದಲ್ಲಿ ಆ ಸ್ಥಳದಲ್ಲಿ ಬಹಳಷ್ಟು ದೇವದೂತರು ಮಾಡುತ್ತಿರುವ ಕಾರ್ಯಕಲಾಪಗಳನ್ನು ಕಂಡನು. ಆ ಸ್ಥಳದಲ್ಲಿ ಪರಲೋಕವು ತೆರೆದಿತ್ತು. ನಮಗಾಗಿ ಆಶೀರ್ವಾದವನ್ನು ತರಲು ದೇವದೂತರು ಮೇಲಕ್ಕೆ ಏರಿಹೋಗುತ್ತಿದ್ದರು ಮತ್ತು ಕೆಳಕ್ಕೆ ಇಳಿದು ಬರುತ್ತಿದ್ದರು. "ತೆರೆಯಲ್ಪಟ್ಟ ಪರಲೋಕದ" ಈ ಸ್ಥಳವು ದೇವರು ಮಾತನಾಡುವ ಸ್ಥಳವಾಗಿತ್ತು:

**13-15 ಇದಲ್ಲದೆ ಯೆಹೋವನು ಅವನ ಬಳಿಯಲ್ಲಿ ನಿಂತು - ನಾನು ನಿನ್ನ ತಂದೆಯಾದ ಅಬ್ರಹಾಮನ ದೇಶವನ್ನು ನಿನಗೂ ನಿನ್ನ ಸಂತತಿಗೂ ಕೊಡುತ್ತೇನೆ. ನಿನ್ನ ಸಂತತಿಯು ಭೂಮಿಯ ಧೂಳಿನಂತೆ ಅಸಂಖ್ಯವಾಗುವದು; ನೀನು ಪೂರ್ವಪಶ್ಚಿಮದಕ್ಷಿಣೋತ್ತರ ದಿಕ್ಕುಗಳಿಗೆ ಹರುಡಿಕೊಳ್ಳುವಿ ನಿನ್ನ ಮೂಲಕವೂ ನಿನ್ನ ಸಂತತಿಯ ಮೂಲಕವೂ ಭೂಮಿಯ ಎಲ್ಲಾ ಕುಲದವರಿಗು ಆಶೀರ್ವಾದವುಂಟಾಗುವದು. ಇದಲ್ಲದೆ ನಾನು ನಿನ್ನ ಸಂಗಡ ಇದ್ದು ನೀನು ಹೋಗುವ ಎಲ್ಲಾ ಸ್ಥಳಗಳಲ್ಲಿ ನಿನ್ನನ್ನು ಕಾಪಾಡಿ ತಿರಿಗಿ ಈ ದೇಶಕ್ಕೆ ಬರಮಾಡುತ್ತೇನೆ.**

**ಏಕೆಂದರೆ ನಾನು ನಿನಗೆ ಹೇಳಿದ್ದನ್ನೆಲ್ಲಾ ನೆರವೇರಿಸದ ಹೊರತು ಬಿಡುವುದಿಲ್ಲ ಎಂದನು**

ನಿಜವಾದ ಆರಾಧನೆ ನಡೆದ ಈ ಸ್ಥಳದ ಕುರಿತು ವಿಭಿನ್ನವಾದ ಸಂಗತಿ ಇತ್ತು. "ಈ ಸ್ಥಳ ಎಷ್ಟು ಅತಿಶಯವಾಗಿದೆ!"

* *ಪರಲೋಕದ ಬಾಗಿಲು*

**ವಚನ 16,17 ಯಾಕೋಬನು ನಿದ್ದೆಯಿಂದ ಎಚ್ಚೆತ್ತು - ನಿಜವಾಗಿ ಯೆಹೋವನು ಈ ಸ್ಥಳದಲ್ಲಿ ಇದ್ದಾನೆ; ಅದು ನನಗೆ ತಿಳಿಯದೆ ಹೋಯಿತು ಅಂದುಕೊಂಡು ಭಯಪಟ್ಟವನಾಗಿ - ಈ ಸ್ಥಳವು ಎಷ್ಟೋ ಭಯಂಕರವಾದದ್ದು; ಇದು ದೇವರ ಮನೆಯೇ ಹೊರತು ಬೇರೆಯಲ್ಲ ಇದು ಪರಲೋಕದ ಬಾಗಿಲು ಎಂದು ಹೇಳಿದನು.**

ಅನೇಕ ವರ್ಷಗಳ ಹಿಂದೆ ಈ ಸ್ಥಳದಲ್ಲಿ ಅಬ್ರಹಾಮನು ಮಾಡಿದ ಆರಾಧನೆಯ ಮೂಲಕ, ಪರಲೋಕದ ಬಾಗಿಲುಗಳು ತೆರೆಯಲ್ಪಟ್ಟಿದ್ದವು. ಇದು "ತೆರೆಯಲ್ಪಟ್ಟ ಪರಲೋಕದ" ಸ್ಥಳವಾಗಿತ್ತು, ಇದು ಮಹಿಮೆಯ ಅರಸನು ಮಾತನಾಡುತ್ತಿದ್ದ ಅತಿಶಯವಾದ ಸ್ಥಳವಾಗಿದೆ. ಅಬ್ರಹಾಮನು ಯಜ್ಞವೇದಿಯನ್ನು ಕಟ್ಟಿ ದೇವರನ್ನು ಆರಾಧಿಸುತ್ತಿದ್ದ ಆ ಸ್ಥಳದಲ್ಲಿ ಮಹಿಮೆಯು ಪ್ರಕಟವಾಗಿತ್ತು.

ಬಾಗಿಲುಗಳನ್ನು ತೆರೆಯಿರಿ

ದಾವೀದನ ಮೂಲಕ ದೇವರಿಂದ ನಮಗೆ ಕೊಡಲ್ಪಟ್ಟಿರುವ ಅತಿಶಯವಾದ ವಾಗ್ದಾನವು ನಮಗುಂಟು. ನಾವು ದೇವರನ್ನು ಆರಾಧಿಸಲು ಸಮಯ ಕಳೆದರೆ, ಮಹಿಮೆಯ ಅರಸನು ಇಳಿದು ಬರುತ್ತಾನೆ.

**ಕೀರ್ತನೆ 24:7-10 ದ್ವಾರಗಳೇ, ಉನ್ನತವಾಗಿರ್ರಿ; ಪುರಾತನವಾದ ಕದಗಳೇ, ತೆರೆದುಕೊಂಡಿರ್ರಿ; ಮಹಾಪ್ರಭಾವವುಳ್ಳ ಅರಸನು ಆಗಮಿಸುತ್ತಾನೆ. ಮಹಾಪ್ರಭಾವವುಳ್ಳ ಈ ಅರಸನು ಯಾರು? ಮಹಾ ಬಲಿಷ್ಠನೂ ವಿಶೇಷ ಪರಾಕ್ರಮಿಯೂ ಆಗಿರುವ ಯೆಹೋವ, ಯುದ್ಧವೀರನಾಗಿರುವ ಯೆಹೋವ. ದ್ವಾರಗಳೇ, ಉನ್ನತವಾಗಿರ್ರಿ; ಪುರಾತನವಾದ ಕದಗಳೇ, ತೆರೆದುಕೊಂಡಿರ್ರಿ; ಮಹಾಪ್ರಭಾವವುಳ್ಳ ಅರಸನು ಆಗಮಿಸುತ್ತಾನೆ. ಮಹಾಪ್ರಭಾವವುಳ್ಳ ಈ ಅರಸನು**

**ಯಾರು? ಸೇನಾಧೀಶ್ವರನಾದ ಯೆಹೋವನೇ; ಮಹಾಪ್ರಭಾವವುಳ್ಳ ಅರಸನು ಈತನೇ.**

ದೇವರ ಅತಿಶಯವಾದ ಮಹಿಮೆಯು ಬಿಡುಗಡೆಯಾಗುವುದನ್ನು ಅನುಭವಿಸಲು ಆತ್ಮದಲ್ಲಿ ಅತ್ಯಾಸಕ್ತಿಯಿಂದ ಮತ್ತು ದೀರ್ಘಕಾಲ ಮಾಡುವ ಆರಾಧನೆಯು ಒಂದು ಪ್ರಮುಖ ಬೀಗಕೈಯಾಗಿದೆ.

* *ಕನಸುಗಳು ಮತ್ತು ದರ್ಶನಗಳು,*

ಜನರು ದೇವರನ್ನು ಆರಾಧಿಸುತ್ತಿರುವ ತೆರೆಯಲ್ಪಟ್ಟಿರುವ ಪರಲೋಕದ ಈ ಸ್ಥಳಗಳಿಗೆ ನಾವು ಅನೇಕ ಸಾರಿ ಹೋಗುತ್ತೇವೆ, ಮತ್ತು ದೇವರ ಪ್ರಸನ್ನತೆಯ ಅತಿಶಯವಾದ ಮಹಿಮೆಯನ್ನು ಹರತ್ತಾಗಿ ಅನುಭವಿಸುತ್ತವೆ. ಈ ಸ್ಥಳಗಳಲ್ಲಿ ಯಾಕೋಬನಂತೆ ಆತ್ಮಿಕ ಕನಸುಗಳನ್ನು ಅಥವಾ ಯೆಹೆಜ್ಕೇಲನಂತೆ ಆತ್ಮಿಕ ದರ್ಶನಗಳನ್ನು ಕಾಣುವ ಅನುಭವ ನಮಗೆ ಉಂಟಾಗುತ್ತದೆ.

**ಯೆಹೆಜ್ಕೇಲ 1:1 ಕೆಬಾರ್ ನದಿಯ ಹತ್ತಿರ ಸೆರೆಯಾಗಿ ವಾಸಿಸುತ್ತಿದ್ದ ಯೆಹೂದ್ಯರ ಮಧ್ಯದಲ್ಲಿ ನಾನು ಸೇರಿಕೊಂಡುರುವಾಗ ಮೂವತ್ತನೆಯ ವರುಷದ ನಾಲ್ಕನೆಯ ತಿಂಗಳಿನ ಐದನೆಯ ದಿನದಲ್ಲಿ ಆಕಾಶವು ಒಡೆದು ನನಗೆ ದೇವದರ್ಶನಗಳು ಉಂಟಾದವು.**

* *ದೇವರ ಸ್ವರವನ್ನು ಕೇಳಿಸಿಕೊಳ್ಳುವುದು*

ಈ ಸಮಯಗಳಲ್ಲಿ ಮತ್ತು "ತೆರೆಯಲ್ಪಟ್ಟಿರುವ ಪರಲೋಕದ" ಈ ಸ್ಥಳಗಳಲ್ಲಿ, ನಮ್ಮ ಆತ್ಮಿಕ ಕಿವಿಗಳು ತೆರೆಯಲ್ಪಡುತ್ತವೆ ಮತ್ತು "ಇಲ್ಲಿಗೆ ಏರಿ ಬಾ…" ಎಂಬ ದೇವರ ಸ್ವರವನ್ನು ನಾವು ಅನೇಕಸಾರಿ ಕೇಳಿಸಿಕೊಳ್ಳುತ್ತೇವೆ

**ಪ್ರಕಟನೆ 4:1,2 ಇವುಗಳಾದ ಮೇಲೆ ನಾನು ನೋಡಿದಾಗ ಪರಲೋಕದಲ್ಲಿ ತೆರೆದಿದ್ದ ಬಾಗಿಲು ಕಾಣಿಸಿತು. ಮತ್ತು ನನ್ನ ಸಂಗಡ ತುತೂರಿಯು ಮಾತಾಡುತ್ತದೋ ಎಂಬಂತೆ ನಾನು ಮೊದಲು ಕೇಳಿದ್ದ ವಾಣಿಯು ಕೇಳಿಸಿತು. ಇಲ್ಲಿಗೆ ಏರಿ ಬಾ ಮುಂದೆ ಆಗಬೇಕಾದವುಗಳನ್ನು ನಿನಗೆ ತೋರಿಸುವೆನು. ಎಂದು ಹೇಳಿತು. ಕೂಡಲೆ ದೇವರಾತ್ಮವಶನಾದೆನು. ಆಗ ಇಗೋ ಪರಲೋಕದಲ್ಲಿ ಒಂದು ಸಿಂಹಾಸನವಿತ್ತು. ಸಿಂಹಾಸನದ ಮೇಲೆ ಒಬ್ಬನು ಕೂತಿದ್ದನು.**

* *ಆತ್ಮಿಕ ಕಣ್ಣುಗಳು ಮತ್ತು ಕಿವಿಗಳು ತೆರೆಯಲ್ಪಡುತ್ತವೆ*

ನಾವು ಆತ್ಮನ ಮಹಿಮೆಯ ಮಂಡಲಕ್ಕೆ ಏರಿ ಹೋದಾಗ, ನಮ್ಮ ಆತ್ಮಿಕ ಕಣ್ಣುಗಳು ಸಹ ತೆರೆಯಲ್ಪಡುತ್ತವೆ ಮತ್ತು ನಾವು ಅಲ್ಲಿ ದೇವರ ಸ್ವರವನ್ನು ಕೇಳಿಸಿಕೊಳ್ಳುವುದು ಮಾತ್ರವಲ್ಲ, ಆದರೆ ಆ ಸಮಯದಲ್ಲಿ ದೇವರು ನಮಗಾಗಿ ಸಿದ್ಧಪಡಿಸಿದ್ದನ್ನು ನಮ್ಮ ಆತ್ಮಿಕ ಕಣ್ಣುಗಳಿಂದ ನಾವು "ಕಾಣುತ್ತೇವೆ". ಮತ್ತು ಆತ್ಮ ಮಂಡಲದಲ್ಲಿ ದೇವರು ತನ್ನ ಸಿಂಹಾಸನದ ಮೇಲೆ ಕುಳಿತಿರುವುದನ್ನು ನಾವು ನೋಡುತ್ತೇವೆ. ಇಲ್ಲಿ, ನಾವು ದೇವರ ಸಿಂಹಾಸನದ ಮುಂದೆ ಮಹಿಮೆಯ ಮಂಡಲದೊಳಕ್ಕೆ, ಅನ್ಯೋನ್ಯತೆಯ ಮಂಡಲದೊಳಕ್ಕೆ ಪ್ರವೇಶಿಸಿದ್ದೇವೆ.

ಮಹಿಮೆಯ ಈ ಮಂಡಲವು ದೇವದೂತರ ಸಾನಿಧ್ಯವನ್ನು ನೋಡುವ, ಸ್ಪರ್ಶಿಸುವ ಅಥವಾ ಅನುಭವಿಸುವ ಸ್ಥಳವಾಗಿರುತ್ತದೆ.

**ಪ್ರಕಟನೆ 19:10 ಆಗ ನಾನು ಅವನಿಗೆ ನಮಸ್ಕಾರ ಮಾಡಬೇಕೆಂದು ಅವನ ಪಾದಗಳ ಮುಂದೆ ಬೀಳಲು ಅವನು – ಮಾಡಬೇಡ ನೋಡು ನಾನು ನಿನಗೂ ಯೇಸುವಿನ ಸಾಕ್ಷಿಯನ್ನು ಹೇಳಿರುವ ನಿನ್ನ ಸಹೋದರರಿಗೂ ಜೊತೆಯ ದಾಸನಾಗಿದ್ದೇನೆ. ದೇವರಿಗೇ ನಮಸ್ಕಾರ ಮಾಡು ಅಂದನು. ಯೇಸುವಿನ ವಿಷಯವಾದ ಸಾಕ್ಷಿಯು ಪ್ರವಾದನೆಯ ವಾಕ್ಯವೇ.**

ದೇವರು ಏಳಲಿ - ಶತ್ರುಗಳು ಚದುರಿಹೋಗಲಿ

**ಕೀರ್ತನೆ 68:1 ದೇವರು ಎದ್ದು ಹೊರಡುವಾಗ ಆತನ ವೈರಿಗಳು ಚದರಿಹೋಗುವರು; ಆತನ ಹಗೆಗಾರರು ಬೆಂಗೊಟ್ಟು ಓಡಿಹೋಗುವರು.**

**ಕೀರ್ತನೆ 149:6 ಅವರ ಬಾಯಲ್ಲಿ ಯೆಹೋವನ ಸ್ತೋತ್ರವೂ ಕೈಯಲ್ಲಿ ಇಬ್ಬಾಯಿಕತ್ತಿಯೂ ಇರಲಿ.**

**ಯೆಶಾಯ 30:31,32 ಹೀಗೆ ಯೆಹೋವನು ದಂಡದಿಂದ ದಂಡಿಸುವಾಗ ಅಶ್ಶೂರ್ಯರು ಆತನ ಧ್ವನಿಯಿಂದಲೇ ಭಂಗಪಡುವರು. ಮತ್ತು ಯೆಹೋವನು ಸಂಕಲ್ಪಿಸಿದ ದಂಡದ ಪ್ರತಿಯೊಂದು ಪೆಟ್ಟೂ ದಮ್ಮಡಿ ಕಿನ್ನರಿಗಳ ನಾದದೊಡನೆ ಅವರ ಮೇಲೆ ಬೀಳುವದು. ಆತನು ಅವರೊಂದಿಗೆ ಹೋರಾಡುತ್ತಾ ಕೈಬೀಸಿ ಯುದ್ಧಮಾಡುವನು.**

## ಪೌಲ ಮತ್ತು ಸೀಲರು

* *ಹೊಡಿಸಿ ಕೋಳಗಳನ್ನು ಹಾಕಿದರು*

**ಅಪೊಸ್ತಲರ ಕಾರ್ಯಗಳು 16: 19-24 ಅವಳ ಯಜಮಾನರು ತಮ್ಮ ಆದಾಯದ ನಿರೀಕ್ಷೆ ತಪ್ಪಿತಲ್ಲಾ ಎಂದು ತಿಳಿದು ಪೌಲನನ್ನೂ ಸೀಲನನ್ನೂ ಹಿಡಿದು ಚಾವಡಿಗೆ ಅಧಿಕಾರಿಗಳ ಬಳಿಗೆ ಎಳಕೊಂಡು ಹೋದರು. ಅವರನ್ನು ಅಧಿಪತಿಗಳ ಮುಂದೆ ತಂದು – ಈ ಮನುಷ್ಯರು ನಮ್ಮ ಪಟ್ಟಣವನ್ನು ಬಹಳವಾಗಿ ಗಲಿಬಿಲಿ ಮಾಡುತ್ತಾರೆ; ಇವರು ಯೆಹೂದ್ಯರಾಗಿದ್ದು ರೋಮಾಯರಾದ ನಾವು ಅವಲಂಬಿಸಿ ನಡಿಸಕೂಡದಂಥ ಆಚಾರಗಳನ್ನು ಪ್ರಕಟಿಸುತ್ತಾರೆ ಅಂದರು.**

**ಆಗ ದೊಂಬೀ ಜನರು ಕೂಡಿ ಅವರಿಗೆ ವಿರೋಧವಾಗಿ ಒಟ್ಟಾಗಿ ಎದ್ದರು; ಮತ್ತು ಅಧಿಪತಿಗಳು – ಇವರ ವಸ್ತ್ರಗಳನ್ನು ಹರಿದು ತೆಗೆದು ಚಡಿಗಳಿಂದ ಹೊಡೆಯಬೇಕೆಂದು ಅಪ್ಪಣೆಕೊಟ್ಟರು. ಅವರಿಗೆ ಬಹಳ ಪೆಟ್ಟುಗಳನ್ನು ಹೊಡಿಸಿದ ಮೇಲೆ ಸೆರೆಮನೆಯೊಳಗೆ ಹಾಕಿಸಿ – ಇವರನ್ನು ಭದ್ರವಾಗಿ ಕಾಯಬೇಕೆಂದು ಸೆರೆಯ ಯಜಮಾನನಿಗೆ ಖಂಡಿತವಾಗಿ ಹೇಳಿದರು. ಅವನು ಇಂಥಾ ಅಪ್ಪಣೆಯನ್ನು ಹೊಂದಿ ಅವರನ್ನು ಸೆರೆಮನೆಯ ಒಳಕೋಣೆಯಲ್ಲಿ ಹಾಕಿ ಅವರ ಕಾಲುಗಳಿಗೆ ಕೋಳವನ್ನು ಹಾಕಿ ಬಿಗಿಸಿದನು.**

* *ಪ್ರಾರ್ಥಿಸಲು ಮತ್ತು ಹಾಡಲು ಪ್ರಾರಂಭಿಸಿದರು*

ಬಿಡುಗಡೆಯು ರಾತ್ರಿಯ ಕರಾಳವಾದ ಸಮಯದಲ್ಲಿ ಅಂದರೆ ಮಧ್ಯರಾತ್ರಿಯಲ್ಲಿ ಬಂದಿತು.

**ಅಪೊಸ್ತಲರ ಕೃತ್ಯಗಳು 16:25,26 ಮಧ್ಯರಾತ್ರಿಯಲ್ಲಿ ಪೌಲನೂ ಸೀಲನೂ ಪ್ರಾರ್ಥನೆಮಾಡುವವರಾಗಿ ದೇವರಿಗೆ ಸ್ತುತಿಪದಗಳನ್ನು ಹಾಡುತ್ತಿದ್ದರು; ಸೆರೆಯಲ್ಲಿದ್ದವರು ಲಕ್ಷ್ಯವಿಟ್ಟು ಕೇಳುತ್ತಿದ್ದರು. ಅಕಸ್ಮಾತ್ತಾಗಿ ಮಹಾಭೂಕಂಪ ವುಂಟಾಯಿತು; ಸೆರೆಮನೆಯ ಅಸ್ತಿವಾರಗಳು ಕದಲಿದವು. ಅದೇ ಕ್ಷಣದಲ್ಲಿ ಕದಗಳೆಲ್ಲಾ ತೆರೆದವು, ಎಲ್ಲರ ಬೇಡಿಗಳು ಕಳಚಿಬಿದ್ದವು.**

ವೃದ್ಧಿಯಾಗುವಿಕೆಯನ್ನು - ಎಲ್ಲಾ ಬಾಗಿಲುಗಳನ್ನು ತೆರೆಯಲ್ಪಟ್ಟಿದ್ದನ್ನು - ಎಲ್ಲರ ಸರಪಳಿಗಳು ಕಳಚಿಬಿದ್ದದ್ದನ್ನು ಗಮನಿಸಿರಿ. ನಾವು

ದೇವರನ್ನು ಸ್ತುತಿಸಲು ಪ್ರಾರಂಭಿಸಿದಾಗ ಇತರರು ಪ್ರಯೋಜನವನ್ನು ಅನುಭವಿಸುತ್ತಾರೆ.

* *ಅನೇಕರು ನಂಬಿದರು*

**ಅಪೊಸ್ತಲರ ಕೃತ್ಯಗಳು 16:27-34 ಸೆರೆಯ ಯಜಮಾನನು ನಿದ್ದೆಯಿಂದ ಎಚ್ಚತ್ತು ಸೆರೆಮನೆಯ ಕದಗಳು ತೆರೆದಿರುವದನ್ನು ಕಂಡು ಸೆರೆಯಲ್ಲಿದ್ದವರು ಓಡಿಹೋದರೆಂದು ಭಾವಿಸಿ ಕತ್ತಿಯನ್ನು ಹಿರಿದು ಆತ್ಮಹತ್ಯ ಮಾಡಿಕೊಳ್ಳಬೇಕೆಂದಿದ್ದನು. ಆದರೆ ಪೌಲನು ಮಹಾ ಶಬ್ದದಿಂದ ಕೂಗಿ ಅವನಿಗೆ – ನೀನೇನೂ ಕೇಡುಮಾಡಿಕೊಳ್ಳಬೇಡ, ನಾವೆಲ್ಲರೂ ಇಲ್ಲೇ ಇದ್ದೇವೆ ಎಂದು ಹೇಳಲು ಅವನು – ದೀಪ ತರಬೇಕೆಂದು ಕೂಗಿ ಒಳಕ್ಕೆ ಹಾರಿ ನಡುಗುತ್ತಾ ಪೌಲ ಸೀಲರ ಮುಂದೆ ಬಿದ್ದನು. ಮತ್ತು ಅವರನ್ನು ಹೊರಗೆ ಕರಕೊಂಡು ಬಂದು – ಸ್ವಾಮಿಗಳೇ, ನಾನು ರಕ್ಷಣೆಹೊಂದುವದಕ್ಕೆ ಏನು ಮಾಡಬೇಕೆಂದು ಕೇಳಲು ಅವರು – ಕರ್ತನಾದ ಯೇಸುವಿನ ಮೇಲೆ ನಂಬಿಕೆಯಿಡು, ಆಗ ನೀನು ರಕ್ಷಣೆ ಹೊಂದುವಿ, ನಿನ್ನ ಮನೆಯವರೂ ರಕ್ಷಣೆಹೊಂದುವರು ಎಂದು ಹೇಳಿ ಅವನಿಗೂ ಅವನ ಮನೆಯಲ್ಲಿದ್ದವರೆಲ್ಲರಿಗೂ ದೇವರ ವಾಕ್ಯವನ್ನು ತಿಳಿಸಿದರು. ಆ ಮೇಲೆ ಅವನು ರಾತ್ರಿಯ ಅದೇ ಗಳಿಗೆಯಲ್ಲಿ ಅವರನ್ನು ಕರಕೊಂಡು ಹೋಗಿ ಅವರ ಗಾಯಗಳನ್ನು ತೊಳೆದು ಕೂಡಲೆ ತಾನೂ ತನ್ನವರೆಲ್ಲರ ಸಹಿತವಾಗಿ ದೀಕ್ಷಾಸ್ನಾನಮಾಡಿಸಿ ಕೊಂಡನು. ತರುವಾಯ ಅವರನ್ನು ತನ್ನ ಮನೆಗೆ ಕರಕೊಂಡುಹೋಗಿ ಊಟಮಾಡಿಸಿದನು. ಅವನು ತನ್ನ ಮನೆಯವರೆಲ್ಲರ ಸಂಗಡ ನಂಬಿ ಉಲ್ಲಾಸ ಗೊಂಡನು.**

* *ಸ್ತೋತ್ರ ಯಜ್ಞ*

ಇಬ್ರಿಯ ಪುಸ್ತಕದ ಬರಹಗಾರನು ಇದನ್ನು ಸ್ತೋತ್ರ ಯಜ್ಞ ಎಂದು ಸೂಚಿಸಿದ್ದಾನೆ. ಅವರ ಹತಾಶ ಪರಿಸ್ಥಿತಿಯ ನಡುವೆ ಸ್ತುತಿ ಸ್ತೋತ್ರವನ್ನು ಅರ್ಪಿಸಿದ್ದರ ಪರಿಣಾಮವಾಗಿ ಅವರ ಬಿಡುಗಡೆಯು ಉಂಟಾಯಿತು.

**ಇಬ್ರಿಯ 13:15 ಆದುದರಿಂದ ಆತನ ಮೂಲಕವಾಗಿಯೇ ದೇವರಿಗೆ ಸ್ತೋತ್ರ ಯಜ್ಞವನ್ನು ಎಡಬಿಡದೆ ಸಮರ್ಪಿಸೋಣ ಆತನು ಕರ್ತನೆಂದು ಬಾಯಿಂದ ಪ್ರತಿಜ್ಞೆ ಮಾಡುವದೇ ನಾವು ಅರ್ಪಿಸುವ ಯಜ್ಞವಾಗಿದೆ.**

## ತೆರೆಯಲ್ಪಟ್ಟ ಪರಲೋಕ

ದೇವರನ್ನು ಆರಾಧಿಸುವ ಮೂಲಕ ನಾವು ಪರಲೋಕವನ್ನು ತೆರೆಯಬಹುದು.

* *ಅಪೊಸ್ತಲನಾದ ಯೋಹಾನನು*

ಪರಲೋಕದಲ್ಲಿ ತೆರೆಯಲ್ಪಟ್ಟಿರುವ ಬಾಗಿಲನ್ನು ನೋಡಿದ್ದಾಗಿ ಯೋಹಾನನು ತಿಳಿಸಿದ್ದಾನೆ.

**ಪ್ರಕಟನೆ 4:1,2 ಇವುಗಳಾದ ಮೇಲೆ ನಾನು ನೋಡಿದಾಗ ಪರಲೋಕದಲ್ಲಿ ತೆರೆದಿದ್ದ ಬಾಗಿಲು ಕಾಣಿಸಿತು. ಮತ್ತು ನನ್ನ ಸಂಗಡ ತುತೂರಿಯು ಮಾತಾಡುತ್ತದೋ ಎಂಬಂತೆ ನಾನು ಮೊದಲು ಕೇಳಿದ್ದ ವಾಣಿಯು ಕೇಳಿಸಿತು. ಇಲ್ಲಿಗೆ ಏರಿ ಬಾ ಮುಂದೆ ಆಗಬೇಕಾದವುಗಳನ್ನು ನಿನಗೆ ತೋರಿಸುವೆನು. ಎಂದು ಹೇಳಿತು. ಕೂಡಲೆ ದೇವರಾತ್ಮವಶನಾದೆನು. ಆಗ ಇಗೋ ಪರಲೋಕದಲ್ಲಿ ಒಂದು ಸಿಂಹಾಸನವಿತ್ತು. ಸಿಂಹಾಸನದ ಮೇಲೆ ಒಬ್ಬನು ಕೂತಿದ್ದನು.**

"ದೇವರನ್ನು ಆರಾಧಿಸು" ಎಂದು ದೇವದೂತನು ಆಜ್ಞಾಸಿದ ಕೂಡಲೇ ಪರಲೋಕವು ತೆರೆದಿರುವುದನ್ನು ಮತ್ತು ಯೇಸು ಸಿಂಹಾಸನದ ಮೇಲೆ ಕುಳಿತಿರುವುದನ್ನು ನೋಡಿದ್ದಾಗಿ ಯೋಹಾನನು ತಿಳಿಸಿದನು.

**ಪ್ರಕಟನೆ 19:10,11 ಆಗ ನಾನು ಅವನಿಗೆ ನಮಸ್ಕಾರ ಮಾಡಬೇಕೆಂದು ಅವನ ಪಾದಗಳ ಮುಂದೆ ಬೀಳಲು ಅವನು – ಮಾಡಬೇಡ ನೋಡು ನಾನು ನಿನಗೂ ಯೇಸುವಿನ ಸಾಕ್ಷಿಯನ್ನು ಹೇಳಿರುವ ನಿನ್ನ ಸಹೋದರರಿಗೂ ಜೊತೆಯ ದಾಸನಾಗಿದ್ದೇನೆ. ದೇವರಿಗೇ ನಮಸ್ಕಾರ ಮಾಡು ಅಂದನು. ಯೇಸುವಿನ ವಿಷಯವಾದ ಸಾಕ್ಷಿಯು ಪ್ರವಾದನೆಯ ವಾಕ್ಯವೇ. ಪರಲೋಕವು ತೆರೆದಿರುವದನ್ನು ನಾನು ಕಂಡೆನು. ಆಗ ಇಗೋ ಬಿಳೀ ಕುದುರೆಯು ನನಗೆ ಕಾಣಿಸಿತು. ಅದರ ಮೇಲೆ ಕೂತಿದ್ದವನಿಗೆ ನಂಬಿಗಸ್ತನೂ ಸತ್ಯವಂತನೂ ಎಂದು ಹೆಸರು. ಆತನು ನೀತಿಯಿಂದ ನ್ಯಾಯ ವಿಚಾರಿಸುತ್ತಾನೆ. ನೀತಿಯಿಂದ ಯುದ್ಧಮಾಡುತ್ತಾನೆ.**

* *ಪ್ರವಾದಿಯಾದ ಯೆಹೆಜ್ಕೇಲನು*

ಪರಲೋಕವು ತೆರೆದಿರುವುದನ್ನು ನೋಡಿದ್ದಾಗಿ ಯೆಹೆಜ್ಕೇಲನು ತಿಳಿಸಿದನು.

**ಯೆಹೆಜ್ಕೇಲ 1:1 ಕೆಬಾರ್ ನದಿಯ ಹತ್ತಿರ ಸೆರೆಯಾಗಿ ವಾಸಿಸುತ್ತಿದ್ದ ಯೆಹೂದ್ಯರ ಮಧ್ಯದಲ್ಲಿ ನಾನು ಸೇರಿಕೊಂಡುರುವಾಗ ಮೂವತ್ತನೆಯ ವರುಷದ ನಾಲ್ಕನೆಯ ತಿಂಗಳಿನ ಐದನೆಯ ದಿನದಲ್ಲಿ ಆಕಾಶವು ಒಡೆದು ನನಗೆ ದೇವದರ್ಶನಗಳು ಉಂಟಾದವು.**

* *ಪ್ರವಾದಿಯಾದ ಯೆಶಾಯನು*

**ಯೆಶಾಯ 62:1-3 ಚೀಯೋನಿನ ಧರ್ಮವು ಪ್ರಕಾಶಗೊಳ್ಳುವ ತನಕ, ಯೆರೂಸಲೇಮಿನ ರಕ್ಷಣೆಯು ದೀವಿಟಿಗೆಯಂತೆ ಪ್ರಜ್ವಲಿಸುವ ವರೆಗೆ ನಾನು ಮೌನವಾಗಿರದೆ ಚೀಯೋನಿನ ಹಿತವನ್ನು ಲಕ್ಷಿಸುತ್ತಿರುವೆನು; ಸುಮ್ಮನಿರದೆ ಯೆರೂಸಲೇಮಿನ ಕ್ಷೇಮವನ್ನು ಚಿಂತಿಸುತ್ತಿರುವೆನು. ಜನಾಂಗಗಳು ನಿನ್ನ ಧರ್ಮವನ್ನು, ಸಕಲ ರಾಜರು ನಿನ್ನ ವೈಭವವನ್ನು ನೋಡುವರು; ಯೆಹೋವನ ಬಾಯಿ ನೇಮಿಸಿದ ಹೊಸ ಹೆಸರು ನಿನಗೆ ದೊರೆಯುವದು. ನೀನು ಯೆಹೋವನ ಕೈಯಲ್ಲಿ ಸುಂದರ ಕಿರೀಟವಾಗಿಯೂ ನಿನ್ನ ದೇವರ ಹಸ್ತದಲ್ಲಿ ರಾಜ ಶಿರೋವೇಷ್ಟನವಾಗಿಯೂ ಇರುವಿ.**

**ವಚನ 10 ಊರ ಬಾಗಿಲುಗಳಲ್ಲಿ ಹಾದು ಬನ್ನಿರಿ, ಹಾದು ಬನ್ನಿರಿ, ಜನರಿಗೆ ದಾರಿಯನ್ನು ಸರಿಮಾಡಿರಿ, ರಾಜಮಾರ್ಗವನ್ನು ಎತ್ತರಿಸಿರಿ, ಎತ್ತರಿಸಿರಿ, ಕಲ್ಲುಗಳನ್ನು ತೆಗೆದುಹಾಕಿರಿ, ಜನಾಂಗಗಳಿಗೆ ಧ್ವಜವನ್ನೆತ್ತಿರಿ!**

**ಸೈತಾನನ ಕುತಂತ್ರ**

ಪಾಪ ಪ್ರವೇಶಿಸುವುದಕ್ಕಿಂತ ಮೊದಲು ಲೂಸಿಫರನು ಪರಲೋಕದಲ್ಲಿ ದೇವರನ್ನು ಸ್ತುತಿಸುವವನು ಮತ್ತು ಆರಾಧಿಸುವವನು ಆಗಿದ್ದನು. ಅವನ ದಂಗೆಯಲ್ಲಿ ಅವನನ್ನು ಹಿಂಬಾಲಿಸಿದ ದೇವದೂತರು ದೇವರ ಸ್ತುತಿಸುವವರು ಮತ್ತು ಆರಾಧಕರು. ಅವರನ್ನು ಹೊರ ದೊಬ್ಬುವುದಕ್ಕಿಂತ ಮೊದಲು ಅವರು ದೇವರ ಸಿಂಹಾಸನದ ಮುಂದೆ ಇದ್ದರು.

ಆಗ ದೇವರು ಆದಾಮ ಹವ್ವರನ್ನು ಸೃಷ್ಟಿಸಿದನು, ಆದರೆ ಸೈತಾನನು ಅವರನ್ನು ಮತ್ತು ಅವರ ಎಲ್ಲಾ ವಂಶಸ್ಥರನ್ನು ಮಲಿನಗೊಳಿಸಿದನು. ಅನಂತರ ಯೇಸು ಪ್ರತಿಯೊಬ್ಬ ಪುರುಷ, ಸ್ತ್ರೀ ಮತ್ತು ಮಗುವಿಗಾಗಿ ಬಲಿಯಾದನು. ಈಗ, ಆತನು ಸುರಿಸಿದ ರಕ್ತದ ಮೂಲಕ, ದೇವರ ಸಿಂಹಾಸನ ಕೋಣೆಗೆ ಬರಲು ನಮ್ಮನ್ನು ಆಹ್ವಾನಿಸಲಾಗಿದೆ, ಆದರೆ ನಾವು ಅದನ್ನು ಪವಿತ್ರಾತ್ಮನ ಬಲಪಡಿಸುವಿಕೆಯ ಮೂಲಕ ಮಾತ್ರ ಮಾಡಬಹುದು.

ಕ್ರಿಸ್ತನ ದೇಹವನ್ನು ನಾಶಮಾಡುವುದು ಸೈತಾನನ ಬಯಕೆಯಾಗಿದೆ. ಅವನ ತಂತ್ರವೇನಂದರೆ ನಕಲಿ "ಸಭೆಯನ್ನು" - ಬಲಹೀನವಾದ ಸಂಘಟನೆಯನ್ನು ಸ್ಥಾಪಿಸುವುದು - ಪವಿತ್ರಾತ್ಮನ ಬಲವನ್ನು ತಿಳಿದುಕೊಳ್ಳದಂತೆ ತಡೆಯುವುದು - ನಾವು ಸ್ತುತಿ ಆರಾಧನೆಯ ಮೂಲಕ ದೇವರ ಸನ್ನಿಧಿಗೆ ಹೋಗುವಾಗ ನಮ್ಮದಾಗಿರುವ ಬಲವನ್ನು ತಿಳಿದುಕೊಳ್ಳದಂತೆ ತಡೆಯುವುದು ಆಗಿದೆ.

**ಮಹಿಮೆಯೊಳಕ್ಕೆ ಹೋಗಲು ಬೇಧನ**

ಅತ್ಯಾಸಕ್ತಿಯುಳ್ಳ ಸ್ತುತಿ ಆರಾಧನೆಯ ಮೂಲಕ, ನಾವು ಪರಲೋಕದಲ್ಲಿ ತೆರೆದಿರುವ ಬಾಗಿಲನ್ನು ಅನುಭವಿಸಬಹುದು. "ಇಲ್ಲಿಗೆ ಏರಿ ಬಾ…" ಎಂಬ ದೇವರ ಸ್ವರವನ್ನು ನಾವು ಕೇಳಬಹುದು. ನಾವು "ಆತ್ಮದಲ್ಲಿ" ದೇವರ ಸಿಂಹಾಸನವಿರುವ ಕೋಣೆಗೆ ಒಯ್ಯಲ್ಪಡಬಹುದು.

ಬೇಧನ ಅಥವಾ ಬಿಡುಗಡೆಯ ಆರಾಧನೆಯ ಮೂಲಕ ನಾವು ಪರಲೋಕವನ್ನು ತೆರೆದಿದ್ದೇವೆ. ಕತ್ತಲೆಯ ಮುಸುಕು ನಾಶವಾಗಿದೆ. ಬೇತೇಲಿನಲ್ಲಿರುವ ಯಾಕೋಬನಂತೆ ನಾವು ಸಹ ಬಾಗಿಲು ತೆರೆದಿರುವ, ದೇವದೂತರ ಅಪಾರವಾದ ಕಾರ್ಯಕಲಾಪವಿರುವ, ದೇವರು ಮೇಲೆ ನಿಂತು ಮಾತನಾಡುತ್ತಿರುವ ಅತಿಶಯವಾದ ಸ್ಥಳವನ್ನು ಅನುಭವಿಸುತ್ತೇವೆ. ದೇವರ ಅದ್ಭುತಕರವಾದ ಮಹಿಮೆಯನ್ನು ನಾವು ಅನುಭವಿಸಬಹುದು!

**ನಾವು ದಾವೀದನೊಂದಿಗೆ ಹೀಗೆ ಘೋಷಿಸಬಹುದು,**

***ಇಂಥವರೇ ಆತನ ದರ್ಶನವನ್ನು ಬಯಸುವವರು.***

***ಯಾಕೋಬ್ಯರ ದೇವರೇ, ನಿನ್ನ ಸಾನ್ನಿಧ್ಯವನ್ನು ಸೇರುವವರು ಇಂಥವರೇ. ಸೆಲಾ.***

*ದ್ವಾರಗಳೇ, ಉನ್ನತವಾಗಿರ್ರಿ; ಪುರಾತನವಾದ ಕದಗಳೇ, ತೆರೆದುಕೊಂಡಿರ್ರಿ;*

*ಮಹಾಪ್ರಭಾವವುಳ್ಳ ಅರಸನು ಆಗಮಿಸುತ್ತಾನೆ.*

*ಮಹಾಪ್ರಭಾವವುಳ್ಳ ಈ ಅರಸನು ಯಾರು?*

*ಮಹಾ ಬಲಿಷ್ಠನೂ ವಿಶೇಷ ಪರಾಕ್ರಮಿಯೂ ಆಗಿರುವ ಯೆಹೋವ, ಯುದ್ಧವೀರನಾಗಿರುವ ಯೆಹೋವ.*

*ದ್ವಾರಗಳೇ, ಉನ್ನತವಾಗಿರ್ರಿ; ಪುರಾತನವಾದ ಕದಗಳೇ, ತೆರೆದುಕೊಂಡಿರ್ರಿ;*

*ಮಹಾಪ್ರಭಾವವುಳ್ಳ ಅರಸನು ಆಗಮಿಸುತ್ತಾನೆ.*

*ಮಹಾಪ್ರಭಾವವುಳ್ಳ ಈ ಅರಸನು ಯಾರು?*

*ಸೇನಾಧೀಶ್ವರನಾದ ಯೆಹೋವನೇ; ಮಹಾಪ್ರಭಾವವುಳ್ಳ ಅರಸನು ಈತನೇ. ಸೆಲಾ*

ಕೀರ್ತನೆ 24: 3-10

ಪರಾಮರ್ಶೆಗಾಗಿರುವ ಪ್ರಶ್ನೆಗಳು

---

1. ಕತ್ತಲೆಯ ಮುಸುಕು ಎಂದರೇನು?

2. ಅದನ್ನು ಹೇಗೆ ತೆಗೆದುಹಾಕಬಹುದು?

3. ಕತ್ತಲೆಯ ಮುಸುಕನ್ನು ತೆಗೆದುಹಾಕಿರುವುದರ ಕುರಿತಾದ ಮೂರು ಸತ್ಯವೇದದ ವಚನಗಳನ್ನು ತಿಳಿಸಿರಿ.

## ಪಾಠ 5

# ಮಹಿಮೆಯ ಅಭಿವ್ಯಕ್ತಿಗಳು

ನಾವು ನಮ್ಮ ನೈಸರ್ಗಿಕ ಮಂಡಲದಿಂದ ಆತ್ಮ ಮಂಡಲಕ್ಕೆ ಹೋದಾಗ ಮಹಿಮೆಯ ಅಭಿವ್ಯಕ್ತಿಗಳು ತೋರಿಬರುತ್ತವೆ.

ಎರಡು ಮಂಡಲಗಳು

* *ನೈಸರ್ಗಿಕ*

ನಾವು ಲಕ್ಷ್ಯಕೊಡಬೇಕಾದ ಎರಡು ಮಂಡಲಗಳಿವೆ. ನಮ್ಮ ಸುತ್ತಲೂ ಇರುವ ನೈಸರ್ಗಿಕ ಮಂಡಲವಿದೆ.

► ಈ ಮಂಡಲದಲ್ಲಿ ನಾವು ನೋಡುವಿಕೆ, ಆಲಿಸುವಿಕೆ, ರುಚಿ, ಸ್ಪರ್ಶ/ಅನುಭವ ಮತ್ತು ವಾಸನೆಯ ಎಂಬ ನಮ್ಮ ನೈಸರ್ಗಿಕ ಇಂದ್ರಿಯಗಳ ಮೂಲಕ ಕಾರ್ಯಮಾಡುತ್ತೇವೆ.

► ಈ ಮಂಡಲವು ತಾತ್ಕಾಲಿಕವಾಗಿದೆ, ಅಂದರೆ ಇದು ಶಾಶ್ವತವಲ್ಲ, ಆದರೆ ಒಂದು ಸೀಮಿತ ಕಾಲಾವಧಿಗೆ ಇರುವಂಥದ್ದಾಗಿದೆ.

► ಇದು ಭೌತಿಕವಾದದ್ದು.

► ನೈಸರ್ಗಿಕ ಮಂಡಲದಲ್ಲಿ ನಾವು ದೇವರನ್ನು ಸ್ತುತಿಸಬಹುದು. ನಾವು ವಾಕ್ಯವನ್ನು ಕಲಿಯಬಹುದು. ನಾವು ದೇವರ ಬಗ್ಗೆ ತಿಳಿದುಕೊಳ್ಳಬಹುದು.

* *ಆತ್ಮಿಕ*

ಆತ್ಮಿಕ ಮಂಡಲವೂ ಸಹ ಇದೆ. ಈ ಮಂಡಲವು ಸಹ ನಮ್ಮ ಸುತ್ತಲೂ ಇದೆ.

► ಆದರೆ, ನಮ್ಮ ನೈಸರ್ಗಿಕ ಇಂದ್ರಿಯಗಳ ಮೂಲಕ ನಾವು ಈ ಮಂಡಲದಲ್ಲಿ ಕಾರ್ಯಮಾಡಲು ಸಾಧ್ಯವಿಲ್ಲ. ನಾವು ನಮ್ಮ ಆತ್ಮಿಕ ಇಂದ್ರಿಯಗಳನ್ನು ಅನುಗೊಳಿಸಬೇಕು.

► ಈ ಮಂಡಲವು ಶಾಶ್ವತವಾಗಿದೆ.

► ಆತ್ಮ ಮಂಡಲದಲ್ಲಿ ಸಮಯವಾಗಲಿ ಅಥವಾ ದೂರವಾಗಲಿ ಇಲ್ಲ.

► ಈ ಮಂಡಲದಲ್ಲಿ ನಾವು ದೇವರನ್ನು ಆರಾಧಿಸಬಹುದು. ಇಲ್ಲಿ ವಾಕ್ಯವು ಜೀವವುಳ್ಳದ್ದು ಮತ್ತು ಶಕ್ತಿಯುಳ್ಳದ್ದು ಆಗುತ್ತದೆ. ನಾವು ದೇವರನ್ನು ತಿಳಿದುಕೊಳ್ಳಬಹುದು.

ಅಪೊಸ್ತಲನಾದ ಪೌಲನು ಹೀಗೆ ಬರೆದಿದ್ದಾನೆ,

**2 ಕೊರಿಂಥ 4:18 ನಾವು ಕಾಣುವಂಥದ್ದನ್ನು ಲಕ್ಷಿಸದೇ ಕಾಣದಿರುವಂಥದ್ದನ್ನು ಲಕ್ಷಿಸುವವರಾಗಿದ್ದೇವೆ. ಕಾಣುವಂಥದ್ದು ಸ್ವಲ್ಪ ಕಾಲ ಮಾತ್ರ ಇರುವದು. ಕಾಣದಿರುವಂಥದ್ದು ಸದಾಕಾಲವೂ ಇರುವದು.**

ಎರಡು ರಾಜ್ಯಗಳು

ಆತ್ಮಿಕ ಮಂಡಲದಲ್ಲಿ ಎರಡು ರಾಜ್ಯಗಳಿವೆ. ದೇವರ ರಾಜ್ಯ ಮತ್ತು ಸೈತಾನನ ರಾಜ್ಯ ಇದೆ.

ಅಪೊಸ್ತಲನಾದ ಪೌಲನು ಈ ಎರಡು ರಾಜ್ಯಗಳ ಬಗ್ಗೆ ಉಲ್ಲೇಖಿಸಿದ್ದಾನೆ.

**ಕೊಲೊಸ್ಸೆ 1:12-14 ಬೆಳಕಿನ ರಾಜ್ಯದೊಳಗೆ ದೇವಜನರ ಭಾದ್ಯತೆಯಲ್ಲಿ ಪಾಲುಗಾರಗಾಗುವದಕ್ಕೆ ನಿಮ್ಮನ್ನು ಯೋಗ್ಯರನ್ನಾಗಿ ಮಾಡಿದ ತಂದೆಗೆ ಕೃತಜ್ಞತಾಸ್ತುತಿ ಮಾಡುವವರಾಗಿರಬೇಕಂತಲೂ ದೇವರನ್ನು ಬೇಡಿಕೊಳ್ಳುತ್ತೇನೆ. ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು. ಆ ಕುಮಾರನಲ್ಲಿ ನಮ್ಮ ಪಾಪಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು.**

ನಾವು ಸೈತಾನನ ರಾಜ್ಯದಲ್ಲಿ ಹುಟ್ಟಿದ್ದೇವೆ, ಆದರೆ ಹೊಸದಾಗಿ ಹುಟ್ಟುವುದರ ಮೂಲಕ ನಾವು ದೇವರ ರಾಜ್ಯಕ್ಕೆ ಸೇರುತ್ತೇವೆ.

**ಮೂರು ಆಕಾಶಗಳು (ಸ್ವರ್ಗ)**

1. ಸತ್ಯವೇದದಲ್ಲಿ ಮೂರು ಆಕಾಶಗಳ ಬಗ್ಗೆ ಉಲ್ಲೇಖಿಸಲಾಗಿದೆ. ಮೊದಲನೆಯದು ಭೂಮಿಯ ವಾತಾವರಣ, ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು.

2. ಎರಡನೆಯ ಆಕಾಶ ದೇವದೂತರ ಮತ್ತು ಸೈತಾನನ ಆತ್ಮ ಮಂಡಲವಾಗಿದೆ.

3. ಮೂರನೆಯ ಆಕಾಶ ಬಗ್ಗೆ ಸತ್ಯವೇದದ 2 ಕೊರಿಂಥ 12:2 ರಲ್ಲಿ ಒಂದು ಬಾರಿ ಉಲ್ಲೇಖಿಸಲಾಗಿದೆ, ಮತ್ತು ಇದು ದೇವರ ನಿವಾಸವಾಗಿದೆ. 4 ನೇ ವಚನದಲ್ಲಿ ಪೌಲನು ಇದನ್ನು ಪರದೈಸ ಎಂದು ಉಲ್ಲೇಖಿಸಿದ್ದಾನೆ. ಸಿಂಹಾಸನದ ಕೋಣೆಯು ಈ ಮಂಡಲದಲ್ಲಿದೆ.

**2 ಕೊರಿಂಥ 12:2-4 ಕ್ರಿಸ್ತನಲ್ಲಿದ್ದ ಒಬ್ಬ ಮನುಷ್ಯನನ್ನು ಬಲ್ಲೆನು. ಅವನು ಹದಿನಾಲ್ಕು ವರುಷಗಳ ಹಿಂದೆ ಮೂರನೇಯ ಆಕಾಶದ ಪರ್ಯಂತರಕ್ಕೂ ಒಯ್ಯಲ್ಪಟ್ಟನು. ಅವನು ದೇಹಸಹಿತನಾಗಿ ಒಯ್ಯಲ್ಪಟ್ಟನೋ ದೇಹರಹಿತನಾಗಿ ಒಯ್ಯಲ್ಪಟ್ಟನೋ ನಾನರಿಯೆ. ದೇವರೇ ಬಲ್ಲನು. ಮನುಷ್ಯನು ಪರದೈಸಕ್ಕೆ ಒಯ್ಯಲ್ಪಟ್ಟು ಮನುಷ್ಯನು ನುಡಿಯಲಶಕ್ಯವಾದ ಹೇಳಬಾರದ ಮಾತುಗಳನ್ನು ಕೇಳಿದನೆಂದೂ ಬಲ್ಲೆನು. ಆ ಸಮಯದಲ್ಲಿ ಆತನು ದೇಹಸಹಿತನಾಗಿದ್ದನೋ ದೇಹರಹಿತನಾಗಿದ್ದನೋ ನಾನರಿಯೆ ದೇವರೇ ಬಲ್ಲನು...**

ನಾವು ದೇವರ ಮಹಿಮೆಗೆ ಅಥವಾ ಪ್ರಸನ್ನತೆಗೆ ಬರುವಾಗ, ನಾವು ಆತ್ಮ ಮಂಡಲದಲ್ಲಿರುತ್ತೇವೆ. ನಾವು ನೈಸರ್ಗಿಕ ಮಂಡಲದಲ್ಲಿ ವಾಸಿಸುತ್ತಿದ್ದರೂ ಸಹ, ನಾವು ಆತ್ಮ ಮಂಡಲಕ್ಕೆ ಅನುಗೊಳ್ಳಬಹುದು.

ನಾವು ಆತ್ಮ ಮಂಡಲವನ್ನು ಪ್ರವೇಶಿಸಿದಾಗ ನಾವು ವಾಸ್ತವವಾಗಿ ಸ್ವರ್ಗದಲ್ಲಿ - ದೇವರ ಸಿಂಹಾಸನದ ಕೋಣೆಯಲ್ಲಿ ಇರುತ್ತೇವೆ.

ಸತ್ಯವೇದದಲ್ಲಿ ಆಕಾಶದ ಬಗ್ಗೆ 750 ಕ್ಕೂ ಹೆಚ್ಚು ಉಲ್ಲೇಖಗಳಿವೆ, ಆದರೆ ಅವುಗಳಲ್ಲಿ ಯಾವುದೂ ಮೂರನೆಯ ಆಕಾಶವನ್ನು ಮೀರಿ ಹೋಗುವುದಿಲ್ಲ.

## ಆತ್ಮ ಮಂಡಲವನ್ನು ಪ್ರವೇಶಿಸುವುದು

## ಪವಿತ್ರಾತ್ಮನನ್ನು ಹೊಂದಿಕೊಳ್ಳುವುದು

ನಾವು ಆತ್ಮನ ಮಹಿಮೆಯ ಮಂಡಲವನ್ನು ಅನುಭವಿಸಬೇಕಾದರೆ, ನಾವು ಮೊದಲು ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಹೊಂದಿಕೊಳ್ಳಬೇಕು.

**ಲೂಕ 3:16 ಯೋಹಾನನು ಅವರೆಲ್ಲರಿಗೆ - ನಾನಂತೂ ನಿಮಗೆ ನೀರಿನ ಸ್ನಾನಮಾಡಿಸುವವನು; ಆದರೆ ನನಗಿಂತ ಶಕ್ತನು**

ಬರುತ್ತಾನೆ. ಆತನ ಕೆರಗಳ ಬಾರನ್ನು ಬಿಚ್ಚುವದಕ್ಕೂ ನಾನು ಯೋಗ್ಯನಲ್ಲ. ಆತನು ಪವಿತ್ರಾತ್ಮದಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ಸ್ನಾನಮಾಡಿಸುವನು.

ಅಪೊಸ್ತಲರ ಕೃತ್ಯಗಳು **2:1-4** ಪಂಚಾಶತ್ತಮ ದಿನದ ಹಬ್ಬವು ಬಂದಿರಲಾಗಿ ಅವರೆಲ್ಲರು ಒಂದೇ ಸ್ಥಳದಲ್ಲಿ ಕೂಡಿದ್ದರು. ಆಗ ಬಿರುಗಾಳಿ ಬೀಸುತ್ತದೋ ಎಂಬಂತೆ ಫಕ್ಕನೆ ಆಕಾಶದೊಳಗಿಂದ ಒಂದು ಶಬ್ದವುಂಟಾಗಿ ಅವರು ಕೂತಿದ್ದ ಮನೆಯನ್ನೆಲ್ಲಾ ತುಂಬಿಕೊಂಡಿತು. ಉರಿಯಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಅವರಲ್ಲಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ ಕೂತುಕೊಂಡವು. ಆಗ ಅವರೆಲ್ಲರು ಪವಿತ್ರಾತ್ಮಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು.

ಅಪೊಸ್ತಲರ ಕೃತ್ಯಗಳು **19:2** ನೀವು ನಂಬಿದಾಗ ಪವಿತ್ರಾತ್ಮವರವನ್ನು ಹೊಂದಿದಿರೋ ಎಂದು ಅವರನ್ನು ಕೇಳಲು ಅವರು ಅವನಿಗೆ – ಇಲ್ಲ, ಪವಿತ್ರಾತ್ಮವರವು ಉಂಟೆಂಬದನ್ನೇ ನಾವು ಕೇಳಲಿಲ್ಲ ಅಂದರು.

ವಚನ. **6** ಪೌಲನು ಅವರ ಮೇಲೆ ಕೈಗಳನ್ನಿಡಲು ಪವಿತ್ರಾತ್ಮವರವು ಅವರ ಮೇಲೆ ಬಂತು; ಅವರು ನಾನಾ ಭಾಷೆಗಳನ್ನಾಡಿದರು, ಪ್ರವಾದಿಸಿದರು.

ಆತ್ಮನಲ್ಲಿ ಜೀವಿಸುವುದು

ನಮ್ಮ ಜೀವನದ ಪ್ರತಿದಿನವು ನಾವು ಆತ್ಮ ಮಂಡಲದಲ್ಲಿ ಜೀವಿಸಬೇಕು ಮತ್ತು ನಡೆಯಬೇಕು ಎಂಬುದು ನಮ್ಮ ಜೀವನದ ಕುರಿತಾಗಿರುವ ದೇವರ ಯೋಜನೆಯು ಮತ್ತು ಉದ್ದೇಶವು ಆಗಿದೆ.

ಗಲಾತ್ಯ **5:25** ನಾವು ಆತ್ಮನಿಂದ ಜೀವಿಸುತ್ತಿರಲಾಗಿ ಆತ್ಮನನ್ನನುಸರಿಸಿ ನಡೆಯೋಣ.

ವಚನ. **16** ನಾನು ಹೇಳುವದೇನಂದರೆ ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳಿರಿ. ಆಗ ನೀವು ಶರೀರ ಭಾವದ ಅಭಿಲಾಷೆಗಳನ್ನು ಎಷ್ಟು ಮಾತ್ರಕ್ಕೂ ನೆರವೇರಿಸುವದಿಲ್ಲ.

**ಪ್ರಕಟಣೆಯ ಆತ್ಮವನ್ನು ಪಡೆದುಕೊಳ್ಳಿರಿ**

ದೇವರ ನಿಜವಾದ ಮಹಿಮೆಯನ್ನು ಅನುಭವಿಸಲು, ನಾವು ಆತ್ಮ ಮಂಡಲವನ್ನು ಪ್ರವೇಶಿಸಬೇಕು. ಪವಿತ್ರಾತ್ಮನು ಜ್ಞಾನದ ಮತ್ತು ಪ್ರಕಟಣೆಯ ಆತ್ಮವಾಗಿ ನಮ್ಮ ಮೇಲೆ ಇಳಿದು ಬರುವಾಗ ಅದು ಪ್ರಾರಂಭವಾಗುತ್ತದೆ. ಆತ್ಮ ಮಂಡಲದಲ್ಲಿ, ನಾವು ದೇವರ ಮಹಿಮೆಯನ್ನು ಕಂಡುಕೊಳ್ಳುವುದು ಮಾತ್ರವಲ್ಲ, ನಾವು ಆತನನ್ನು ಮಹಿಮೆಪಡಿಸುವುದಾಗಿ ನಾವು ಕಂಡುಕೊಳ್ಳುತ್ತೇವೆ.

**ಎಫೆಸ 1:16-18 ನನ್ನ ಪ್ರಾರ್ಥನೆಗಳಲ್ಲಿ ನಿಮಗೋಸ್ಕರ ವಿಜ್ಞಾಪನೆ ಮಾಡಿ ನಮ್ಮ ಕರ್ತವಾದ ಯೇಸು ಕ್ರಿಸ್ತನ ದೇವರೂ ಪ್ರಭಾವಸ್ವರೂಪನಾದ ತಂದೆಯೂ ಆಗಿರುವಾತನು ತನ್ನ ವಿಷಯವಾಗಿ ತಿಳುವಳಿಕೆಯನ್ನು ಕೊಟ್ಟು ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥಗಳನ್ನು ತಿಳುಕೊಳ್ಳುವ ಜ್ಞಾನವುಳ್ಳ ಆತ್ಮವನ್ನು ನಿಮಗೆ ದಯಪಾಲಿಸಬೇಕೆಂದು ಪ್ರಾರ್ಥಿಸುತ್ತೇನೆ. ಆತನು ನಿಮ್ಮ ಮನೋನೇತ್ರಗಳನ್ನು ಬೆಳಗಿಸಿ ಆತನಿಂದ ಕರಿಸಿಕೊಂಡವರು ನಿರೀಕ್ಷಿಸುವ ಪದವಿ ಎಂಥದೆಂಬದನ್ನೂ ದೇವಜನರೆಂಬ ಆತನ ಸ್ವಾಸ್ಥ್ಯದ ಮಹಿಮಾತಿಶಯವು ಎಂಥದೆಂಬದನ್ನೂ ನಂಬುವವರಾದ ನಮ್ಮಲ್ಲಿ.**

ಆತನ ಬಾಧ್ಯಸ್ತರಾಗಿರುವ ನಮಗೆ ಕ್ರಿಸ್ತನಲ್ಲಿ, ಆತನಿಗೆ ಮಹಿಮೆಯನ್ನು ಉಂಟುಮಾಡುವುದಕ್ಕೆ ಮಹಿಮೆಯ ಮಂಡಲವನ್ನು ಪ್ರವೇಶಿಸಲು ನಮಗೆ ಧೈರ್ಯಯುಂಟು.

**ಇಬ್ರಿಯ 10:19 ಆತನ ರಕ್ತದ ಮೂಲಕ ಆತನ ಶರೀರವೆಂಬ ತೆರೆಯ ಮುಖಾಂತರ ದೇವರ ಸಮಕ್ಷಮದಲ್ಲಿ ಪ್ರವೇಶಿಸುವದಕ್ಕೆ ನಮಗೆ ಧೈರ್ಯವುಂಟಾಯಿತು...**

**ಆತ್ಮದಲ್ಲಿ ಪ್ರಾರ್ಥಿಸುವುದು**

ನಾವು ಆತ್ಮನ ಮಹಿಮೆಯ ಮಂಡಲದಲ್ಲಿ ಜೀವಿಸುವಾಗ ಮತ್ತು ನಡೆಯುತ್ತಿರುವಾಗ, ನಾವು ಕೂಡ ಆತ್ಮದಲ್ಲಿ ಪ್ರಾರ್ಥಿಸುತ್ತೇವೆ.

**1 ಕೊರಿಂಥ 14:14,15** ಯಾಕಂದರೆ ನಾನು ವಾಣಿಯನ್ನಾಡುತ್ತಾ ದೇವರನ್ನು ಪ್ರಾರ್ಥಿಸಿದರೆ ನನ್ನಾತ್ಮವು ಪ್ರಾರ್ಥಿಸುವದೇ ಹೊರತು ನನ್ನ ಬುದ್ಧಿ ನಿಷ್ಫಲವಾಗುವದು. ಹಾಗಾದರೇನು? ನಾನು ಆತ್ಮದಿಂದ ಪ್ರಾರ್ಥಿಸುವೆನು. ಬುದ್ಧಿಯಿಂದಲೂ ಪ್ರಾರ್ಥಿಸುವೆನು. ಆತ್ಮದಿಂದ ಹಾಡುವೆನು ಬುದ್ಧಿಯಿಂದಲೂ ಹಾಡುವೆನು.

**ರೋಮಾಪುರ 8:26** ಹೇಗೆ ಪವಿತ್ರಾತ್ಮನು ಸಹ ನಮ್ಮ ಅಶಕ್ತಿಯನ್ನು ನೋಡಿ ಸಹಾಯಮಾಡುತ್ತಾನೆ. ಹೇಗಂದರೆ ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ ಪವಿತ್ರಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ.

ಆತ್ಮದಲ್ಲಿ ನಾವು ಮಾಡುವ ನಮ್ಮ ಪ್ರಾರ್ಥನೆಗಳು ದೇವರ ಸಿಂಹಾಸನದ ಮುಂದಿರುವ ಬಂಗಾರದ ಧೂಪಾರತಿಯಲ್ಲಿ ಹಾಕಿರುವ ಸುಗಂಧ ವಾಸನೆಯುಳ್ಳ ಧೂಪದಂತೆ ದೇವರಿಗೆ ಮೆಚ್ಚಿಗೆಯಾಗಿರುತ್ತದೆ.

**ಪ್ರಕಟನೆ 5:8** ತೆಗೆದುಕೊಂಡಾಗ ಆ ನಾಲ್ಕು ಜೀವಿಗಳೂ ಇಪ್ಪತ್ತು ನಾಲ್ಕು ಮಂದಿ ಹಿರಿಯರೂ ಯಜ್ಞದ ಕುರಿಯಾದಾತನ ಪಾದಕ್ಕೆ ಬಿದ್ದರು. ಹಿರಿಯರ ಕೈಗಳಲ್ಲಿ ವೀಣೆಗಳೂ ದೇವ ಜನರ ಪ್ರಾರ್ಥನೆಗಳೆಂಬ ಧೂಪದಿಂದ ತುಂಬಿದ್ದ ಚಿನ್ನದ ಧೂಪಾರತಿಗಳು ಇದ್ದವು.

**ಪ್ರಕಟನೆ 8:3,4** ಆ ಮೇಲೆ ಮತ್ತೊಬ್ಬ ದೇವದೂತನು ಬಂದು ಯಜ್ಞವೇದಿಯ ಬಳಿಯಲ್ಲಿ ನಿಂತನು. ಅವನ ಕೈಯಲ್ಲಿ ಚಿನ್ನದ ಧೂಪಾರತಿ ಇತ್ತು. ಸಿಂಹಾಸನದ ಮುಂದಣ ಚಿನ್ನದ ಧೂಪವೇದಿಯ ಮೇಲೆ ದೇವಜನರೆಲ್ಲರ ಪ್ರಾರ್ಥನೆಗಳ ಜೊತೆಯಲ್ಲಿ ಸಮರ್ಪಿಸುವದಕ್ಕಾಗಿ ಅವನಿಗೆ ಬಹಳ ಧೂಪ ಕೊಡಲ್ಪಟ್ಟಿತು. ಆಗ ಧೂಪದ ಹೊಗೆಯು ದೇವದೂತನ ಕೈಯೊಳಗಿಂದ ಹೊರಟು ದೇವಜನರ ಪ್ರಾರ್ಥನೆಗಳೊಂದಿಗೆ ಕೂಡಿ ದೇವರ ಸನ್ನಿಧಿಗೆ ಏರಿಹೋಯಿತು.

**ಆತ್ಮದಲ್ಲಿ ಹಾಡುವುದು**

ನಾವು ಆತ್ಮದಲ್ಲಿ ಮಹಿಮೆ ಮಂಡಲವನ್ನು ಪ್ರವೇಶಿಸಿದಾಗ, ನಾವು ಆತ್ಮದಲ್ಲಿ ಹಾಡಲು ಪ್ರಾರಂಭಿಸುತ್ತೇವೆ.

**1 ಕೊರಿಂಥ 14:15** ಆತ್ಮದಿಂದ ಹಾಡುವೆನು ಬುದ್ಧಿಯಿಂದಲೂ ಹಾಡುವೆನು.

**ಪ್ರಕಟನೆ 14:3** ಅವರು ಸಿಂಹಾಸನದ ಮುಂದೆಯೂ ಆ ನಾಲ್ಕು ಜೀವಿಗಳ ಮತ್ತು ಹಿರಿಯರ ಮುಂದೆಯೂ ಹೊಸ ಹಾಡನ್ನು ಹಾಡಿದರು...

**ಪ್ರಕಟನೆ 5: 8,9** ತೆಗೆದುಕೊಂಡಾಗ ಆ ನಾಲ್ಕು ಜೀವಿಗಳೂ ಇಪ್ಪತ್ತು ನಾಲ್ಕು ಮಂದಿ ಹಿರಿಯರೂ ಯಜ್ಞದ ಕುರಿಯಾದಾತನ ಪಾದಕ್ಕೆ ಬಿದ್ದರು. ಹಿರಿಯರ ಕೈಗಳಲ್ಲಿ ವೀಣೆಗಳೂ ದೇವ ಜನರ ಪ್ರಾರ್ಥನೆಗಳೆಂಬ ಧೂಪದಿಂದ ತುಂಬಿದ್ದ ಚಿನ್ನದ ಧೂಪಾರತಿಗಳು ಇದ್ದವು. ಅವರು ಹೊಸ ಹಾಡನ್ನು ಹಾಡುತ್ತಾ ನೀನು ಸುರುಳಿಯನ್ನು ತೆಗೆದುಕೊಂಡು ಅದರ ಮುದ್ರೆಯನ್ನು ಒಡೆಯುವದಕ್ಕೆ ಯೋಗ್ಯನು. ನೀನು ಯಜ್ಞಾರ್ಪಿತನಾಗಿ ನಿನ್ನ ರಕ್ತದಿಂದ ಸಕಲ ಕುಲ ಭಾಷೆ ಪ್ರಜೆ ಜನಾಂಗಗಳವರಿಂದ ಮನುಷ್ಯರನ್ನು ದೇವರಿಗಾಗಿ ಕೊಂಡುಕೊಂಡಿ. ಅವರನ್ನು ನಮ್ಮ ದೇವರಿಗೊಸ್ಕರ ರಾಜ್ಯವನ್ನಾಗಿಯೂ,

ಆತ್ಮದಲ್ಲಿ ಆರಾಧಿಸುವುದು

ಆತ್ಮದಲ್ಲಿನ ಮಹಿಮೆಯ ಮಂಡಲದಲ್ಲಿ, ಆತ್ಮದಲ್ಲಿ ಮತ್ತು ಸತ್ಯದಲ್ಲಿ ಆತನನ್ನು ಆರಾಧಿಸುವಂತೆ ದೇವರ ಸನ್ನಿಧಿಯಲ್ಲಿ ಆತ್ಮವು ನಮ್ಮನ್ನು ಮೇಲಕ್ಕೆತ್ತಿರುವುದಾಗಿ ನಾವು ಕಂಡುಕೊಳ್ಳುತ್ತೇವೆ.

**ಯೋಹಾನ 4:23,24** ಅದಿರಲಿ, ಸತ್ಯಭಾವದಿಂದ ಆರಾಧನೆ ಮಾಡುವವರು ಆತ್ಮೀಯ ರಿತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ತಂದೆಯನ್ನು ಆರಾಧಿಸುವ ಕಾಲ ಬರುತ್ತದೆ. ಅದು ಈಗಲೇ ಬಂದಿದೆ. ತಂದೆಯು ತನ್ನನ್ನು ಆರಾಧಿಸುವವರು ಇಂಥವರೇ ಆಗಿರಬೇಕೆಂದು ಅಪೇಕ್ಷೀಸುತ್ತಾನಲ್ಲವೇ, ದೇವರು ಆತ್ಮಸ್ವರೂಪನು ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು ಅಂದನು.

ಆತ್ಮನಿಂದ ಒಯ್ಯಲ್ಪಡುವುದು

ಆತ್ಮನು ಫಿಲಿಪ್ಪನನ್ನು "ಒಯ್ಯದ" ಪ್ರಕಾರವೇ, ಆತನು ನಮ್ಮನ್ನು ಎತ್ತಿಕೊಂಡು ಆತ್ಮನ ಮಹಿಮೆಯ ಮಂಡಲಕ್ಕೆ ಒಯ್ಯುತ್ತಾನೆ.

**ಅಪೊಸ್ತಲರ ಕೃತ್ಯಗಳು 8:39 ಆದರೆ ಕೆಲವು ಕಾಲದಿಂದ ಆ ಪಟ್ಟಣದಲ್ಲಿದ್ದ ಸೀಮೋನನೆಂಬ ಒಬ್ಬ ಮನುಷ್ಯನು ತಾನು ಏನೋ ಒಬ್ಬ ಮಹಾತ್ಮನೆಂದು ಹೇಳಿಕೊಂಡು ಮಂತ್ರತಂತ್ರಗಳನ್ನು ನಡಿಸಿ ಸಮಾರ್ಯದ ಜನರಲ್ಲಿ ಬೆರಗನ್ನು ಹುಟ್ಟಿಸುತ್ತಿದ್ದನು.**

ದೇವರು ಯೆಹೆಜ್ಕೇಲನನ್ನು ಮನೆಗೆ ಕರೆದೊಯ್ಯುವಾಗ ಪ್ರವಾದಿಯಾದ ಯೆಹೆಜ್ಕೇಲನು ಒಯ್ಯಲ್ಪಟ್ಟನು.

## ದೇವರ ಮಹಿಮೆಯ ಅಭಿವ್ಯಕ್ತಿಗಳು

---

### ಮೊದಲನೆಯ ಎಚ್ಚರಿಕೆ

ಸಮುದ್ರ ತೀರದಲ್ಲಿ ಆಡುತ್ತಿರುವ ಮಕ್ಕಳ ಗುಂಪನ್ನು ಊಹಿಸಿಕೊಳ್ಳಿರಿ. ಅವರು ಮರಳಿನ ಕೋಟೆಗಳನ್ನು ಕಟ್ಟುತ್ತಿದ್ದರು ಮತ್ತು ಅವರು ರಚಿಸಿದ್ದನ್ನು ನೋಡಿ ಸಂತೋಷದಿಂದ ನಗುತ್ತಿದ್ದರು. ಆದರೂ, ನಾವು ಅವುಗಳನ್ನು ನೋಡುತ್ತಿರುವಾಗ, ಅವರು ರಚಿಸಿದ ಎಲ್ಲವೂ ಸ್ವಲ್ಪ ಸಮಯದಲ್ಲಿಯೇ ನಾಶವಾಗುತ್ತವೆ ಎಂದು ನಮಗೆ ತಿಳಿದಿದೆ. ನಾವು ಈ ಮಕ್ಕಳಂತೆ ಇದ್ದೇವೆಯೇ?

ಇಡೀ ಸಮುದ್ರವನ್ನು ನಿರ್ಲಕ್ಷಿಸಿ ತೀರದಲ್ಲಿ ಆಟವಾಡುವುದು ಎಷ್ಟೊಂದು ಸುಲಭ. ದೇವರ ಮಹಿಮೆಯು ಭಾರಿ ಅಗಾಧವಾದದ್ದು ಆಗಿದೆ, ಅದರ ಚಿಕ್ಕ ಭಾಗಗಳನ್ನು ಸಹ ಗ್ರಹಿಸುವುದು ಕಷ್ಟಕರವಾಗಿದೆ.

ನಾವು ಪ್ರಾರ್ಥಿಸುವಾಗ ಮಗು ಗುಣವಾದರೆ, ದೇವರ ಮಹಿಮೆಯನ್ನು ನಾವು ಕಾಣುತ್ತೇವೆ. ನಾವು ದೇವರು ಕೊಟ್ಟಿರುವ ಅಧಿಕಾರದಲ್ಲಿ ನಿಂತುಕೊಂಡು ನಾಶವನ್ನು ಉಂಟುಮಾಡಲು ಕಳುಹಿಸಲ್ಪಟ್ಟಿರುವ ಬಿರುಗಾಳಿಯು ಬರುತ್ತಿರುವಾಗ ಅದನ್ನು ತೊಲಗಿಸಿಬಿಟ್ಟಾಗ, ನಾವು ದೇವರ ಮಹಿಮೆಯನ್ನು ಕಾಣುತ್ತೇವೆ. ನಾವು ಕಾಡಿನಲ್ಲಿ ಗುಡುಗಿನಂತೆ ಮೊಳಗುವ ಜಲಪಾತದ ಬದಿಯಲ್ಲಿ ನಿಂತುಕೊಂಡಿರುವಾಗ, ದೇವರ ಮಹಿಮೆಯನ್ನು ನಾವು ಕಾಣುತ್ತೇವೆ.

### ಆತನ ಮಹಿಮೆ ಎಲ್ಲೆಡೆ ಇದೆ

ಆತನ ಮಹಿಮೆ ಎಲ್ಲೆಡೆ ಇದೆ. ಇದು ನಮ್ಮ ಸುತ್ತಲೂ ಇದೆ. ಪ್ರವಾದಿಯಾದ ಯೆಶಾಯನು ಕರ್ತನ ಮಹಿಮೆಯನ್ನು ಕಂಡನು ಮತ್ತು ಅವನು ನಮಗೆ ಹೀಗೆ ಹೇಳುತ್ತಾನೆ,

**ಯೆಶಾಯ 6:2,3 ಆತನ ಸುತ್ತ ಸೆರಾಫಿಯರು ಇದ್ದರು. ಪ್ರತಿಯೊಬ್ಬನು ಆರಾರು ರೆಕ್ಕೆಯುಳ್ಳವನಾಗಿ ಎರಡರಿಂದ ತನ್ನ ಮುಖವನ್ನು ಎರಡರಿಂದ ತನ್ನ ಕಾಲುಗಳನ್ನು ಮುಚ್ಚಿಕೊಂಡು ಎರಡನ್ನು ಬಡೆಯುತ್ತಾ ನೆಲಸೋಕದೇ ನಿಂತಿದ್ದನು. ಆಗ ಒಬ್ಬನು ಮತ್ತೊಬ್ಬನಿಗೆ ಸೇನಾಧೀಶ್ವರನಾದ ಯೆಹೋವನು ಪರಿಶುದ್ಧನು. ಪರಿಶುದ್ಧನು. ಪರಿಶುದ್ಧನು. ಭೂಮಂಡಲವೆಲ್ಲಾ ಆತನ ಪ್ರಭಾವದಿಂದ ತುಂಬಿದೆ ಎಂದು ಕೂಗಿ ಹೇಳಿದನು.**

**ಸೂಚಕಕಾರ್ಯಗಳ ಉದ್ದೇಶ**

ಸತ್ಯವೇದದಲ್ಲಿರುವ ಸೂಚಕಕಾರ್ಯಗಳು ದೇವರ ಮಹಿಮೆಯ ಅಭಿವ್ಯಕ್ತಿಗಳಾಗಿವೆ.

ಯೇಸು ತಾನು ಮಾಡಿದ ಅದ್ಭುತಗಳ, ಮಹತ್ಕಾರ್ಯಗಳ ಮತ್ತು ಸೂಚಕಕಾರ್ಯಗಳ ಮೂಲಕ ದೇವರಿಂದ ಆತನು ಪ್ರಮಾಣೀಕರಿಸಲ್ಪಟ್ಟನು ಅಥವಾ ದೃಢೀಕರಿಸಲ್ಪಟ್ಟನು. "ದೃಢಿಕರಿಸಲ್ಪಟ್ಟನು" ಎಂದರೆ ಅಧಿಕೃತವಾಗಿ ಸಾಮರ್ಥ್ಯವುಳ್ಳವನು ಎಂದು ಪ್ರಮಾಣೀಕರಿಸುವುದು ಎಂದರ್ಥ.

**ಅಪೊಸ್ತಲರ ಕೃತ್ಯಗಳು 2:22 ಇಸ್ರಾಯೇಲ್ ಜನರೇ, ನನ್ನ ಮಾತುಗಳನ್ನು ಲಾಲಿಸಿರಿ - ನಜರೇತಿನ ಯೇಸು ಇದ್ದನಲ್ಲಾ, ದೇವರು ನಿಮಗೂ ತಿಳಿದಿರುವಂತೆ ಆತನ ಕೈಯಿದ ಮಹತ್ತುಗಳನ್ನೂ ಅದ್ಭುತಗಳನ್ನೂ ಸೂಚಕಕಾರ್ಯಗಳನ್ನೂ ನಿಮ್ಮಲ್ಲಿ ನಡಿಸಿ ಆತನನ್ನು ತನಗೆ ಮೆಚ್ಚಿಕೆಯಾದವನೆಂದು ನಿಮಗೆ ತೋರಿಸಿಕೊಟ್ಟನು.**

ಅದ್ಭುತಗಳನ್ನು ಮತ್ತು ಸೂಚಕಕಾರ್ಯಗಳನ್ನು ನೋಡಿ ಅನೇಕರು ನಂಬುತ್ತಾರೆ ಮತ್ತು ಆಶ್ಚರ್ಯಚಕಿತರಾಗುತ್ತಾರೆ.

**ಅಪೊಸ್ತಲರ ಕೃತ್ಯಗಳು 8:13 ಆಗ ಸೀಮೋನನ್ನು ಕೂಡ ನಂಬಿ ದೀಕ್ಷಾಸ್ನಾನಮಾಡಿಸಿಕೊಂಡು ಫಿಲಿಪ್ಪನ ಸಂಗಡ ಯಾವಾಗಲೂ ಇದ್ದು ಸೂಚಕಕಾರ್ಯಗಳೂ ಮಹತ್ಕಾರ್ಯಗಳೂ ಉಂಟಾಗುವದನ್ನು ನೋಡಿ ಬೆರಗಾದನು.**

ದೇವರು ತನ್ನ ಸೂಚಕಕಾರ್ಯಗಳ, ಮಹತ್ತುಗಳ ಮತ್ತು ಅದ್ಭುತಗಳ ಮೂಲಕ ಸಾಕ್ಷಿ ಕೊಡಲು ನಿರ್ಧರಿಸಿದ್ದಾನೆ.

**ಅಪೊಸ್ತಲರ ಕೃತ್ಯಗಳು 2:19 ಮೇಲೆ ಆಕಾಶದಲ್ಲಿ ಅದ್ಭುತಕಾರ್ಯಗಳನ್ನೂ, ಕೆಳಗೆ ಭೂಮಿಯಲ್ಲಿ ಸೂಚಕ ಕಾರ್ಯಗಳನ್ನೂ ಉಂಟುಮಾಡುವೆನು.**

**ಇಬ್ರಿಯ 2:4 ಮತ್ತು ದೇವರು ಅವರ ಕೈಯಿಂದ ಸೂಚಕಕಾರ್ಯಗಳನ್ನೂ ಅದ್ಭುತಕಾರ್ಯಗಳನ್ನೂ ನಾನಾ ವಿಧವಾದ ಮಹತ್ಕಾರ್ಯಗಳನ್ನು ನಡಿಸಿ ಪವಿತ್ರಾತ್ಮ ವರವನ್ನು ತನ್ನ ಚಿತ್ತಾನುಸಾರವಾಗಿ ಅವರಿಗೆ ಅನುಗ್ರಹಿಸಿ ಅವರ ಮಾತಿಗೆ ಸಾಕ್ಷಿಕೊಡುತ್ತಿದ್ದನು**

**ಯೇಸು ಮಾಡಿದ ಮೊದಲ ಸೂಚಕಕಾರ್ಯ**

ಯೇಸುವಿನ ಮೊದಲ ಅದ್ಭುತವು ನೀರನ್ನು ದ್ರಾಕ್ಷಾರಸವನ್ನಾಗಿ ಮಾಡಿದ್ದು, ಮತ್ತು ಸತ್ಯವೇದವು ಅದನ್ನು "ಸೂಚಕಕಾರ್ಯಗಳ ಆರಂಭ" ಎಂದು ಕರೆಯುತ್ತದೆ. ಸೂಚಕಕಾರ್ಯವು ಯಾವುದೊಂದು ಸಂಗತಿಯನ್ನು ತಿಳಿಸುತ್ತದೆ ಅಥವಾ ಸೂಚಿಸುತ್ತದೆ.

**ಯೋಹಾನ 2:7-11 ಯೇಸು ಅವರಿಗೆ ಆ ಬಾನೆಗಳಲ್ಲಿ ನೀರು ತುಂಬಿರಿ ಅನ್ನಲು ಅವುಗಳನ್ನು ಕಂಠದ ಮಟ್ಟಿಗೆ ತುಂಬಿದರು. ಆಗ ಅವರಿಗೆ - ಈಗ ಅದನ್ನು ತೋಡಿಕೊಂಡು ಹೋಗಿ ಔತಣದ ಪಾರುಪತ್ಯಗಾರನಿಗೆ ಕೊಡಿರಿ ಎಂದು ಹೇಳಿದಾಗ ತಕ್ಕೊಂಡು ಹೋಗಿ ಕೊಟ್ಟರು. ಅದು ಎಲ್ಲಿಂದ ಬಂತೋ ನೀರನ್ನು ತೋಡಿದ ಕೆಲಸದವರಿಗೆ ತಿಳಿದಿತ್ತೇ ಹೊರತು ಔತಣದ ಪಾರುಪತ್ಯಗಾರನಿಗೆ ತಿಳಿಯದಿರಲಾಗಿ ಅವನು ಅಷ್ಟರೊಳಗೆ ದ್ರಾಕ್ಷಾರಸವಾದ ಆ ನೀರನ್ನು ರುಚಿನೋಡಿದಾಗ, ಮದಲಿಂಗನನ್ನು ಕರೆದು - ಎಲ್ಲರೂ ಹಿರಿದಿನ ದ್ರಾಕ್ಷಾರಸವನ್ನು ಮೊದಲು ಕೊಟ್ಟು ಅಮಲೇರಿದ ಮೇಲೆ ಕಿರಿದಿನ ದ್ರಾಕ್ಷಾರಸವನ್ನು ಕೊಡುತ್ತಾರೆ. ನೀನು ಹಿರಿದಿನ ದ್ರಾಕ್ಷಾರಸವನ್ನು ಇದುವರೆಗೂ ಇಟ್ಟುಕೊಂಡಿದ್ದೀ ಅಂದನು. ಯೇಸು ಈ ಮೊದಲನೆಯ ಸೂಚಕಕಾರ್ಯವನ್ನು ಗಲಿಲಾಯದ ಕಾನಾ ಊರಿನಲ್ಲಿ ಮಾಡಿ ತನ್ನ ಮಹಿಮೆಯನ್ನು ತೋರ್ಪಡಿಸಿದನು. ಮತ್ತು ಆತನ ಶಿಷ್ಯರು ಆತನಲ್ಲಿ ನಂಬಿಕೆಯಿಟ್ಟರು.**

ನೀರನ್ನು ದ್ರಾಕ್ಷಾರಸವನ್ನಾಗಿ ಮಾಡಿದ ಈ ಅದ್ಭುತವು ನೈಸರ್ಗಿಕವಾದ ಕಾರ್ಯವನ್ನು ಅಸಾಧಾರಣವಾದ ಕಾರ್ಯವನ್ನಾಗಿ ಮಾಡಿದ ಅದ್ಭುತವಾಗಿತ್ತು. ಯೋಹಾನನ ಸುವಾರ್ತೆಯ ಎರಡನೆಯ

ಅಧ್ಯಾಯದಲ್ಲಿ, ನೈಸರ್ಗಿಕವಾದ ಕಾರ್ಯವನ್ನು ಅಸಾಧಾರಣವಾದ ಕಾರ್ಯವನ್ನಾಗಿ ಮಾಡಿದ ಈ ಸೂಚಕಕಾರ್ಯವು, ಯೋಹಾನ ಸುವಾರ್ತೆಯ ಮೂರನೆಯ ಅಧ್ಯಾಯದಲ್ಲಿ “ನೀವು ಹೊಸದಾಗಿ ಹುಟ್ಟಬೇಕು” ಎಂದು ಯೇಸು ಹೇಳಿರುವನು ಅದರ ಪ್ರಕಾರ ರೂಪಾಂತರಗೊಂಡಿರುವ ಜೀವನದ ಅದ್ಭುತಕಾರ್ಯವನ್ನು ಸೂಚಿಸುವಂಥ ಕಾರ್ಯವು ಸ್ವಾರಸ್ಯಕರವಾಗಿದೆ.

ಮಹಿಮೆಯ ಮೇಘಗಳು

ಆಳವಾದ ಆರಾಧನೆಯ ಸಮಯದಲ್ಲಿ ತೋರಿಬರುವಂಥ "ಮಹಿಮೆಯ ಮೇಘಗಳನ್ನು" ಅನೇಕರು ಅನುಭವಿಸಿದ್ದಾರೆ. ಅನೇಕರು ದೇವರ ಪ್ರಸನ್ನತೆಯ ಅತಿಶಯವಾದ ಮಹಿಮೆಯನ್ನು ಅನುಭವಿಸುತ್ತಿರುವ ಸಮಯದಲ್ಲಿ ಡಿಜಿಟಲ್ ಕ್ಯಾಮೆರಾಗಳಲ್ಲಿ ತೆಗೆದ ಚಿತ್ರಗಳಲ್ಲಿ ಈ ಅಭಿವ್ಯಕ್ತಿಗಳು ಅನೇಕವೇಳೆ ಕಂಡುಬರುತ್ತವೆ.

**ವಿಮೋಚನಕಾಂಡ 16:10 ಆರೋನನು ಇಸ್ರಾಯೇಲ ಸಮೂಹಕ್ಕೆಲ್ಲಾ ಈ ಮಾತುಗಳನ್ನು ತಿಳಿಸುತ್ತಿರುವಾಗ ಅವರು ಅರಣ್ಯದ ಕಡೆಗೆ ನೋಡಲಾಗಿ ಮೇಘದಲ್ಲಿ ಯೆಹೋವನ ತೇಜಸ್ಸು ಅವರಿಗೆ ಕಾಣಿಸಿತು.**

**ವಿಮೋಚನಕಾಂಡ 24:15 ಮೋಶೆ ಬೆಟ್ಟವನ್ನು ಹತ್ತಿದಾಗ ಮೇಘವು ಅದನ್ನು ಮುಚ್ಚಿಕೊಂಡಿತು.**

**ವಿಮೋಚನಕಾಂಡ 40:34-38 ಆಗ ಮೇಘವು ದೇವದರ್ಶನದ ಗುಡಾರವನ್ನು ಮುಚ್ಚಿತು; ಯೆಹೋವನ ತೇಜಸ್ಸು ಗುಡಾರವನ್ನು ತುಂಬಿತು. ಮೇಘವು ದೇವದರ್ಶನದ ಗುಡಾರದ ಮೇಲೆ ನೆಲೆಯಾಗಿರುವದರಿಂದಲೂ ಯೆಹೋವನ ತೇಜಸ್ಸು ಗುಡಾರದೊಳಗೆ ತುಂಬಿರುವದರಿಂದಲೂ ಮೋಶೆ ಗುಡಾರದಲ್ಲಿ ಹೋಗಲಾರದೆ ಇದ್ದನು. ಆ ಮೇಘವು ಗುಡಾರವನ್ನು ಬಿಟ್ಟು ಮೇಲಕ್ಕೆ ಹೋದಾಗ ಇಸ್ರಾಯೇಲ್ಯರು ಮುಂದೆ ಪ್ರಯಾಣ ಮಾಡುವರು; ಆ ಮೇಘವು ಬಿಡದೆ ಇರುವಾಗ ಅದು ಬಿಡುವ ತನಕ ಪ್ರಯಾಣಮಾಡದೆ ಇರುವರು. ಇಸ್ರಾಯೇಲ್ಯರ ಎಲ್ಲಾ ಪ್ರಯಾಣಗಳಲ್ಲಿಯೂ ಅವರ ಕಣ್ಣ ಮುಂದೆ ಹಗಲು ಹೊತ್ತಿನಲ್ಲಿ ಯೆಹೋವನ ಮೇಘವು ಗುಡಾರದ ಮೇಲೆ ಇತ್ತು; ರಾತ್ರಿ ವೇಳೆಯಲ್ಲಿ ಆ ಮೇಘದೊಳಗೆ ಅಗ್ನಿಯು ಪ್ರಕಾಶಿಸುತ್ತಿತ್ತು.**

**ಮತ್ತಾಯ 17:5 ಹೀಗೆ ಮಾತಾಡುತ್ತಿರುವಾಗಲೇ ಕಾಂತಿಯುಳ್ಳ ಮೋಡವು ಅವರ ಮೇಲೆ ಕವಿಯಿತು. ಇದಲ್ಲದೆ ಆ ಮೋಡದೊಳಗಿಂದ ಈತನು ಪ್ರಿಯನಾಗಿರುವ ನನ್ನ ಮಗನು ಈತನನ್ನು ನಾನು ಮೆಚ್ಚಿದ್ದೇನೆ ಈತನ ಮಾತನ್ನು ಕೇಳಿರಿ ಎಂಬ ಆಕಾಶವಾಣಿ ಆಯಿತು.**

ಬೆಂಕಿಯ ಅಭಿವ್ಯಕ್ತಿ

ದೇವರ ಮಹಿಮೆಯು ಸಾಂದರ್ಭಿಕವಾಗಿ ಬೆಂಕಿಯ ಜ್ವಾಲೆಗಳಾಗಿ ತೋರಿಬರುತ್ತದೆ. ಮಹಿಮೆಯ ಮೇಘಗಳ ವಿಷಯದಲ್ಲಿ ಅನೇಕಸಾರಿ ಡಿಜಿಟಲ್ ಕ್ಯಾಮೆರಾಗಳಲ್ಲಿ ತೆಗೆದ ಚಿತ್ರಗಳಲ್ಲಿ ರೇಖೆಗಳು ಅಥವಾ ಬೆಂಕಿಯ ಚೆಂಡುಗಳು ಕಾಣಬರುತ್ತವೆ.

**ಯಾಜಕಕಾಂಡ 9:23,24 ತರುವಾಯ ಮೋಶೆಯೂ ಆರೋನನೂ ದೇವದರ್ಶನದ ಗುಡಾರದೊಳಗೆ ಹೋದರು. ಅವರು ಅಲ್ಲಿಂದ ಹೊರಗೆ ಬಂದಾಗ ಜನರನ್ನು ಆಶೀರ್ವದಿಸಿದರು. ಆಗ ಯೆಹೋವನ ಮಹಿಮೆಯನ್ನು ಜನರೆಲ್ಲರಿಗೆ ಪ್ರತ್ಯಕ್ಷವಾಯಿತು. ಯೆಹೋವನ ಸನ್ನಿಧಿಯಿಂದ ಬೆಂಕಿಯು ಹೊರಟು ಯಜ್ಞವೇದಿಯ ಮೇಲಿದ್ದ ಸರ್ವಾಂಹೋಮ ದ್ರವ್ಯವನ್ನೂ ಕೊಬ್ಬನ್ನೂ ದಹಿಸಿಬಿಟ್ಟಿತು. ಜನರೆಲ್ಲರೂ ಅದನ್ನು ಕಂಡು ಉತ್ಸಾಹದಿಂದ ಆರ್ಬಟಿಸಿ ಅಡ್ಡಬಿದ್ದು ನಮಸ್ಕರಿಸಿದರು.**

**1 ಅರಸುಗಳು 18:24 (ಎಲೀಯ) ನೀವು ನಿಮ್ಮ ದೇವರ ಹೆಸರು ಹೇಳಿ ಪ್ರಾರ್ಥಿಸಿರಿ ಅನಂತರ ನಾನು ಯೆಹೋವನ ಹೆಸರು ಹೇಳಿ ಪ್ರಾರ್ಥಿಸುವೆನು. ಆ ಇಬ್ಬರಲ್ಲಿ ಯಾವನು ಲಾಲಿಸಿ ಬೆಂಕಿಯನ್ನು ಕಳುಹಿಸುವನೋ ಅವನೇ ದೇವರೆಂದೂ ನಿಶ್ಚಯಿಸೋಣ ಅಂದನು. ಎಲ್ಲಾ ಜನರು ಸರಿ ನೀನು ಹೇಳಿದಂತೆಯೇ ಆಗಲಿ ಎಂದು ಉತ್ತರ ಕೊಟ್ಟರು.**

**ವಚನ 38,39 ಕೂಡಲೇ ಯೆಹೋವನ ಕಡೆಯಿಂದ ಬೆಂಕಿಬಿದ್ದು ಯಜ್ಞ ಮಾಂಸವನ್ನೂ ಕಟ್ಟಿಗೆ ಕಲ್ಲು ಮಣ್ಣುಗಳನ್ನೂ ದಹಿಸಿಬಿಟ್ಟು ಕಾಲಿವೆಯಲ್ಲಿದ್ದ ನೀರನ್ನೆಲ್ಲಾ ಹೀರಿಬಿಟ್ಟಿತು. ಜನರೆಲ್ಲರೂ ಅದನ್ನು ಕಂಡು ಬೋರ್ಲಬಿದ್ದು ಯೆಹೋವನೇ ದೇವರು ಯೆಹೋವನೇ ದೇವರು ಎಂದು ಕೂಗಿದರು.**

**2 ಪೂರ್ವಕಾಲವೃತ್ತಾಂತ 7:1 ಸೊಲೊಮೋನನು ಪ್ರಾರ್ಥಿಸುವದನ್ನು ಮುಗಿಸಿದ ಕೂಡಲೆ ಆಕಾಶದಿಂದ ಬೆಂಕಿಬಿದ್ದು...**

**ಯೆಶಾಯ 4:4,5 ಆಗ ಕರ್ತನಾದ ಯೆಹೋವನು ನ್ಯಾಯತೀರ್ಪಿನ ಆತ್ಮದಿಂದಲೂ ದಹಿಸುವ ಆತ್ಮದಿಂದಲೂ ಚೀಯೋನಿನ ಸ್ತ್ರೀಯರ ಕಲ್ಮಷವನ್ನೂ ಯೆರೂಸಲೇಮಿನ ಮಧ್ಯದಲ್ಲಿನ ರಕ್ತವನ್ನೂ ತೊಳೆದುಬಿಟ್ಟ ಮೇಲೆ ಚೀಯೋನ ಪರ್ವತದ ಸಂಪೂರ್ಣ ಮಂದಿರದ ಮೇಲೆಯೂ ಹಗಲಲ್ಲಿ ಧೂಮಮೇಘವನ್ನೂ ಇರುಳಲ್ಲಿ ಪ್ರಜ್ವಲಿಸುವ**

ಅಗ್ನಿಯ ಪ್ರಕಾಶವನ್ನೂ ಉಂಟುಮಾಡುವನು. ಈ ಪ್ರಭಾವದ ಮೇಲೆಲ್ಲಾ ಆವರಣವಿರುವದು.

ಗುಡುಗು ಮತ್ತು ಮಿಂಚು

**ವಿಮೋಚನಕಾಂಡ 19:16 ಮೂರನೆಯ ದಿನದಲ್ಲಿ ಸೂರ್ಯೋದಯವಾಗುವಾಗ ಆ ಬೆಟ್ಟದ ಮೇಲೆ ಗುಡುಗು ಮಿಂಚೂ ಕಾರ್ಮುಗಿಲೂ ತುತೂರಿ ಮಹಾಧ್ವನಿಯೂ ಉಂಟಾಗಲು ಪಾಳೆಯಲ್ಲಿದ್ದ ಜನರೆಲ್ಲರೂ ನಡುಗಿದರು.**

**ಪ್ರಕಟನೆ 4:5 ಸಿಂಹಾಸನದೊಳಗಿಂದ ಮಿಂಚುಗಳು ವಾಣಿಗಳು ಗುಡುಗುಗಳೂ ಹೊರಡುತ್ತವೆ. ಅದರ ಮುಂದೆ ದೇವರ ಏಳು ಆತ್ಮಗಳನ್ನು ಸೂಚಿಸುವ ಏಳು ದೀಪಗಳು ಉರಿಯುತ್ತಿದ್ದವು.**

ತೈಲದ ಅಭಿವ್ಯಕ್ತಿ (ಅಭಿಷೇಕ)

ಅನೇಕರು ತಮ್ಮ ಕೈ, ಕಾಲು ಅಥವಾ ಚರ್ಮದ ಇತರ ಭಾಗಗಳಿಂದ ತೈಲವು ಹರಿಯುವಂಥ ಅಭಿವ್ಯಕ್ತಿಯನ್ನು ಅನುಭವಿಸಿದ್ದಾರೆ. ತೈಲವನ್ನು ಅಭಿಷೇಕಕ್ಕಾಗಿ ಬಳಸಲಾಗುತ್ತಿತ್ತು.

**ವಿಮೋಚನಕಾಂಡ 30:25 ಬುಕ್ಕಿಟ್ಟುಗಾರರ ಪದ್ಧತಿಯ ಮೇರೆಗೆ ಮಿಶ್ರಮಾಡಿ ದೇವರ ಸೇವೆಗಾಗಿ ಅಭೀಷೇಕತೈಲವನ್ನು ಮಾಡಿಸಬೇಕು.**

**ವಚನ 30,31. ಅದಲ್ಲದೆ ಆರೋನನೂ ಅವನ ಮಕ್ಕಳೂ ನನಗೆ ಯಾಜಕರಾಗುವಂತೆ ಅವರನ್ನು ಅಭೀಷೇಕಿಸಿ ಪ್ರತಿಷ್ಠಿಸಬೇಕು. ನೀನು ಇಸ್ರಾಯೇಲ್ಯರಿಗೆ ಆಜ್ಞಾಪಿಸತಕ್ಕದ್ದೇನಂದರೆ, ನೀವೂ ನಿಮ್ಮ ಸಂತತಿಯವರೂ ಈ ತೈಲವನ್ನು ನನ್ನ ಸೇವೆಗೆ ನೇಮಕವಾದ ಅಭಿಷೇಕ ತೈಲವೆಂದು ತಿಳಿದುಕೊಳ್ಳಬೇಕು.**

ಕೆಲವು ಸಂದರ್ಭಗಳಲ್ಲಿ, ತೈಲವು ಚಿನ್ನದಂಥ ಬಣ್ಣದಲ್ಲಿ ತೋರಿಬರುತ್ತದೆ.

**ಜೆಕರ್ಯ 4:11,12 ಇದನ್ನು ಕೇಳಿ ನಾನು ದೇವದೂತನನ್ನು ದೀಪಸ್ತಂಭದ ಎಡಬಲದಲ್ಲಿರುವ ಈ ಎಣ್ಣೆಯ ಮರಗಳು ಏನು ಎಂದು ಪ್ರಶ್ನೆ ಮಾಡಿ ಮತ್ತೇ ಅವನನ್ನು ತಮ್ಮೊಳಗಿಂದ ಚಿನ್ನದಂಥ ಎಣ್ಣೆಯನ್ನು ಪಾತ್ರೆಯಲ್ಲಿ ತುಂಬಿಸುವ ಎರಡು ಬಂಗಾರದ ನಾಳಗಳಿವೆಯಲ್ಲಾ. ಆ**

ನಾಳಗಳ ಬಾಯಿಗೆ ಸೇರಿರುವ ಎರಡು ಎಣ್ಣೆಕಾಯಿ ಗುತ್ತಿಗಳು ಏನು ಎಂದು ವಿಚಾರಿಸದ್ದಕ್ಕೆ,

## ಚಿನ್ನದ ಅಭಿವ್ಯಕ್ತಿ

ದೇವರ ಅಗಾಧವಾದ ಪ್ರಸನ್ನತೆಯಲ್ಲಿ ಆರಾಧನೆ ಮಾಡುವ ಸಮಯದಲ್ಲಿ ಮಹಿಮೆಯ ಚಿನ್ನದಂಥ ಪುಡಿಯು ಕೆಲವೊಮ್ಮೆ ತೋರಿಬರುತ್ತದೆ.

**ಯೋಬ 28:5,6 ಭೂಮಿಯು ಅನ್ನವನ್ನು ಕೊಡುವದು, ಅದರ ಕೆಳಭಾಗವು ಬೆಂಕಿಬಿದ್ದಂತೆ ಹಾಳಾಗಿರುವದು. ಅದರ ಕಲ್ಲುಗಳಲ್ಲಿ ಇಂದ್ರನೀಲ ಮಣಿಗಳು ಸಿಕ್ಕುವವು, ಅದರಲ್ಲಿ ಚಿನ್ನದ ಪುಡಿಯೂ ಇರುವದು.**

ಯೆಹೂದ್ಯ ಸಂಪ್ರದಾಯದ ಪ್ರಕಾರ, ಮದುಮಗನು ತನ್ನ ವಧುವಿನ ಬಳಿಗೆ ಬರುವುದಕ್ಕಿಂತ ಮೊದಲು ಮಾಡುವ ಕೊನೆಯ ಕೆಲಸವು ಚಿನ್ನದ ಉಡುಗೊರೆಯನ್ನು ಕಳುಹಿಸುವುದ್ದಾಗಿರುತ್ತದೆ. ರೆಬೆಕ್ಕಳು ಇಸಾಕನನ್ನು ಮದುವೆಯಾಗಲು ಒಪ್ಪಿದಾಗ ಚಿನ್ನದ ಉಡುಗೊರೆಗಳನ್ನು ಕೊಡಲಾಯಿತು.

**ಆದಿಕಾಂಡ 24:15 ಅವನು ಹೀಗೆ ಅಂದುಕೊಳ್ಳುತ್ತಿರುವಾಗಲೇ ಅಬ್ರಹಾಮನ ತಮ್ಮನಾದ ನಾಹೋರನ ಹೆಂಡತಿಯಾಗಿರುವ ಮಿಲ್ಕಳ ಮಗನಾದ ಬೆತೂವೇಲನಿಗೆ ಹುಟ್ಟಿದ ರೆಬೆಕ್ಕಳು ಹೆಗಲಿನ ಮೇಲೆ ಕೊಡವನ್ನಿಟ್ಟುಕೊಂಡು ಊರ ಹೊರಗೆ ಬರುವದನ್ನು ಕಂಡನು.**

**ವಚನ 53 ಆ ಮೇಲೆ ತಾನು ತಂದಿದ್ದ ಬೆಳ್ಳಿ ಬಂಗಾರದ ಒಡವೆಗಳನ್ನೂ ವಸ್ತ್ರಗಳನ್ನೂ ತೆಗೆದು ರೆಬೆಕ್ಕಳಿಗೆ ಕೊಟ್ಟನು. ಆಕೆಯ ಅಣ್ಣನಿಗೂ ತಾಯಿಗೂ ಸಹ ಬೆಲೆಯುಳ್ಳ ಊಡುಗೆರೆಗಳನ್ನು ಕೊಟ್ಟನು.**

ಅಬ್ರಹಾಮನ “ಅನಾಮಿಕನಾದ” ಸೇವಕನು ಪವಿತ್ರಾತ್ಮನ ಕಾರ್ಯಕ್ಕೆ ಒಂದು ಹೋಲಿಕೆಯಾಗಿದ್ದಾನೆ. ಯೇಸುವಿಗೆ ಹೋಲಿಕೆಯಾಗಿರುವ ಇಸಾಕನನ್ನು ಮದುವೆಯಾಗಲು ಅವಳು ಒಪ್ಪಿಕೊಂಡ ನಂತರ ಅವನು ವಧುವಾದ ರೆಬೆಕ್ಕಳಿಗೆ ಚಿನ್ನವನ್ನು ಕೊಟ್ಟನು.

**ಯೋಬ 22: 24,25 ನಿನ್ನ ಚಿನ್ನವನ್ನು ಧೂಳಿನಲ್ಲಿ ಹಾಕು, ಓಫೀರ್ ದೇಶದ ಅಪರಂಜಿಯನ್ನು ಹೊಳೆಗಳ ಬಂಡೆಗಳಿಗೆ ಎಸೆದುಬಿಡು.**

ಸರ್ವಶಕ್ತನು ನಿನಗೆ ಚಿನ್ನವಾಗಿಯೂ ಬೆಳ್ಳಿಯ ರಾಶಿಗಳಾಗಿಯೂ ಇರುವನು;

ಕೀರ್ತನೆ 68:13 ನೀವು ಕುರಿಹಟ್ಟಿಗಳಲ್ಲಿ ಮಲಗಿಕೊಂಡಿರುವದೇನು? ಪಾರಿವಾಳದ ರೆಕ್ಕೆಗಳು ಬೆಳ್ಳಿಯಿಂದಲು ಅದರ ಗರಿಗಳು ಬಂಗಾರದಿಂದಲೂ ಥಳಥಳಿಸುತ್ತವೆ.

ಹಗ್ಗಾಯ 2:7-9 ಆಗ ಸಮಸ್ತ ಜನಾಂಗಗಳ ಇಷ್ಟ ವಸ್ತುಗಳು ಬಂದು ಒದಗಲು ಈ ಆಲಯದ ವೈಭವದಿಂದ ತುಂಬಿಸುವೆನು. ಇದು ಸೇನಾಧೀಶ್ವರನಾದ ಯೆಹೋವನ ನುಡಿ. ಬೆಳ್ಳಿಯೆಲ್ಲಾ ನನ್ನದು ಬಂಗಾರವೆಲ್ಲಾ ನನ್ನದು ಇದು ಸೇನಾಧೀಶ್ವರನಾದ ಯೆಹೋವನ ನುಡಿ. ಈ ಆಲದಯದ ಮುಂದಿನ ವೈಭವವು ಹಿಂದಿನ ವೈಭವವಕ್ಕಿಂತ ವಿಶೇಷವಾಗಿರುವದು. ಇದು ಸೇನಾದೀಶ್ವರನಾದ ಯೆಹೋವನ ನುಡಿ. ಈ ಸ್ಥಳದಲ್ಲಿ ಸಮಾಧಾನವನ್ನು ಅನುಗ್ರಹಿಸುವೆನು. ಇದು ಸೇನಾಧೀಶ್ವರನಾದ ಯೆಹೋವನ ನುಡಿ.

ಪ್ರಕಟನೆ 21:18,21 ಆ ಪ್ರಾಕಾರವು ಸೂರ್ಯಕಾಂತಶಿಲೆಯಿಂದ ಕಟ್ಟಲ್ಪಟ್ಟಿತ್ತು ಪಟ್ಟಣವು ಶುದ್ಧ ಗಾಜಿನಂತಿರುವ ಸೋಸಿದ ಬಂಗಾರವೇ.

ವಚನ 21 ಹನ್ನೆರಡು ಹೆಬ್ಬಾಗಿಲುಗಳು ಹನ್ನೇರಡು ಮುತ್ತುಗಳಾಗಿದ್ದವು. ಒಂದೊಂದು ಬಾಗಿಲು ಒಂದೊಂದು ಮುತ್ತಿನಿಂದ ಮಾಡಲ್ಪಟ್ಟಿತ್ತು. ಪಟ್ಟಣದ ಬೀದಿಯು ಸ್ವಚ್ಛವಾದ ಗಾಜಿನಂತಿರುವ ಸೋಸಿದ ಬಂಗಾರವಾಗಿತ್ತು.

## ರತ್ನಗಳ ಅಭಿವ್ಯಕ್ತಿ

ಹಲವಾರು ಸಂದರ್ಭಗಳಲ್ಲಿ, ದೇವರ ಪ್ರಸನ್ನತೆಯ ಅಗಾಧ ಮಹಿಮೆಯ ತೋರಿಬರುವ ಸಮಯದಲ್ಲಿ ಸುಂದರವಾದ ರತ್ನಗಳು ಬಿದ್ದಿವೆ.

ಅವನ ಮೂಲ ಸ್ಥಿತಿಯಲ್ಲಿ "ನೆರಳು ಕೊಡುವ ಅಭಿಷಿಕ್ತ ಕೆರೂಬಿ," ಕೆಂಡದ ಮಳೆಯ ಮಧ್ಯೆ ಹಿಂದಕ್ಕೆ ಮತ್ತು ಮುಂದಕ್ಕೆ ನಡೆದುಕೊಂಡು ಹೋಗುತ್ತಿದ್ದಾಗ ಸ್ವರ್ಗದ ಸಿಂಹಾಸನ ಕೋಣೆಯಲ್ಲಿ ಲೂಸಿಫರನ ಸೇವೆಯ ತೋರಿಬರುವ ವಿವರಣೆಯಿದೆ.

**ಯೆಹೆಜ್ಕೇಲ 28:11-14** ಯೆಹೋವನು ಇನ್ನೊಂದು ವಾಕ್ಯವನ್ನು ನನಗೆ ದಯಪಾಲಿಸಿದನು - ನರಪುತ್ರನೇ, ನೀನು ತೂರಿನ ಅರಸನ ವಿಷಯದಲ್ಲಿ ಶೋಕಗೀತವನ್ನೆತ್ತು, ಅವನಿಗೆ ಹೀಗೆ ನುಡಿ – ಕರ್ತನಾದ ಯೆಹೋವನು ಇಂತೆನ್ನುತ್ತಾನೆ – ನೀನು ಸರ್ವ ಸುಲಕ್ಷಣ ಶಿರೋಮಣಿ, ಪೂರ್ಣಜ್ಞಾನಿ, ಪರಿಪೂರ್ಣಸುಂದರ. ದೇವರ ಉದ್ಯಾನವನವಾದ ಏದೆನಿನಲ್ಲಿ ನೀನಿದ್ದಿ; ಮಾಣಿಕ್ಯ ಪುಷ್ಯರಾಗ ಪಚ್ಚೆ ಪೀತರತ್ನ ಬೆರುಲ್ಲ ವೈಡೂರ್ಯ ನೀಲ ಕೆಂಪರಲು ಸ್ಫಟಿಕ ಈ ನವರತ್ನಗಳಿಂದ ಭೂಷಿತವಾಗಿದ್ದೀ; ನಿನ್ನಲ್ಲಿನ (ಈ ರತ್ನಗಳ) ಗೂಡುಗಳೂ ಮನೆಗಳೂ ಸುವರ್ಣರಚಿತವಾಗಿದ್ದವು; ನಿನ್ನ ಸೃಷ್ಟಿಯ ದಿನದಲ್ಲಿ ಸಿದ್ಧವಾದವು. ನೀನು ರೆಕ್ಕೆತೆರೆದು ನೆರಳು ಕೊಡುವ ಕೆರೂಬಿಯಾಗಿದ್ದಿ; ನಾನು ನಿನ್ನನ್ನು ದೇವರ ಪರಿಶುದ್ಧಪರ್ವತದಲ್ಲಿ ನೆಲೆಗೊಳಿಸಿದೆನು; ನೀನು ಕೆಂಡದ ಮಳೆಯಲ್ಲಿ ವಿಹಾರಮಾಡುತ್ತಾ ಇದ್ದಿ.

"ಕೆಂಡದ ಮಳೆ" ಪರಲೋಕದ ಸಿಂಹಾಸನ ಕೋಣೆಯಲ್ಲಿರುವ ವಿಪುಲವಾದ ಅಮೂಲ್ಯ ರತ್ನಗಳನ್ನು ಸೂಚಿಸುತ್ತವೆ, ಅದು ದೇವರಿಂದ ಹೊರಹೊಮ್ಮುವ ಮಹಿಮಾನ್ವಿತವಾದ ಬೆಳಕನ್ನು ಪ್ರತಿಬಿಂಬಿಸುತ್ತದೆ.

**ಪ್ರಕಟನೆ 21:10,11, 18-21** ದೇವರಾತ್ಮವಶನಾದ ನನ್ನನ್ನು ಎತ್ತರವಾದ ದೊಡ್ಡ ಬೆಟ್ಟಕ್ಕೆ ಎತ್ತಿಕೊಂಡು ಹೋಗಿ ಯೆರೂಸಲೇಮೆಂಬ ಪರಿಶುದ್ದ ಪಟ್ಟಣವು ದೇವರ ತೇಜಸ್ಸುಳ್ಳದ್ದಾಗಿ ಪರಲೋಕದೊಳಗಿಂದ ದೇವರ ಕಡೆಯಿಂದ ಇಳಿದುಬರುವದನ್ನು ನನಗೆ ತೋರಿಸಿದನು. ಪಟ್ಟಣದ ಪ್ರಕಾಶವು ಅಮೂಲ್ಯರತ್ನದ ಪ್ರಕಾಶಕ್ಕೆ ಸಮಾನವಾಗಿತ್ತು. ಥಳಥಳಿಸುವ ವಜ್ರವೋ ಎಂಬಂತೆ ಕಾಣಿಸಿತು...

**18-21** ಆ ಪ್ರಾಕಾರವು ಸೂರ್ಯಕಾಂತಶಿಲೆಯಿಂದ ಕಟ್ಟಲ್ಪಟ್ಟಿತ್ತು ಪಟ್ಟಣವು ಶುದ್ದ ಗಾಜಿನಂತಿರುವ ಸೋಸಿದ ಬಂಗಾರವೇ. ಪಟ್ಟಣದ ಪ್ರಾಕಾರದ ಅಸ್ತಿವಾರಗಳು ಸಕಲ ವಿಧವಾದ ರತ್ನಗಳಿಂದ ಅಲಂಕೃತವಾಗಿದ್ದವು. ಮೊದಲನೆಯ ಅಸ್ತಿವಾರವು ವಜ್ರ ಎರಡನೇಯದು ವೈಡೂರ್ಯ ಮೂರನೆಯದು ಪಚ್ಚೆ. ನಾಲ್ಕನೆಯದು ಪದ್ಮರಾಗ, ಐದನೆಯದು ಗೋಮೇಧಿಕ, ಆರನೇಯದು ಮಣಿಕ್ಯ. ಏಳನೇಯದು ಪೀತರತ್ನ. ಎಂಟನೇಯದು ಬೆರುಲ್ಲ. ಒಂಬತ್ತನೇಯದು ಪುಷ್ಪರಾಗ ಹತ್ತನೇಯದು ಗರುಡಪಚ್ಚೆ, ಹನ್ನೊಂದನೇದು ಇಂದ್ರನೀಲ, ಹನ್ನೆರಡನೇದು ನೀಲಸ್ಪಟಿಕ,

ಹನ್ನೆರಡು ಹೆಬ್ಬಾಗಿಲುಗಳು ಹನ್ನೆರಡು ಮುತ್ತುಗಳಾಗಿದ್ದವು. ಒಂದೊಂದು ಬಾಗಿಲು ಒಂದೊಂದು ಮುತ್ತಿನಿಂದ ಮಾಡಲ್ಪಟ್ಟತ್ತು. ಪಟ್ಟಣದ ಬೀದಿಯು ಸ್ವಚ್ಛವಾದ ಗಾಜಿನಂತಿರುವ ಸೋಸಿದ ಬಂಗಾರವಾಗಿತ್ತು.

"ವಧು" ವು ಆಭರಣಗಳಿಂದ ಅಲಂಕರಿಸಿಕೊಂಡಿದ್ದಾಳೆ ಎಂದು ಯೆಶಾಯ ವಿವರಿಸುತ್ತಾನೆ.

**ಯೆಶಾಯ 61:10 ನಾನು ಯೆಹೋವನಲ್ಲಿ ಪರಮಾನಂದಪಡುವೆನು, ನನ್ನ ಆತ್ಮವು ನನ್ನ ದೇವರಲ್ಲಿ ಹಿಗ್ಗುವದು; ವರನು ಬಾಸಿಂಗವನ್ನು ಧರಿಸಿಕೊಳ್ಳುವಂತೆಯೂ ವಧುವು ತನ್ನನ್ನು ಆಭರಣಗಳಿಂದ ಅಲಂಕರಿಸಿಕೊಳ್ಳುವ ಹಾಗೂ ಆತನು ನನಗೆ ರಕ್ಷಣೆಯೆಂಬ ವಸ್ತ್ರವನ್ನು ಹೊದಿಸಿ ಧರ್ಮವೆಂಬ ನಿಲುವಂಗಿಯನ್ನು ತೊಡಿಸಿದ್ದಾನಲ್ಲಾ.**

ರೆಕ್ಕೆಗಳ ಅಭಿವ್ಯಕ್ತಿ

ದೇವರ ಅಗಾಧ ಉಪಸ್ಥಿತಿಯ ವೈಭವದ ಕ್ಷೇತ್ರದಲ್ಲಿ ಗರಿಗಳು ಬೀಳುತ್ತವೆ ಎಂದು ತಿಳಿದುಬಂದಿದೆ.

**ಕೀರ್ತನೆ 91: 4 ತನು ನಿನ್ನನ್ನು ತನ್ನ ರೆಕ್ಕೆಗಳಿಂದ ಹೊದಗಿಸುವನು; ಆತನ ಪಕ್ಕಗಳ ಮರೆಯನ್ನು ಆಶ್ರಯಿಸಿಕೊಳ್ಳುವಿ. ಆತನ ಸತ್ಯತೆಯೇ ನಿನಗೆ ಖೇಡ್ಯವೂ ಗುರಾಣಿಯೂ ಆಗಿದೆ.**

**ವಿಮೋಚನಕಾಂಡ 19:4 ಏನೆಂದರೆ ನಾನು ಐಗುಪ್ತರಿಗೆ ಏನು ಮಾಡಿದೆನೋ ಹದ್ದು ತನ್ನ ಮರಿಗಳನ್ನು ರೆಕ್ಕೆಗಳ ಮೇಲೆ ಹೊತ್ತುಕೊಳ್ಳುವಂತೆ ನಾನು ನಿಮ್ಮನ್ನು ಹೊತ್ತುಕೊಂಡು ನನ್ನ ಸ್ಥಳಕ್ಕೆ ಹೇಗೆ ಸೇರಿದೆನೋ ಇದನ್ನೆಲ್ಲಾ ನೀವು ನೋಡಿದ್ದೀರಷ್ಟೆ.**

**ಮಲಾಚಿ 4: 2 ನನ್ನ ನಾಮದಲ್ಲಿ ಭಯಭಕ್ತಿಯಿಟ್ಟಿರುವ ನಿಮಗೋ ದೇವರ ಧರ್ಮವೆಂಬ ಸೂರ್ಯನು ಸ್ವಸ್ಥತೆಯನ್ನುಂಟುಮಾಡುವ ಕಿರಣಗಳುಳ್ಳವನಾಗಿ ಮೂಡುವನು. ಕೊಟ್ಟಿಗೆಯಿಂದ ಬಿಟ್ಟ ಕರುಗಳಂತೆ ನೀವು ಹೊರಟು ಬಂದು ಕುಣಿದಾಡುವಿರಿ. ದುಷ್ಟರನ್ನು ತುಳಿದುಬಿಡುವಿರಿ.**

**ಕೀರ್ತನೆ 17:8 ನನ್ನನ್ನು ಸುತ್ತಿಕೊಂಡು ಬಾಧಿಸುತ್ತಿರುವ ದುಷ್ಟರಿಂದಲೂ ಪ್ರಾಣ ವೈರಿಗಳಿಂದಲೂ ತಪ್ಪಿಸಿದಿ,**

**ಮತ್ತಾಯ 23:37 ಅಯ್ಯೋ ಕಪಟಿಗಳಾದ ಶಾಸ್ತ್ರಿಗಳೇ ಫರಿಸಾಯರೇ ನೀವು ಸುಣ್ಣಾ ಹಚ್ಚಿದ ಸಮಾಧಿಗಳಿಗೆ ಹೋಲಿಕೆಯಾಗಿದ್ದೀರಿ. ಇವು ಹೊರಗೆ ಚಂದವಾಗಿ ಕಾಣುತ್ತವೆ. ಒಳಗೆ ನೋಡಿದರೆ ಸತ್ತವರ ಎಲುಬುಗಳಿಂದಲೂ ಎಲ್ಲಾ ಹೊಲಸಿನಿಂದಲೂ ತುಂಬಿರುತ್ತವೆ.**

**ಕೀರ್ತನೆ 36:7 ದೇವರೇ, ನಿನ್ನ ಪ್ರೀತಿ ಎಷ್ಟೋ ಅಮೂಲ್ಯವಾದದ್ದು; ಮಾನವರು ನಿನ್ನ ರೆಕ್ಕೆಗಳ ಮರೆಯನ್ನು ಆಶ್ರಯಿಸಿಕೊಳ್ಳುತ್ತಾರೆ.**

ರೆಕ್ಕೆಗಳ ಅಭಿವ್ಯಕ್ತಿ ದೇವದೂತರ ಪ್ರಸನ್ನತೆಯನ್ನು ಸಹ ಸೂಚಿಸುತ್ತದೆ.

**ಪರಿಮಳದ ಅಭಿವ್ಯಕ್ತಿ**

ಅಪೊಸ್ತಲನಾದ ಪೌಲನು ನಮ್ಮನ್ನು "ಕ್ರಿಸ್ತನ ಪರಿಮಳ" ಎಂದು ಸೂಚಿಸಿದ್ದಾನೆ.

**2 ಕೊರಿಂಥ 2:14-16 ಕ್ರಿಸ್ತನ ಅನ್ಯೋನ್ಯತೆಯಲ್ಲಿ ನಮ್ಮನ್ನು ಯಾವಾಗಲೂ ಜಯೋತ್ಸವದೊಡನೆ ಮೆರೆಸುತ್ತಾ ಆತನ ವಿಷಯವಾದ ಜ್ಞಾನವೆಂಬ ಸುವಾಸನೆಯನ್ನು ನಮ್ಮ ಮೂಲಕ ಎಲ್ಲಾ ಸ್ಥಳಗಳಲ್ಲಿ ವ್ಯಾಪನಗೊಳಿಸುತ್ತಾ ಬರುವ ದೇವರಿಗೆ ಸ್ತೋತ್ರವು. ರಕ್ಷಣಾ ಮಾರ್ಗದಲ್ಲಿರುವವರಲ್ಲಿಯೂ ನಾಶನ ಮಾರ್ಗದಲ್ಲಿರುವವರಲ್ಲಿಯೂ ನಾವು ದೇವರ ಮುಂದೆಯೂ ಕ್ರಿಸ್ತನ ಪರಿಮಳವಾಗಿದ್ದೇವೆ. ನಾವು ನಾಶನ ಮಾರ್ಗದಲ್ಲಿರುವವರಿಗೆ ಮರಣದಿಂದ ಹುಟ್ಟಿ ಮರಣವನ್ನು ಹುಟ್ಟಿಸುವ ವಾಸನೆಯಾಗಿಯೂ ರಕ್ಷಣಾ ಮಾರ್ಗದಲ್ಲಿರುವವರಿಗೆ ಜೀವದಿಂದ ಹುಟ್ಟಿ ಜೀವವನ್ನು ಹುಟ್ಟಿಸುವ ವಾಸನೆಯಾಗಿಯೂ ಇದ್ದೇವೆ. ಇಂಥ ಕಾರ್ಯಗಳಿಗೆ ಯಾರು ಯೋಗ್ಯರು?**

ನಮ್ಮ ಮೂಗಿನ ಹೊಳ್ಳೆಯಲ್ಲಿರುವ ದೇವರ ಶ್ವಾಸದ ಪರಿಮಳದ ಬಗ್ಗೆ ಯೋಬನು ವಿವರಿಸಿದ್ದಾನೆ. ಈ ಅಭಿವ್ಯಕ್ತಿಯು ದೇವರೊಂದಿಗಿನ ನಿಕಟತೆ ಮತ್ತು ಆಪ್ತ ಸಂಬಂಧವನ್ನು ವರ್ಣಿಸುತ್ತದೆ.

**ಯೋಬ 27:3 ನನ್ನಲ್ಲಿ ಜೀವವು ಇನ್ನೂ ಪೂರ್ಣವಾಗಿದೆ, ದೇವರು ಊದಿದ ಶ್ವಾಸವು ನನ್ನ ಮೂಗಿನಲ್ಲಿ ಇನ್ನೂ ಆಡುತ್ತಿದೆ...**

**ಕೀರ್ತನೆಗಳು 45:7,8 ನೀನು ಧರ್ಮವನ್ನು ಪ್ರೀತಿಸಿದಿ, ಅಧರ್ಮವನ್ನು ದ್ವೇಷಿಸಿದಿ; ಆದದರಿಂದ ದೇವರು, ನಿನ್ನ ದೇವರೇ, ನಿನ್ನನ್ನು ನಿನ್ನ**

**ಜೊತೆಗಾರರಿಗಿಂತ ಉನ್ನತಸ್ಥಾನಕ್ಕೆ ಏರಿಸಿ ಪರಮಾನಂದ ತೈಲದಿಂದ ಅಭಿಷೇಕಿಸಿದ್ದಾನೆ. ನಿನ್ನ ದಿವ್ಯಾಂಬರಗಳು ರಕ್ತಬೋಳ ಅಗರು ಚಂದನಗಳಿಂದ ಎಷ್ಟೋ ಸುವಾಸನೆಯುಳ್ಳವುಗಳಾಗಿವೆ; ಗಜದಂತ ಮಂದಿರಗಳೊಳಗೆ ಉತ್ಕೃಷ್ಟವಾದ್ಯಗಳು ನಿನ್ನನ್ನು ಆನಂದಗೊಳಿಸುವವು.**

ಪರಮಗೀತೆಯಲ್ಲಿ, ಮದುಮಗ (ಕ್ರಿಸ್ತ) ಮತ್ತು ವಧುವಾಗಿರುವ ನಮ್ಮ ನಡುವಿನ ಪ್ರೀತಿಯ ಸಂಬಂಧದ ಸೊಗಸಾದ ವರ್ಣನೆಯಿದೆ.

**ಪರಮಗೀತೆ 3:6 ರಕ್ತಬೋಳ, ಧೂಪ, ವರ್ತಕದ ಸಕಲ ಸುಗಂಧ ದ್ರವ್ಯಗಳನ್ನು ಧೂಪಿಸಿದ ಧೂಮಸ್ತಂಭಗಳಂತೆ ಅರಣ್ಯದಿಂದ ಬರುವ ಈ ಮೆರವಣಿಗೆ ಯಾರದು?**

**ಪರಮಗೀತೆ 4:11 ವಧುವೇ, ನಿನ್ನ ತುಟಿಗಳು ಜೇನುಗರೆಯುತ್ತವೆ; ಜೇನೂ ಹಾಲೂ ನಿನ್ನ ನಾಲಿಗೆಯೊಳಗಿವೆ; ನಿನ್ನ ವಸ್ತ್ರಗಳ ಸುವಾಸನೆಯೋ ಲೆಬನೋನಿನ ಪರಿಮಳವೇ.**

**ವಚನಗಳು 13,14 ನಿನ್ನ ಉದ್ಯಾನದಲ್ಲಿ ದಾಳಿಂಬರದ ವನ, ಉತ್ತಮ ಫಲ, ಜಟಾಮಾಂಸಿ, ಗೋರಂಟೆ, ಜಟಮಾಂಸಿ, ಕುಂಕುಮ, ಬಜೆ, ಲವಂಗಚಕ್ಕೆ, ಸಮಸ್ತವಿಧಧೂಪ, ರಕ್ತಬೋಳ, ಅಗುರು, ಸಕಲ ಮುಖ್ಯ ಮುಖ್ಯ ಸುಗಂಧದ್ರವ್ಯ ಇವುಗಳೇ ಚಿಗುರುತ್ತವೆ...**

ದೇವರ ಅತಿಶಯವಾದ ಪ್ರಸನ್ನತೆಯ ಮಹಿಮೆಯ ಕುರಿತಾಗಿರುವ ಈ ಮತ್ತು ಇತರ ಅನೇಕ ಅಭಿವ್ಯಕ್ತಿಗಳು ದೇವರ ಅಪಾರವಾದ ಪ್ರೀತಿಯನ್ನು, ಆತನ ವಧುವಾಗಿರುವ ನಮ್ಮೊಂದಿಗಿನ ಅನ್ಯೋನ್ಯತೆಗಾಗಿ ಮತ್ತು ಬೇಗನೇ ಬರಲಿರುವ ಆತನ ಪುನರಾಗಮನಕ್ಕಾಗಿ ಇರುವ ಆತನ ಬಯಕೆಯನ್ನು ನೆನಪಿಸುವ ಸತ್ಯವೇದದ ಸೂಚಕಗಳಾಗಿವೆ.

## ಪರಾಮರ್ಶೆಗಾಗಿರುವ ಪ್ರಶ್ನೆಗಳು

1. ನಾವು ಆತ್ಮ ಮಂಡಲವನ್ನು ಹೇಗೆ ಪ್ರವೇಶಿಸುತ್ತೇವೆ.

2. ನೀವು ನೋಡಿರುವ ಅಥವಾ ನೀವು ನೋಡಲು ಬಯಸುವ ದೇವರ ಮಹಿಮೆಯ ಮೂರು ಅಭಿವ್ಯಕ್ತಿಗಳ ಬಗ್ಗೆ ಹೇಳಿರಿ? ಈ ಅಭಿವ್ಯಕ್ತಿಗಳಿಗೆ ಸತ್ಯವೇದದ ಆಧಾರವನ್ನು ಕೊಡಿರಿ.

## ಪಾಠ 6

# ಮಹಿಮೆಯುಳ್ಳ ಸಭೆಯ ಪ್ರಕಟಣೆ

**ಮಹಿಮೆಯ ಜ್ಞಾನ**

ಹಬಕ್ಕೂಕನ ಪ್ರವಾದನೆಯೊಂದಿಗೆ ಕರ್ತನ ಮಹಿಮೆಯ ಕುರಿತಾದ ಈ ಅಧ್ಯಯನವನ್ನು ನಾವು ಪ್ರಾರಂಭಿಸಿದ್ದೇವೆ. ಅವನು ಭೂಮಿಯನ್ನೆಲ್ಲ ತುಂಬಿಕೊಳ್ಳುವ ಕರ್ತನ ಮಹಿಮೆಯ ತಿಳಿವಳಿಕೆಯ ಬಗ್ಗೆ ಹೇಳಿದ್ದಾನೆ., "ಆ ತಿಳಿವಳಿಕೆಯನ್ನು ಪಡೆದುಕೊಳ್ಳುವುದಕ್ಕಾಗಿ ಮತ್ತು ಕರ್ತನ ಮಹಿಮೆಯ ಜ್ಞಾನವನ್ನು ಅನುಭವಿಸುವುದಕ್ಕಾಗಿ ನಾವು ಈ ಅಧ್ಯಯನವನ್ನು ಸಿದ್ಧಪಡಿಸಿದ್ದೇವೆ" ಎಂದು ನಾವು ಬರೆದಿದ್ದೇವೆ.

**ಹಬಕ್ಕೂಕ 2:14 ಸಮುದ್ರದಲ್ಲಿ ನೀರು ಹೇಗೋ ಹಾಗೆಯೇ ಭೂಮಿಯಲ್ಲಿ ಯೆಹೋವನ ಮಹಿಮೆಯ ಜ್ಞಾನವು ತುಂಬಿಕೊಂಡಿರುವದು.**

**ಹೀಬ್ರೂ ಪದ - ಯಾದಾ**

ಮೇಲಿನ ವಚನದಲ್ಲಿ "ಜ್ಞಾನ" ಎಂದು ಅನುವಾದಿಸಲಾಗಿರುವ ಹೀಬ್ರೂ ಪದ *ಯಾದಾ* ಎಂಬುದಾಗಿದೆ ಮತ್ತು ಇದರ

ಅರ್ಥವೇನೆಂದರೆ "ತಿಳಿಯುವುದು, ಅಥವಾ ನೋಡುವುದರ, ಗಮನಿಸುವುದರ ಅಥವಾ ಗುರುತಿಸುವುದರ ಮೂಲಕ ಸರಿಯಾಗಿ ವಿಚಾರಿಸಿ ತಿಳಿದುಕೊಳ್ಳುವುದು."

ಈ ಜ್ಞಾನವು ತಲೆಯ-ಜ್ಞಾನವಲ್ಲ, ಆದರೆ ಅನುಭವದ ಮೂಲಕ ಪಡೆದುಕೊಳ್ಳುವ ಜ್ಞಾನವಾಗಿದೆ. ಈ ಪ್ರವಾದನೆಯ ಅರ್ಥವೇನೆಂದರೆ, ಕರ್ತನ ಮಹಿಮೆಯನ್ನು - ಕರ್ತನ ಕಾರ್ಯಗಳನ್ನು ನೋಡುವ, ಗಮನಿಸುವ ಮತ್ತು ಗುರುತಿಸುವ ಜನರಿಂದ ಇಡೀ ಭೂಮಿಯು ತುಂಬಿದೆ.

ಗ್ರೀಕ್ ಪದ - *ಗ್ನೋಸಿಸ್*

ಅಪೊಸ್ತಲನಾದ ಪೌಲನು ಸಹ ಕರ್ತನ ಮಹಿಮೆಯ ಜ್ಞಾನವನ್ನೂ ಸೂಚಿಸಿದ್ದಾನೆ.

**2 ಕೊರಿಂಥ 4:6 ಯಾಕಂದರೆ ಕತ್ತಲೆಯೊಳಗಿಂದ ಬೆಳಕು ಹೊಳೆಯಲಿ ಎಂದು ಹೇಳಿದ ದೇವರು ತಾನೇ ಯೇಸು ಕ್ರಿಸ್ತನ ಮುಖದಲ್ಲಿ ತೋರುವ ದೇವಪ್ರಭಾವ ಜ್ಞಾನವೆಂಬ ಪ್ರಕಾಶವು ಅನೇಕರಿಗೆ ಉಂಟಾಗುವದಕ್ಕಾಗಿ ನಮ್ಮ ಹೃದಯಗಳಲ್ಲಿ ಹೊಳೆದನು.**

*ಗ್ನೋಸಿಸ್* ಎಂಬ ಗ್ರೀಕ್ ಪದವನ್ನು ಜ್ಞಾನ ಎಂದು ಭಾಷಾಂತರಿಸಲಾಗಿದೆ, ಇದರ ಅರ್ಥವು "ವೈಯಕ್ತಿಕ ಅನುಭವದ ಮೂಲಕ ಸೂಚ್ಯವಾಗಿ ತಿಳಿದುಕೊಳ್ಳುವುದು" ಎಂಬುದಾಗಿದೆ.

*ಫೋಸ್* ಎಂಬ ಗ್ರೀಕ್ ಪದವನ್ನು ಬೆಳಕು ಎಂದು ಭಾಷಾಂತರಿಸಲಾಗಿದೆ, ಇದರ ಅರ್ಥವು "ವಿಶೇಷವಾಗಿ ಕಿರಣಗಳ ಮೂಲಕ ಹೊಳೆಯುವುದು ಅಥವಾ ವ್ಯಕ್ತಪಡಿಸುವುದು" ಎಂಬುದಾಗಿದೆ.

*ಡೊಕ್ಸಾಜ್ಹೊ* ಎಂಬ ಗ್ರೀಕ್ ಪದವನ್ನು ಮಹಿಮೆ ಎಂದು ಭಾಷಾಂತರಿಸಲಾಗಿದೆ, ಇದರ ಅರ್ಥವು "ಮಹಿಮೆಯನ್ನು ಸಲ್ಲಿಸುವುದು ಅಥವಾ ಮನ್ನಣೆ ಕೊಡುವುದು" ಎಂಬುದಾಗಿದೆ.

ಡಬ್ಲ್ಯೂ.ಇ. ವೈನ್ ರವರ ಎಕ್ಸ್‌ಪೋಸಿಟರಿ ಡಿಕ್ಷನರಿ ಆಫ್ ನ್ಯೂ ಟೆಸ್ಟಮೆಂಟ್ ವರ್ಡ್ಸ್ ಹೀಗೆ ಹೇಳುತ್ತದೆ: "*ಗೀನೋಸ್ಕೊ ಎಂಬುದು* (*ಗ್ನೋಸಿಸ್ನ* ಧಾತು ಪದ) ಜ್ಞಾನವನ್ನು ಪಡೆದುಕೊಳ್ಳುವುದನ್ನು, ತಿಳಿದುಕೊಳ್ಳುವುದು, ಗುರುತಿಸುವುದು, ಅರ್ಥಮಾಡಿಕೊಳ್ಳುವುದು

ಅಥವಾ ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವುದು ಎಂಬುದನ್ನು ಸೂಚಿಸುತ್ತದೆ. ಇದು ಅನೇಕಸಾರಿ ತಿಳಿದಿರುವ ವ್ಯಕ್ತಿ ಮತ್ತು ತಿಳಿದಿರುವ ವಸ್ತುವಿನ ನಡುವಿನ ಸಂಬಂಧವನ್ನು, ತಿಳಿದಿರುವದು ತಿಳಿದಿರುವವನಿಗೆ ಬೆಲೆಯನ್ನು ಅಥವಾ ಪ್ರಾಮುಖ್ಯತೆಯನ್ನು ನೀಡುತ್ತದೆ ಎಂಬುದನ್ನು ಸೂಚಿಸುತ್ತದೆ, ಆದ್ದರಿಂದ ಇದು ಸಂಬಂಧದ ಸ್ಥಾಪನೆಯಾಗಿದೆ."

ಗ್ರೀಕ್ ಪದ - *ಎಪಿಗ್ನೋಸಿಸ್*

ಪೌಲನು ಜ್ಞಾನದ ಬಗ್ಗೆ ಮತ್ತೆ ಹೀಗೆ ಬರೆದಿದ್ದಾನೆ,

**ನಮ್ಮ ಕರ್ತವಾದ ಯೇಸು ಕ್ರಿಸ್ತನ ದೇವರೂ ಪ್ರಭಾವಸ್ವರೂಪನಾದ ತಂದೆಯೂ ಆಗಿರುವಾತನು ತನ್ನ ವಿಷಯವಾಗಿ ತಿಳುವಳಿಕೆಯನ್ನು ಕೊಟ್ಟು ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥಗಳನ್ನು ತಿಳುಕೊಳ್ಳುವ ಜ್ಞಾನವುಳ್ಳ ಆತ್ಮವನ್ನು ನಿಮಗೆ ದಯಪಾಲಿಸಬೇಕೆಂದು ಪ್ರಾರ್ಥಿಸುತ್ತೇನೆ. ಎಫೆಸ 1:17,**

ಇಲ್ಲಿ ಬಳಸಲಾಗಿರುವ ಗ್ರೀಕ್ ಪದವಾದ, *ಎಪಿಗ್ನೋಸಿಸ್* (ಜ್ಞಾನ) ಎಂದರೆ "ಗುರುತಿಸುವಿಕೆ" ಅಥವಾ ಸೂಚ್ಯವಾಗಿ "ಸಂಪೂರ್ಣ ವಿವೇಚನೆ, ಅಂಗೀಕಾರ" ಮತ್ತು ಪುನಃ ಸೂಚ್ಯವಾಗಿ "ಸಂಪೂರ್ಣವಾಗಿ ತಿಳಿದುಕೊಳ್ಳುವುದು, ಅಂಗೀಕರಿಸುವುದು" ಎಂದರ್ಥವಾಗಿದೆ.

**ವಚನ. 18 ಆತನು ನಿಮ್ಮ ಮನೋನೇತ್ರಗಳನ್ನು ಬೆಳಗಿಸಿ ಆತನಿಂದ ಕರಿಸಿಕೊಂಡವರು ನಿರೀಕ್ಷಿಸುವ ಪದವಿ ಎಂಥದೆಂಬದನ್ನೂ ದೇವಜನರೆಂಬ ಆತನ ಸ್ವಾಸ್ಥ್ಯದ ಮಹಿಮಾತಿಶಯವು ಎಂಥದೆಂಬದನ್ನೂ ನಂಬುವವರಾದ ನಮ್ಮಲ್ಲಿ.**

ಡಬ್ಲ್ಯೂ.ಇ. ವೈನ್ ಹೀಗೆ ಬರೆಯುತ್ತಾರೆ, "*ಎಪಿಗಿನೋಸ್ಕೊ* ಗಮನಿಸುವುದು, ಪೂರ್ಣವಾಗಿ ಗ್ರಹಿಸುವುದು, ಲಕ್ಷ್ಯದಿಂದ ಗಮನಿಸುವುದು, ಗ್ರಹಿಸುವುದು, ಗುರುತಿಸುವುದು ಎಂಬುಬುಗಳನ್ನು ಸೂಚಿಸುತ್ತದೆ. ಇದು *ಗಿನೋಸ್ಕೊ* ಗಿಂತ ಹೆಚ್ಚಾಗಿ ತಿಳಿದಿರುವ ವಸ್ತುವನ್ನು ನಿರ್ದೇಶಿಸುವ, ಹೆಚ್ಚು ವಿಶೇಷವಾದ, ಗುರುತಿಸುವಿಕೆಯನ್ನು ಸೂಚಿಸುತ್ತದೆ.

ಮಹಿಮೆಯ ಅಭಿವ್ಯಕ್ತಿಗಳ ಜೊತೆಯಲ್ಲಿ, ಜನರು ಅನುಭವಿಸಿರುವ, ನೋಡಿರುವ, ಕೇಳಿರುವ ಸಂಗತಿಗಳ ಸಾಕ್ಷ್ಯಗಳು ಭೂಮಿಯನ್ನೆಲ್ಲ ತುಂಬಲಿವೆ. ಇದು ದೇವರು ಕೊಟ್ಟಿರುವ ಶಕ್ತಿಯಲ್ಲಿ ಕ್ರಿಸ್ತನ ದೇಹವು ಕಾರ್ಯಮಾಡುವ ಫಲಿತಾಂಶಗಳಾಗಿರುತ್ತದೆ, ಅದು ದೇವರ ಮಹಿಮೆಯನ್ನು ಎಲ್ಲರಿಗೂ ಗೋಚರಿಸುವಂತೆ ಮಾಡುತ್ತದೆ.

ನಾವು ದೇವರ ಮುಖವನ್ನು ಹುಡುಕುವಾಗ, ನಾವು ಆತನ ಪ್ರಸನ್ನತೆಯ ಮಹಿಮೆಗೆ ಬರುವಾಗ, ಪ್ರವಾದಿಯಾದ ದಾನಿಯೇಲನು ನಮಗೆ ಅದ್ಭುತಕರವಾದ ವಾಗ್ದಾನವನ್ನು ಕೊಡುತ್ತಾನೆ.

**ದಾನಿಯೇಲ 11:32 ತಮ್ಮ ದೇವರನ್ನು ಅರಿತವರೋ ದೃಢಚಿತ್ತರಾಗಿ ಕೃತಾರ್ಥರಾಗುವರು.**

**ಆರಾಧನಾ ಸ್ಥಳಗಳಲ್ಲಿನ ಮಹಿಮೆ**

* *ಹಳೆಯ ಒಡಂಬಡಿಕೆಯಡಿಯಲ್ಲಿ*

ಹಳೆಯ ಒಡಂಬಡಿಕೆಯಡಿಯಲ್ಲಿ, ಹಳೆಯ ಒಡಂಬಡಿಕೆಯ ಕಾಲಾವಧಿಯಲ್ಲಿ, ದೇವರ ಪ್ರಸನ್ನತೆಯು ಆರಾಧನಾ ಸ್ಥಳಗಳಲ್ಲಿ ವಾಸಿಸುತ್ತಿತ್ತು. ದೇವದರ್ಶನ ಗುಡಾರದಲ್ಲಿ, ಅವರು ಒಡಂಬಡಿಕೆಯ ಮಂಜೂಷವನ್ನು ಅತಿ ಪರಿಶುದ್ಧ ಸ್ಥಳಕ್ಕೆ ತಂದಾಗ ಆತನ ಪ್ರಸನ್ನತೆ, ಆತನ ಮಹಿಮೆಯು ಇಳಿದು ಬರುತ್ತಿತ್ತು.

ಸೊಲೊಮೋನನ ದೇವಾಲಯದಲ್ಲಿ, ಯಾಜಕರು ಮತ್ತು ಜನರು ಐಕ್ಯತೆಯಲ್ಲಿ ಒಂದಾದಾಗ, ಅವರು ಸ್ತುತಿ ಆರಾಧನೆ ಮಾಡುವಾಗ, ಕರ್ತನ ಮಹಿಮೆಯು ದೇವರ ಮನೆಯನ್ನು ತುಂಬಿಕೊಂಡಿತು.

**2 ಪೂರ್ವಕಾಲವೃತ್ತಾಂತ 5:12-14 ನಾರು ಬಟ್ಟೆಗಳನ್ನು ಧರಿಸಿಕೊಂಡು ತಾಳ ಸ್ವರಮಂಡಲ ಕಿನ್ನರಿ ಇವುಗಳನ್ನು ಹಿಡಿದುಕೊಂಡ ಲೇವಿಯ ಗಾಯಕರಾದ ಆಸಾಫ್ ಹೇಮಾನ್ ಯೆದುತೂನರೂ ಇವರ ಮಕ್ಕಳೂ ಸಹೋದರರೂ ತುತೂರಿಗಳನ್ನು ಊದುತಕ್ಕ ನೂರಿಪ್ಪತ್ತು ಮಂದಿ ಯಾಜಕರೂ ಯಜ್ಞವೇದಿಯ ಪೂರ್ವದಿಕ್ಕಿನಲ್ಲಿ ನಿಂತುಕೊಂಡರು. ಮಂಜೂಷವನ್ನು ಒಳಗಿಟ್ಟ ಯಾಜಕರೂ ದೇವಾಲಯದಿಂದ ಹೊರಗೆ ಬಂದ ಕೂಡಲೆ ಒಬ್ಬನೋ ಎಂಬಂತೆ ಸ್ವರವೆತ್ತಿ ಯೆಹೋವನನ್ನು ಕೀರ್ತಿಸುವದಕ್ಕಾಗಿ ತುತೂರಿ ಊದುವವರೂ ಗಾಯನಮಾಡುವವರೂ ಅಲ್ಲಿ ನಿಂತಿದ್ದರು. ತುತೂರಿ**

**ತಾಳ ಮೊದಲಾದ ವಾದ್ಯಗಳ ಧ್ವನಿಯೂ ಯೆಹೋವನು ಒಳ್ಳೆಯವನು, ಆತನ ಕೃಪೆಯು ಶಾಶ್ವತವಾಗಿರುವದು ಎಂದು ಕೃತಜ್ಞಾಸ್ತುತಿಮಾಡುವವರ ಸ್ವರವೂ ಕೇಳಿಸಿದೊಡನೆ ಮೇಘವು ಯೆಹೋವನ ಆಲಯದಲ್ಲಿ ತುಂಬಿಕೊಂಡಿತು. ಯೆಹೋವನ ತೇಜಸ್ಸಿನಿಂದ ವ್ಯಾಪ್ತವಾಗಿದ್ದು ಮೇಘವು ದೇವಾಲಯದಲ್ಲಿ ತುಂಬಿಕೊಂಡದರಿಂದ ಯಾಜಕರು ಅಲ್ಲಿ ನಿಂತು ಸೇವೆ ಮಾಡಲಾರದೆ ಹೋದರು.**

* *ಹೊಸ ಒಡಂಬಡಿಕೆಯಡಿಯಲ್ಲಿ*

ಸುರಿಸಲ್ಪಟ್ಟ ಯೇಸುವಿನ ರಕ್ತದ ಮೂಲಕ, ನಾವು ಹೊಸ ಒಡಂಬಡಿಕೆಯನ್ನು ಪ್ರವೇಶಿಸಿದ್ದೇವೆ. ನಮ್ಮ ಪರವಾಗಿ ಬಲಿಯಾದ ಯೇಸುವಿನ ಯಜ್ಞದ ಮೂಲಕ, ದೇವರು ಈಗ ಮಾನವರೊಂದಿಗೆ ವಾಸಿಸಬಹುದು. ಆತನ ಮಹಿಮೆ ನಮ್ಮ ಮೇಲಿದೆ. ಆತನ ಮಹಿಮೆ ನಮ್ಮಲ್ಲಿ ನೆಲೆಸಿದೆ.

## ಮರ್ಮ – ಮಹಿಮೆಯುಳ್ಳ ಸಭೆ

ಹಳೆಯ ಒಡಂಬಡಿಕೆಯ ಪ್ರವಾದಿಗಳು ನಾವು ಜೀವಿಸುತ್ತಿರುವ ಕಾಲವನ್ನು ನೋಡಲಿಲ್ಲ. ಅವರು ಸಭೆಯ ಕಾಲವನ್ನು ನೋಡಲಿಲ್ಲ. ನಿಜವಾಗಿಯೂ, ಇದು ಒಂದು ಮರ್ಮವಾಗಿತ್ತು.

ಯೇಸುವೇ "ಕ್ರಿಸ್ತನು (ಅಭಿಷಿಕ್ತನು), ಜೀವಸ್ವರೂಪನಾದ ದೇವರ ಮಗನು" ಎಂದು ಪೇತ್ರನು ಹೇಳಿದ ಪ್ರಕಟಣೆಯು, ಹಿಂದಿನ ಕಾಲಗಳಲ್ಲಿ ಮರ್ಮವಾಗಿದ್ದ ಪ್ರಕಟಣೆಯ ಪ್ರಾರಂಭವಾಗಿತ್ತು.

## ಯೇಸು ಸಭೆಯ ಬಗ್ಗೆ ಮೊದಲು ಪ್ರಸ್ತಾಪಿಸಿದ್ದು

ಪವಿತ್ರಾತ್ಮನಿಂದ ತಂದೆಯು ಪೇತ್ರನಿಗೆ ಕೊಟ್ಟ ಪ್ರಕಟಣೆಯ ಕುರಿತು ಮಾತನಾಡುವಾಗ ಯೇಸು ಮೊದಲು "ಸಭೆ" ಎಂಬ ಪದವನ್ನು ಪ್ರಸ್ತಾಪಿಸಿದ್ದಾನೆ. ಇದು ಹಿಂದಿನ ಕಾಲಗಳಲ್ಲಿ ಮರ್ಮವಾಗಿದ್ದ ಪ್ರಕಟಣೆಯ ಪ್ರಾರಂಭವಾಗಿತ್ತು. ಈ ಪ್ರಕಟಣೆಯ ಮೇಲೆ ತನ್ನ ಸಭೆಯನ್ನು ಕಟ್ಟುವುದಾಗಿ ಆತನು ಹೇಳಿದನು.

* *ಮೂಲಭೂತ ಸತ್ಯ*

ಮತ್ತಾಯ **16:13-15** ಯೇಸು ಫಿಲಿಪ್ಪನ ಕೈಸರೈಯ ಎಂಬ ಪಟ್ಟಣದ ಪ್ರಾಂತಕ್ಕೆ ಬಂದಾಗ ಜನರು ಮನುಷ್ಯಕುಮಾರನೆಂಬ ನನ್ನನ್ನು ಯಾರು ಅನ್ನುತ್ತಾರೆ ಎಂದು ತನ್ನ ಶಿಷ್ಯರನ್ನು ಕೇಳಿದ್ದಕ್ಕೆ. ಅವರು – ನಿನ್ನನ್ನು ಕೆಲವರು ಸ್ನಾನಿಕನಾದ ಯೋಹಾನನು ಅನ್ನುತ್ತಾರೆ ಕೆಲವರು ಎಲೀಯನು ಅನ್ನುತ್ತಾರೆ ಕೆಲವರು ಯೆರಮೀಯನು ಇಲ್ಲವೆ ಪ್ರವಾದಿಗಳಲ್ಲಿ ಒಬ್ಬನು ಅನ್ನುತ್ತಾರೆ ಎಂದು ಹೇಳಿದರು. ಆತನು ಅವರನ್ನು – ಅದರೆ ನೀವು ನನ್ನನ್ನು ಯಾರನ್ನುತ್ತೀರಿ ಎಂದು ಕೇಳಲಾಗಿ?

✱ *ಪೇತ್ರನ ಪ್ರಕಟಣೆ*

ವಚನಗಳು **16-17** ಸೀಮೋನ ಪೇತ್ರನು – ನೀನು ಬರಬೇಕಾಗಿರುವ ಕ್ರಿಸ್ತನು, ಜೀವಸ್ವರೂಪನಾದ ದೇವರ ಕುಮಾರನು ಎಂದು ಉತ್ತರ ಕೊಟ್ಟನು. ಅದಕ್ಕೆ ಯೇಸು ಯೋನನ ಮಗನಾದ ಸೀಮೋನನೇ ನೀನು ಧನ್ಯನು. ಈ ಗುಟ್ಟು ನಿನಗೆ ತಿಳಿಸಿದವನು ನರಮನುಷ್ಯನಲ್ಲ ಪರಲೋಕದಲ್ಲಿರುವ ನನ್ನ ತಂದೆಯೇ ತಿಳಿಸಿದನು. ಮತ್ತು ನಾನು ನಿನಗೆ ಒಂದು ಮಾತನ್ನು ಹೇಳುತ್ತೇನೆ, - ನೀನು ಪೇತ್ರನು ಈ ಬಂಡೆಯ (ಮರ್ಮದ ಪ್ರಕಟಣೆ) ಮೇಲೆ ನನ್ನ ಸಭೆಯನ್ನು ಕಟ್ಟುವೆನು.

✱ *ನಾಲ್ಕು ಗುಣಲಕ್ಷಣಗಳು*

**1 -** ವಚನ **18-19** ನನ್ನ ಸಭೆಯನ್ನು ಕಟ್ಟುವೆನು. ಪಾತಾಳಲೋಕದ ಬಲವು ಅದನ್ನು ಸೋಲಿಸಲಾರದು.

**2 -** ಪರಲೋಕ ರಾಜ್ಯದ ಬೀಗದ ಕೈಗಳನ್ನು ನಿನಗೆ ಕೊಡುವೆನು.

**3 -** ಭೂಲೋಕದಲ್ಲಿ ನೀನು ಯಾವುದನ್ನು ಕಟ್ಟುತ್ತೀಯೋ ಅದು ಪರಲೋಕದಲ್ಲಿಯೂ ಕಟ್ಟುವದು. ಮತ್ತು

**4 -** ಭೂಲೋಕದಲ್ಲಿ ನೀನು ಯಾವುದನ್ನು ಬಿಚ್ಚುತ್ತೀಯೋ ಅದು ಪರಲೋಕದಲ್ಲಿಯೂ ಬಿಚ್ಚಿರುವದು ಅಂದನು.

ಯೇಸು ತಾನು ಕಟ್ಟುವ ಸಭೆಯ ಬಗ್ಗೆ ವಿವರಿಸಿದನು. ಇದು ಸೈತಾನನು ಮತ್ತು ಅವನ ದೊರೆತನಗಳು ಸೋಲಿಸಲಾಗದಂಥ ಶಕ್ತಿಯುತ ಸಭೆಯಾಗಿರಬೇಕಿತ್ತು. ಇದಕ್ಕೆ ದೇವರ ರಾಜ್ಯದ ಬೀಗದಕೈಗಳನ್ನು ಇತ್ತು. ಕಟ್ಟುವ ಮತ್ತು ಬಿಚ್ಚುವ ಶಕ್ತಿಯಿತ್ತು.

### ಸಭೆಯ ಕುರಿತಾದ ಪೌಲನ ಪ್ರಕಟಣೆ

ಈ "ಮರ್ಮ" ದ ಬಗ್ಗೆ ಮಾತನಾಡುವಾಗ, ಅಪೊಸ್ತಲನಾದ ಪೌಲನು ಹೀಗೆ ಹೇಳಿದ್ದಾನೆ,

**ಎಫೆಸ 5:32 ನಾನು ಕ್ರಿಸ್ತನಿಗೂ ಸಭೆಗೂ ಇರುವ ಸಂಬಂಧವನ್ನು ಕುರಿತು ಮಾತಾಡುತ್ತಾ ಇದ್ದೇನೆ ಇದುವರೆಗೆ ಗುಪ್ತವಾಗಿದ್ದ ಈ ಸತ್ಯಾರ್ಥವು ಬಹು ಗಂಭೀರವಾದದ್ದು.**

* *ಮರ್ಮ*

ಅಪೊಸ್ತಲನಾದ ಪೌಲನು ಸಭೆಯ ಒಂದು ಮರ್ಮವೆಂದು ಸೂಚಿಸಿದ್ದಾನೆ, ಅದು ಹಿಂದಿನ ಕಾಲಗಳಲ್ಲಿ ಪ್ರಕಟವಾಗಿರಲಿಲ್ಲ.

**ಎಫೆಸ 3:1-5 ಹೀಗಿರುವದರಿಂದ ಅನ್ಯಜನರಾಗಿರುವ ನಿಮ್ಮ ನಿಮಿತ್ತ ಕ್ರಿಸ್ತ ಯೇಸುವಿನ ಸೆರೆಯವನಾದ ಪೌಲನೆಂಬ ನಾನು ನಿಮಗೋಸ್ಕರ ಪ್ರಾರ್ಥಿಸುತ್ತೇನೆ. ನಿಮಗೋಸ್ಕರ ನಿರ್ವಹಿಸುವದಕ್ಕಾಗಿ ದೇವರು ನನಗೆ ಕೃಪೆಯಾಗಿ ಕೊಟ್ಟ ಕೆಲಸವನ್ನು ಇದುವರೆಗೆ ಗುಪ್ತವಾಗಿದ್ದ ಒಂದು ಸಂಗತಿ ದೈವ ಪ್ರಕಟಣೆಯಿಂದ ನನಗೆ ತಿಳಿಸಲ್ಪಟ್ಟಿದೆಂಬದನ್ನೂ ನೀವು ಕೇಳಿದ್ದೀರಲ್ಲಾ. ಅದನ್ನು ಕುರಿತು ನಾನು ಹಿಂದೆ ಸಂಕ್ಷೇಪವಾಗಿ ಬರೆದಿದ್ದೇನೆ. ಬರೆದದ್ದನ್ನು ಓದಿ ನೋಡಿದರೆ ಕ್ರಿಸ್ತನ ವಿಷಯವಾದ ಮರ್ಮವನ್ನು ಕುರಿತು ನನಗಿರುವ ಗ್ರಹಿಕೆಯನ್ನು ನೀವು ತಿಳುಕೊಳ್ಳಬಹುದು. ಆ ಮರ್ಮವು ಈ ಕಾಲದಲ್ಲಿ ದೇವರ ಪರಿಶುದ್ಧ ಅಪೊಸ್ತಲರಿಗೂ ಪ್ರವಾದಿಗಳಿಗೂ ಪವಿತ್ರಾತ್ಮನಿಂದ ತಿಳಿಸಲ್ಪಟ್ಟಂತೆ ಬೇರೆ ಕಾಲಗಳಲ್ಲಿದ್ದ ಜನರಿಗೆ ತಿಳಿಸಲ್ಪಡಲಿಲ್ಲ.**

* *ಅನ್ಯಜನರನ್ನು ಒಳಗೊಂಡಿದೆ!*

ಅನ್ಯಜನರು ಜೊತೆ ಬಾಧ್ಯಸ್ಥರು ಎಂದು ಅವನು ಅರ್ಥಮಾಡಿಕೊಂಡನು.

**ವಚನಗಳು 6-9… ಅದು ಯಾವದಂದರೆ ಅನ್ಯ ಜನರು ಸುವಾರ್ತೆಯ ಮೂಲಕ ಕ್ರಿಸ್ತ ಯೇಸುವಿನಲ್ಲಿರುವವರಾಗಿ ಯೆಹೂದ್ಯರೊಂದಿಗೆ ಬಾಧ್ಯರೂ ಒಂದೇ ದೇಹದೊಳಗಣ ಅಂಗಗಳೂ ಅಬ್ರಹಾಮನಿಗಿಂಟಾದ ವಾಗ್ದಾನದಲ್ಲಿ ಪಾಲುಗಾರರು ಆಗಿದ್ದಾರೆಂಬದೇ. ದೇವರು ತನ್ನ ಶಕ್ತಿಯ ಪ್ರಯೋಗದಲ್ಲಿ ನನಗೆ ಉಚಿತಾರ್ಥವಾಗಿ ಅನುಗ್ರಹಿಸಿದ ಕೆಲಸವನ್ನನುಸರಿಸಿ ನಾನು ಈ**

ಸುವಾರ್ತೆಗೆ ಸೇವಕನಾದೆನು. ನಾನು ಕ್ರಿಸ್ತನ ಅಪ್ರಮೇಯವಾದ ಐಶ್ವರ್ಯದ ವಿಷಯವಾದ ಶುಭಸಮಾಚಾರವನ್ನು ಅನ್ಯಜನರಿಗೆ ಪ್ರಸಿದ್ಧಿ ಪಡಿಸುವ ಹಾಗೆಯೂ ಸಮಸ್ತವನ್ನು ಸೃಷ್ಟಿಸಿದ ದೇವರಲ್ಲಿ ಆದಿಯಿಂದ ಮರೆಯಾಗಿದ್ದ ಮರ್ಮವು ಪ್ರಕಟವಾಗುವ ವಿಧ ಎಂಥದೆಂದು ತಿಳಿಸುವ ಹಾಗೆಯೂ ದೇವಜನರೊಳಗೆ ಅತ್ಯಲ್ಪನಾದ ನನಗೆ ಅನುಗ್ರಹಿಸೋಣವಾಯಿತು.

✱ *ದೇವರ ನಾನಾ ವಿಧವಾದ ಜ್ಞಾನವನ್ನು ತಿಳಿಯಪಡಿಸಲು*

ದೇವರ ಜ್ಞಾನದ ಅನೇಕ ಅಂಶಗಳನ್ನು ಆತ್ಮ ಮಂಡಲದಲ್ಲಿರುವ ರಾಜತ್ವಗಳಿಗೂ ಮತ್ತು ಅಧಿಕಾರಿಗಳಿಗೂ ತಿಳಿಸುವುದು ಸಭೆಯ ಉದ್ದೇಶವಾಗಿದೆ ಎಂದು ಪೌಲನು ಹೇಳಿದನು.

**ವಚನಗಳು. 10-12. ದೇವರು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿ ಅನಾದಿ ಕಾಲದಿಂದ ಮಾಡಿದ ಸಂಕಲ್ಪದ ಮೇರೆಗೆ ತನ್ನ ನಾನಾ ವಿಧವಾದ ಜ್ಞಾನವು ಪರಲೋಕದಲ್ಲಿ ರಾಜತ್ವಗಳಿಗೂ ಅಧಿಕಾರಿಗಳಿಗೂ ಈಗ ಕ್ರೈಸ್ತ ಸಭೆಯ ಮೂಲಕ ಗೊತ್ತಾಗಬೇಕೆಂಬದನ್ನು ಉದ್ದೇಶಿಸಿದನು. ದೇವರ ಸಾನಿಧ್ಯ ಸೇರುವದಕ್ಕೆ ನಮಗಿರುವ ಭರವಸವುಳ್ಳ ಧೈರ್ಯವು ಕ್ರಿಸ್ತನಲ್ಲಿ ಇಟ್ಟಿರುವ ನಂಬಿಕೆಯ ಮೂಲಕ ಆತನಲ್ಲಿಯೇ ನಮಗೆ ಉಂಟಾಯಿತು.**

ಯೇಸು ತಾನು ಕಟ್ಟುವುದಾಗಿ ಹೇಳಿದ ಸಭೆಯ ನಿಜವಾದ ಅರ್ಥವನ್ನು, ದೇವರ ರಾಜ್ಯದ ಪಾಲುದಾರರಾಗಿರುವ ನಮ್ಮ ಪೂರ್ಣ ಸಾಮರ್ಥ್ಯವನ್ನು ಅರಿತುಕೊಳ್ಳದಂತೆ ಮರೆಮಾಚುವ ಮೂಲಕ ಸೈತಾನನು ನಮ್ಮನ್ನು ತಡೆಹಿಡಿದಿದ್ದಾನೆ.

ಮತ್ತೆ ಎಫೆಸ 5 ರಲ್ಲಿ ಪೌಲನು ಸಭೆಯನ್ನು ಮರ್ಮವೆಂದು ಉಲ್ಲೇಖಿಸಿದ್ದಾನೆ.

**ಎಫೆಸ 5:32 ನಾನು ಕ್ರಿಸ್ತನಿಗೂ ಸಭೆಗೂ ಇರುವ ಸಂಬಂಧವನ್ನು ಕುರಿತು ಮಾತಾಡುತ್ತಾ ಇದ್ದೇನೆ ಇದುವರೆಗೆ ಗುಪ್ತವಾಗಿದ್ದ ಈ ಸತ್ಯಾರ್ಥವು ಬಹು ಗಂಭೀರವಾದದ್ದು.**

**ಸಭೆಯೆಂಬ - ಪದದ ಅರ್ಥ**

ಸಭೆಯು ಒಂದು ಜನಾಂಗದ ಮೇಲೆ ಕಟ್ಟಲ್ಪಡುವುದಿಲ್ಲ, ಆದರೆ ಅದು ಅನ್ಯಜನರನ್ನು ಸಹ ಒಳಗೊಂಡಿರಬೇಕು. ("ಅನ್ಯಜನರು" ಎಂಬುದು ಯೆಹೂದ್ಯರಲ್ಲದ ಪ್ರತಿಯೊಂದು ಜನಾಂಗವನ್ನು ಸೂಚಿಸುತ್ತದೆ.) ಸಭೆ ಎಂಬುದು ಕ್ರಿಸ್ತನಲ್ಲಿರುವ ಎಲ್ಲರನ್ನು ಒಳಗೊಂಡಿರುವಂಥದ್ದಾಗಿದೆ. ಆತನಲ್ಲಿ, ಗಂಡು ಹೆಣ್ಣು ಎಂಬ, ಯೆಹೂದ್ಯನು ಗ್ರೀಕನು ಎಂಬ, ದಾಸನು ಸ್ವತಂತ್ರನು ಎಂಬ ಬೇಧವಿಲ್ಲ. ಜನಾಂಗ, ಲಿಂಗ ಅಥವಾ ಆರ್ಥಿಕ ಸ್ಥಿತಿಯು ಯಾವುದೇ ವ್ಯತ್ಯಾಸವನ್ನುಂಟುಮಾಡುವುದಿಲ್ಲ.

**ಗಲಾತ್ಯ 3:28 ನೀವೆಲ್ಲರೂ ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವದರಿಂದ ಯೆಹೂದ್ಯನು ಗ್ರೀಕನು ಎಂದೂ ಆಳು ಒಡೆಯ ಎಂದೂ ಗಂಡು ಹೆಣ್ಣು ಎಂದೂ ಭೇಧವಿಲ್ಲ.**

ಅನೇಕ ವರ್ಷಗಳ ಸಂಪ್ರದಾಯದ ದೆಸೆಯಿಂದ, "ಸಭೆ" ಎಂಬ ಪದವು ಇಂದು ಸಂಪೂರ್ಣವಾಗಿ ಸತ್ಯವೇದ ಆಧರಿತವಲ್ಲದ ಅರ್ಥವನ್ನು ಪಡೆದುಕೊಂಡಿದೆ. ಅನೇಕರು ಇದನ್ನು ಧಾರ್ಮಿಕ ಕಟ್ಟಡ ಅಥವಾ ಮನುಷ್ಯನ ಸಂಘಟನೆ ಎಂಬ ಅರ್ಥಮಾಡಿಕೊಂಡಿದ್ದಾರೆ.

ಯೇಸು ತಾನು ಕಟ್ಟುವುದಾಗಿ ಹೇಳಿದ ಸಭೆಯ ನಿಜವಾದ ಅರ್ಥವನ್ನು ಮರೆಮಾಚುವ ಮೂಲಕ, ಸಭೆಯಾಗಿ ಕಾರ್ಯನಿರ್ವಹಿಸದಂತೆ ಸೈತಾನನು ನಮ್ಮನ್ನು ತಡೆಹಿಡಿದಿದ್ದಾನೆ.

**ನಾವೇ ಸಭೆಯಾಗಿದ್ದೇವೆ!**

ಸಭೆಗಾಗಿ ನಾವು ಹೊಂದಿರುವ ಪ್ರತಿಯೊಂದು ವಾಗ್ದಾನವು ನಮಗಾಗಿರುವ ವಾಗ್ದಾನವಾಗಿದೆ. ನಾವೇ ಸಭೆಯಾಗಿದ್ದೇವೆ!

* *ಮಹಿಮೆಯುಳ್ಳ ಸಭೆ*

ಯೇಸು ತಾನು ಕಟ್ಟುವುದಾಗಿ ಹೇಳಿದ ಸಭೆಯ ಕುರಿತಾದ ಈ ಹೊಸ ಪ್ರಕಟಣೆಯು "ನಮ್ಮ ಮಹಿಮೆಗಾಗಿ" ಆಗಿರುತ್ತದೆ.

**1 ಕೊರಿಂಥ 2:7 ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥವನ್ನು ತಿಳಿಸುವಲ್ಲಿ ದೇವರ ಜ್ಞಾನವನ್ನೇ ಹೇಳುತ್ತೇವೆ. ಅದು ಯಾವದೆಂದರೆ ದೇವರು ನಮ್ಮ ಮಹಿಮೆಗಾಗಿ ಲೋಕೋತ್ಪತ್ತಿಗಿಂತ ಮೊದಲೇ ನೇಮಿಸಿ ಇದುವರೆಗೆ ಮರೆಮಾಡಿದ ಜ್ಞಾನವೆ,**

ಆದಾಮ ಹವ್ವರು ಪಾಪ ಮಾಡಿದಾಗ ಮತ್ತು "ಮಹಿಮೆಯನ್ನು ಹೊಂದದೆ ಹೋದಾಗ" ಕಳೆದುಕೊಂಡ ಮಹಿಮೆಯನ್ನು ಆತನ ಸಭೆಯಲ್ಲಿರುವ "ನೂತನ ಸೃಷ್ಟಿಗಳು" ಆಗಿರುವ ನಮಗೆ ಪುನಃಸ್ಥಾಪಿಸಲ್ಪಡುತ್ತದೆ.

✱ *ಮಹಿಮೆಯ ನಿರೀಕ್ಷೆ*

ಕ್ರಿಸ್ತನು ಯಾರೆಂಬ ಪ್ರಕಟಣೆಯು, ‘‘ಜೀವಸ್ವರೂಪನಾದ ದೇವರ ಮಗ” ಎಂಬುದು “ಮಹಿಮಾತಿಶಯ” ಎಂದು ಕರೆಯಲ್ಪಡುತ್ತದೆ. "ಮಹಿಮೆಯ ನಿರೀಕ್ಷೆ" ಎಂದು ಸೂಚಿಸಿರುವ ಕ್ರಿಸ್ತನು ತಾನೇ, (ಅಭಿಷಿಕ್ತನು) ಆತನ ಸಭೆಯಾಗಿರುವ ನಮ್ಮಲ್ಲಿ ವಾಸಿಸುತ್ತಾನೆ.

**ಕೊಲೊಸ್ಸೆ 1:27 ಅನ್ಯ ಜನಗಳ ವಿಷಯವಾದ ಈ ಮರ್ಮದ ಮಹಿಮಾತಿಶಯವು ಎಷ್ಟೇಂಬುದನ್ನು ದೇವರು ತನ್ನ ಜನರಿಗೆ ತಿಳಿಸಲಿಕ್ಕೆ ಮನಸ್ಸು ಮಾಡಿಕೊಂಡನು. ಈ ಮರ್ಮವು ಏನೆಂದರೆ ಕ್ರಿಸ್ತನು ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರ ಭೂತನಾಗಿರುವದೇ.**

✱ *ದೇವರ ಜ್ಞಾನದ ಅಭಿವ್ಯಕ್ತಿ*

ಯುಗಗಳ ಆರಂಭದಿಂದಲೂ ಮರೆಮಾಡಲಾಗಿದ್ದ ಈ “ಮರ್ಮ” ವನ್ನು ಸಭೆಯ ಮೂಲಕ “ಸ್ವರ್ಗೀಯ ಸ್ಥಳಗಳಲ್ಲಿನ ರಾಜತ್ವಗಳ ಮತ್ತು ಅಧಿಕಾರಿಗಳ” ಇಡೀ ದೇವದೂತರ ಮಂಡಲಕ್ಕೆ ಈಗ ಪ್ರಕಟಪಡಿಸಲಾಗಿದೆ. ಅಪೊಸ್ತಲನಾದ ಪೌಲನು ಹೀಗೆ ಬರೆದನು:

**ಎಫೆಸ 3:8-10 ನಾನು ಕ್ರಿಸ್ತನ ಅಪ್ರಮೇಯವಾದ ಐಶ್ವರ್ಯದ ವಿಷಯವಾದ ಶುಭಸಮಾಚಾರವನ್ನು ಅನ್ಯಜನರಿಗೆ ಪ್ರಸಿದ್ಧಿಪಡಿಸುವ ಹಾಗೆಯೂ ಸಮಸ್ತವನ್ನು ಸೃಷ್ಟಿಸಿದ ದೇವರಲ್ಲಿ ಆದಿಯಿಂದ ಮರೆಯಾಗಿದ್ದ ಮರ್ಮವು ಪ್ರಕಟವಾಗುವ ವಿಧ ಎಂಥದೆಂದು ತಿಳಿಸುವ ಹಾಗೆಯೂ ದೇವಜನರೊಳಗೆ ಅತ್ಯಲ್ಪನಾದ ನನಗೆ ಅನುಗ್ರಹಿಸೋಣವಾಯಿತು. ದೇವರು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿ ಅನಾದಿ ಕಾಲದಿಂದ ಮಾಡಿದ ಸಂಕಲ್ಪದ ಮೇರೆಗೆ ತನ್ನ ನಾನಾ ವಿಧವಾದ ಜ್ಞಾನವು ಪರಲೋಕದಲ್ಲಿ ರಾಜತ್ವಗಳಿಗೂ ಅಧಿಕಾರಿಗಳಿಗೂ ಈಗ ಕ್ರೈಸ್ತ ಸಭೆಯ ಮೂಲಕ ಗೊತ್ತಾಗಬೇಕೆಂಬದನ್ನು ಉದ್ದೇಶಿಸಿದನು.**

✱ *ಹೊರಕ್ಕೆ ಕರೆಯಲ್ಪಟ್ಟವರು*

*ಎಕ್ಲೆಸಿಯಾ* ಎಂಬ ಮೂಲ ಗ್ರೀಕ್ ಪದವನ್ನು "ಸಭೆ" ಎಂದು ಭಾಷಾಂತರಿಸಲಾಗಿದೆ, ಇದರ *ಎಕ್* ಎಂಬ ಪದದಿಂದ "ಹೊರಕ್ಕೆ" ಎಂಬ ಅರ್ಥವು ಬರುತ್ತದೆ ಮತ್ತು *ಕ್ಯಾಲಿಯೊ* ಎಂಬ ಪದದ ಅರ್ಥ "ಕರೆಯಲ್ಪಡುವುದು" ಎಂಬುದಾಗಿದೆ. ಇದರ ಅರ್ಥವೇನಂದರೆ "ಹೊರಕ್ಕೆ ಕರೆಯಲ್ಪಟ್ಟವರು."

ಸಭೆಯಾಗಿರುವ ನಾವು ಆತನ ಉದ್ದೇಶದ ಮೇರೆಗೆ ಕರೆಯಲ್ಪಟ್ಟಿದ್ದೇವೆ.

**2 ತಿಮೊಥೆ 1:8-10 ಆದದರಿಂದ ನೀನು ನಮ್ಮ ಕರ್ತನನ್ನು ಕುರಿತು ಹೇಳುವ ಸಾಕ್ಷಿಯ ವಿಷಯದಲ್ಲಾಗಲಿ ಆತವ ಸೆರೆಯವನಾದ ನನ್ನ ವಿಷಯದಲ್ಲಾಗಲಿ ನಾಚಿಕೆ ಪಡದೆ ದೇವರ ಬಲವನ್ನು ಆಶ್ರಯಿಸಿ ನನ್ನೊಂದಿಗೆ ಸುವಾರ್ತೆಗೋಸ್ಕರ ಶ್ರಮೆಯನ್ನನುಭವಿಸು. ಆತನು ನಮ್ಮಲ್ಲಿ ಸುಕೃತ್ಯಗಳನ್ನು ನೋಡಿದ್ದರಿಂದಲ್ಲ. ತನ್ನ ಸಂಕಲ್ಪವನ್ನು ಅನುಸರಿಸಿ ಕೃಪೆಯಿಂದಲೇ ನಮ್ಮನ್ನು ರಕ್ಷಿಸಿ ಪರಿಶುದ್ಧರಾಗುವದಕ್ಕೆ ಕರೆದನು. ಆತನು ಅನಾದಿ ಕಾಲದಲ್ಲಿ ಆ ಕೃಪೆಯನ್ನು ಕ್ರಿಸ್ತ ಯೇಸುವಿನಲ್ಲಿ ನಮಗೆ ಅನುಗ್ರಹಿಸಿ ಈಗ ನಮ್ಮ ರಕ್ಷಕನಾದ ಕ್ರಿಸ್ತ ಯೇಸುವಿನ ಪ್ರತ್ಯಕ್ಷತೆಯ ಮೂಲಕ ಅದನ್ನು ಪ್ರಕಾಶಪಡಿಸಿದ್ದಾನೆ. ಈತನು ಮರಣವನ್ನು ನಿವೃತ್ತಿ ಮಾಡಿ ಸುವಾರ್ತೆಯ ಮೂಲಕ ಜೀವವನ್ನೂ ನಿರ್ಲಯತ್ವವನ್ನೂ ಪ್ರಕಾಶಗೊಳಿಸಿದನು.**

**ರೋಮಾಪುರ 8:28 ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ.**

ಆತನ ಉದ್ದೇಶಗಳ ಮೇರೆಗೆ ಕರೆಯಲ್ಪಟ್ಟವರು ಎಂದು ಸೂಚಿಸಲ್ಪಟ್ಟವರಾದ ನಾವೇ ಸಭೆಯಾಗಿದ್ದೇವೆ. ನಾವು "ಸಭೆಗೆ ಹೋಗಲು ಸಾಧ್ಯವಿಲ್ಲ." ನಾವೇ ಸಭೆಯಾಗಿದ್ದೇವೆ! ದೇವರಿಗೆ ಶಾಶ್ವತವಾದ ಉದ್ದೇಶವಿದೆ ಮತ್ತು ನಾವು "ಆತನ ಉದ್ದೇಶದ ಮೇರೆಗೆ ಕರೆಯಲ್ಪಟ್ಟಿದ್ದೇವೆ."

✱ *ಕ್ರಿಸ್ತನ ಮದಲಿಂಗಿತ್ತಿ*

ಕ್ರಿಸ್ತನ ಮದಲಿಂಗಿತ್ತಿಯಾಗಿರಲು ನಾವು ಕರೆಯಲ್ಪಟ್ಟಿದ್ದೇವೆ.

ಎಫೆಸ **5:25-32** ಪುರುಷರೇ ಕ್ರಿಸ್ತನು ಸಭೆಯನ್ನು ಪ್ರೀತಿಸಿದ ಪ್ರಕಾರವೇ ನಿಮ್ಮ ನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ. ಆತನು ಅದನ್ನು ಪ್ರತಿಷ್ಠೆಪಡಿಸುವದಕ್ಕಾಗಿ ತನ್ನನ್ನು ಒಪ್ಪಿಸಿಕೊಟ್ಟನು. ಅದನ್ನು ಕಳಂಕ ಸುಕ್ಕು ಮುಂತಾದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ದವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧಮಾಡಿದನು. ಹಾಗೆಯೇ ಪುರುಷನು ಸಹ ಸ್ವಂತ ಶರೀರವನ್ನು ಪ್ರೀತಿಸಿಕೊಳ್ಳುವ ಪ್ರಕಾರವೇ ತಮ್ಮ ಹೆಂಡತಿಯನ್ನು ಪ್ರೀತಿಸುವ ಹಂಗಿನವರಾಗಿದ್ದಾರೆ. ತನ್ನ ಹೆಂಡತಿಯನ್ನು ಪ್ರೀತಿಸಿಕೊಳ್ಳುವವನು ತನ್ನನ್ನೇ ಪ್ರೀತಿಸಿಕೊಳ್ಳುವವನಾಗಿದ್ದಾನೆ. ಯಾರೂ ಎಂದೂ ಸ್ವಶರೀರವನ್ನು ಹಗೆಮಾಡಿದ್ದಿಲ್ಲ. ಎಲ್ಲರೂ ತಮ್ಮ ಶರೀರಗಳನ್ನು ಪೋಷಿಸಿ ಸಂರಕ್ಷಿಸುತ್ತಾರೆ. ಯಾವ ದೇಹಕ್ಕೆ ನಾವು ಅಂಗಗಳಾಗಿದ್ದೇವೋ ಸಭೆಯೆಂಬ ಆ ದೇಹವನ್ನು ಕ್ರಿಸ್ತನು ಹಾಗೆಯೇ ಪೋಷಿಸಿ ಸಂರಕ್ಷಿಸುತ್ತಾನಲ್ಲಾ. ಇದರ ನಿಮಿತ್ತದಿಂದ ಪುರುಷನು ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು ಅವರಿಬ್ಬರೂ ಒಂದೇ ಶರೀರವಾಗಿರುವರು. ಎಂದು ಬರೆದದೆ. ನಾನು ಕ್ರಿಸ್ತನಿಗೂ ಸಭೆಗೂ ಇರುವ ಸಂಬಂಧವನ್ನು ಕುರಿತು ಮಾತಾಡುತ್ತಾ ಇದ್ದೇನೆ ಇದುವರೆಗೆ ಗುಪ್ತವಾಗಿದ್ದ ಈ ಸತ್ಯಾರ್ಥವು ಬಹು ಗಂಭೀರವಾದದ್ದು.

ದೇವರು ಕೊಟ್ಟಿರುವ ಮದುವೆಯ ಪದ್ದತಿಯ ವಿಷಯದಲ್ಲಿ ಸೈತಾನನು ಏಕೆ ಹೋರಾಡುತ್ತಿದ್ದಾನೆ ಎಂಬುದರ ಬಗ್ಗೆ ಯಾವುದಾದರೂ ಸಂದೇಹವಿದೆಯೇ? ಮದುವೆಯು ಕ್ರಿಸ್ತನ ಮತ್ತು ಸಭೆಯ ಸಂಬಂಧದ ಚಿತ್ರಣವಾಗಿರಬೇಕು.

✱ *ದೇವರ ಉದ್ದೇಶ*

ಎಫೆಸ **3:21…** ಸಭೆಯಲ್ಲಿಯೂ ಕ್ರಿಸ್ತ ಯೇಸುವಿನಲ್ಲಿಯೂ ತಲತಲಾಂತರಕ್ಕೂ ಯುಗಯುಗಾಂತರಕ್ಕೂ ಸ್ತೋತ್ರ. ಆಮೆನ್

"ಆತನ ಉದ್ದೇಶಗಳ ಮೇರೆಗೆ ಕರೆಯಲ್ಪಟ್ಟವರಾದ, ನಾವು ವ್ಯಕ್ತಿಗತವಾಗಿ ಮತ್ತು ಸಾಂಸ್ಥಿಕವಾಗಿ ಆತನ ಸಭೆಯಾಗಿದ್ದೇವೆ. ನಾವು ಪ್ರತಿಯೊಬ್ಬರೂ "ನನ್ನ ಸಭೆ" ಎಂದು ಕರೆಯಲು ಆತನು

ಆರಿಸಿಕೊಂಡಿರುವ "ಕರೆಯಲ್ಪಟ್ಟವರ" ಸಭೆಯ ಅಥವಾ ವಿಶ್ವಾಸಿಗಳ ಸಭೆಯ ಭಾಗವಾಗಿದ್ದೇವೆ. ಸಭೆಯಾಗಿ ಕೂಡಿಬರುವ ದೇವದರ್ಶನ ಗುಡಾರದ, ಮೋಶೆಯ ಗುಡಾರದ, ದಾವೀದನ ಗುಡಾರದ ಮತ್ತು ದಾವೀದನ ಮಗನಾದ ಸೊಲೊಮೋನನು ಕಟ್ಟಿದ ದೇವಾಲಯದ ಹಳೆಯ ಒಡಂಬಡಿಕೆಯ ಸಂಕೇತಶಾಸ್ತ್ರವು ಮುಂಬರುವ "ಆಲಯ" ಅಂದರೆ ಕ್ರಿಸ್ತನ ಮದಲಿಂಗಿತ್ತಿಯಾದ ಸಭೆಯ ಕುರಿತಾದ ಭಾಗಶಃವಾದ ಸಾಂಕೇತಿಕ ಪ್ರಕಟಣೆಗಳನ್ನು ಒಳಗೊಂಡಿತ್ತು.

**ಯೆಶಾಯ 60:7 ... ನನ್ನ ಸುಂದರಾಲಯವನ್ನು ಚಂದಗೊಳಿಸುವೆನು.**

**ಕೀರ್ತನೆ 26:8 ಯೆಹೋವನೇ, ನಿನ್ನ ನಿವಾಸವು ನನಗೆ ಎಷ್ಟೋ ಪ್ರಿಯ; ನಿನ್ನ ಪ್ರಭಾವಸ್ಥಾನವು ನನಗೆ ಇಷ್ಟ.**

**ಯೆಹೆಜ್ಕೇಲ 44: 4 ಬಳಿಕ ಆ ಪುರುಷನು ಬಡಗಣ ಹೆಬ್ಬಾಗಿಲ ಮಾರ್ಗವಾಗಿ ನನ್ನನ್ನು ದೇವಸ್ಥಾನದ ಮುಂದುಗಡೆಗೆ ಕರ ತಂದನು; ಆಹಾ, ನಾನು ನೋಡಲಾಗಿ ಯೆಹೋವನ ತೇಜಸ್ಸು ಯೆಹೋವನ ಆಲಯವನ್ನು ತುಂಬಿಕೊಂಡಿತ್ತು; ಅದನ್ನು ನೋಡಿ ಅಡ್ಡಬಿದ್ದೆನು.**

**ಹಗ್ಗಾಯ 2:9 ಈ ಆಲದಯದ ಮುಂದಿನ ವೈಭವವು ಹಿಂದಿನ ವೈಭವವಕ್ಕಿಂತ ವಿಶೇಷವಾಗಿರುವದು. ಇದು ಸೇನಾಧೀಶ್ವರನಾದ ಯೆಹೋವನ ನುಡಿ. ಈ ಸ್ಥಳದಲ್ಲಿ ಸಮಾಧಾನವನ್ನು ಅನುಗ್ರಹಿಸುವೆನು. ಇದು ಸೇನಾಧೀಶ್ವರನಾದ ಯೆಹೋವನ ನುಡಿ.**

## ಪರಾತ್ಪರನ ಮರೆಹೊಕ್ಕುವ ಸ್ಥಳ

ಪರಾತ್ಪರನ ಮರೆಹೊಕ್ಕುವ ಸ್ಥಳದಲ್ಲಿ ನಾವು ದೇವರಿಗೆ ಹತ್ತಿರವಿರುವ ಆತ್ಮ ಮಂಡಲಕ್ಕೆ ಎತ್ತಲ್ಪಡುತ್ತವೆ ಮತ್ತು ಸರ್ವಶಕ್ತನ ಆಶ್ರಯದಲ್ಲಿ ನಾವು ಕಾಣಲ್ಪಡುತ್ತೇವೆ. ನಿಜವಾದ ಆರಾಧಕರಿಗೆ, ಇದು ಸಾಂದರ್ಭಿಕ ಭೇಟಿಯ ಸ್ಥಳವಾಗಿರುವುದಿಲ್ಲ, ಆದರೆ ಇದು ನಾವು ಆತನ ಅತಿಶಯವಾದ ಪ್ರಸನ್ನತೆಯಲ್ಲಿ "ವಾಸಿಸುವ" ಅಥವಾ "ನೆಲೆಸುವ" ಸ್ಥಳವಾಗಿದೆ.

**ಕೀರ್ತನೆಗಳು 91:1-12**

- *ಮರೆಹೊಕ್ಕುವ ಸ್ಥಳ*

**ವಚನ. 1 ಪರಾತ್ಪರನ ಮರೆಹೊಕ್ಕಿರುವವನು,**

ಇಲ್ಲಿ ಕೇಥರ್ ಎಂಬ ಹೀಬ್ರೂ ಪದವನ್ನು ಬಳಸಲಾಗಿದೆ ಮತ್ತು ಇದರ ಅರ್ಥವೇನೆಂದರೆ ಮರೆಯ, ಮರೆಮಾಚುವ ಸ್ಥಳ ಅಥವಾ ಸಂರಕ್ಷಣೆಯ ಸ್ಥಳ.

✱ *ಸರ್ವಶಕ್ತನ ಆಶ್ರಯದಲ್ಲಿ*

**ವಚನ. 1 ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತನಾಗಿರುವನು.**

ಪೇತ್ರನ ನೆರಳಿನಡಿಯಲ್ಲಿ ಹಾದುಹೋಗುವಾಗ ಜನರು ಸ್ವಸ್ಥರಾಗಲು ಮತ್ತು ಬಿಡುಗಡೆಯಾಗಲು ಸಾಧ್ಯವಾಗುವುದಾದರೆ, ಸರ್ವಶಕ್ತನ ನೆರಳಿನಡಿಯಲ್ಲಿ ನಾವು "ವಾಸಿಸುವುದಾದರೆ" ನಾವು ಇನ್ನೆಷ್ಟು ಹೆಚ್ಚಿನದ್ದನ್ನು ನಿರೀಕ್ಷಿಸಬಹುದು.

**ಅಪೊಸ್ತಲರ ಕೃತ್ಯಗಳು 5:15,16 ಹೀಗಿರುವದರಿಂದ ಜನರು ರೋಗಿಗಳನ್ನು ದೋಲಿಗಳ ಮೇಲೆಯೂ ಹಾಸಿಗೆಗಳ ಮೇಲೆಯೂ ಇಟ್ಟು ಪೇತ್ರನು ಬರುವಾಗ ಅವನ ನೆರಳು ಇವರಲ್ಲಿ ಯಾವನ ಮೇಲಾದರೂ ಬೀಳಲಿ ಎಂದು ಅವರನ್ನು ಬೀದಿಗೆ ತೆಗೆದುಕೊಂಡು ಬರುತ್ತಿದ್ದರು. ಯೆರೂಸಲೇಮಿನ ಸುತ್ತಲಿರುವ ಊರುಗಳ ಜನರು ಸಹ ರೋಗಿಗಳನ್ನೂ ದೆವ್ವಗಳ ಕಾಟವಿದ್ದವರನ್ನೂ ಹೊತ್ತುಕೊಂಡು ಗುಂಪುಗುಂಪಾಗಿ ಬರುತ್ತಿದ್ದರು; ಅವರೆಲ್ಲರಿಗೂ ವಾಸಿಯಾಗುವದು.**

✱ *ನನ್ನ ಆಶ್ರಯ - ನನ್ನ ಕೋಟೆ*

**ವಚನ. 2-3 ನಾನು ಯೆಹೋವನಿಗೆ - ನೀನೇ ನನ್ನ ಶರಣನು ನನ್ನ ದುರ್ಗವು ನಾನು ಭರವಸವಿಟ್ಟಿರುವ ನನ್ನ ದೇವರು ಎಂದು ಹೇಳುವೆನು. ನಿನ್ನನ್ನು ಬೇಟೆಗಾರನ ಬಲೆಯಿಂದಲೂ ಮರಣಕರ ವ್ಯಾಧಿಯಿಂದಲೂ ತಪ್ಪಿಸುವವನು ಆತನೇ.**

ಆತನು ಸೈತಾನನ ಕುತಂತ್ರಗಳಿಂದ ಮತ್ತು ವ್ಯಾಧಿಯಿಂದ ನಮ್ಮನ್ನು ರಕ್ಷಿಸುವನು.

✱ *ಆತನ ರೆಕ್ಕೆಗಳಡಿಯಲ್ಲಿ*

**ವಚನ. 4-7 ಆತನು ನಿನ್ನನ್ನು ತನ್ನ ರೆಕ್ಕೆಗಳಿಂದ ಹೊದಗಿಸುವನು; ಆತನ ಪಕ್ಕಗಳ ಮರೆಯನ್ನು ಆಶ್ರಯಿಸಿಕೊಳ್ಳುವಿ. ಆತನ ಸತ್ಯತೆಯೇ ನಿನಗೆ ಖೇಡ್ಯವೂ ಗುರಾಣಿಯೂ ಆಗಿದೆ.**

✱ *ಅಂಜ ಕಾರಣವಿಲ್ಲ*

**ಇರುಳಲ್ಲಿ ಭಯಹುಟ್ಟಿಸುವ ಯಾವದಕ್ಕೂ ಹಗಲಲ್ಲಿ ಹಾರಿಬರುವ ಬಾಣಕ್ಕೂ ಕತ್ತಲೆಯಲ್ಲಿ ಸಂಚರಿಸುವ ವಿಪತ್ತಿಗೂ ಹಾನಿಕರವಾದ ಮಧ್ಯಾಹ್ನದ ಕೇಡಿಗೂ ಅಂಜ ಕಾರಣವಿಲ್ಲ. ನಿನ್ನ ಮಗ್ಗುಲಲ್ಲಿ ಸಾವಿರ ಜನರು, ನಿನ್ನ ಬಲಗಡೆಯಲ್ಲಿ ಹತ್ತು ಸಾವಿರ ಜನರು ಸತ್ತು ಬಿದ್ದರೂ ನಿನಗೇನೂ ತಟ್ಟದು.**

ರಾತ್ರಿಯ ಹೊತ್ತಿನ ಭಯಭೀತಿಗಳಿಂದ - ಅತ್ಯಾಚಾರಿಗಳು, ಕಳ್ಳರು, ಭಯೋತ್ಪಾದಕರು, ಭೂಕಂಪಗಳು, ಚಂಡಮಾರುತಗಳು, ಸುಂಟರಗಾಳಿಗಳಿಂದ ಆತನು ನಮ್ಮನ್ನು ರಕ್ಷಿಸುವನು.

* *ನಮ್ಮ ನಿವಾಸಸ್ಥಾನ*

**ವಚನ. 8-10 ನೀನು ಅದನ್ನು ಕಣ್ಣಾರೆ ಕಂಡು ದುಷ್ಟರಿಗೆ ಪ್ರತಿದಂಡನೆಯುಂಟೆಂಬದಕ್ಕೆ ಸಾಕ್ಷಿಯಾಗಿರುವಿಯಷ್ಟೆ. ಯೆಹೋವನೇ ನನ್ನ ಶರಣನು! ಪರಾತ್ಪರನನ್ನು ನಿವಾಸಸ್ಥಾನ ಮಾಡಿಕೊಂಡಿದ್ದೀಯಲ್ಲಾ. ಯಾವ ಕೇಡೂ ನಿನಗೆ ಸಂಭವಿಸದು; ಉಪದ್ರವವು ನಿನ್ನ ಗುಡಾರದ ಸಮೀಪಕ್ಕೂ ಬಾರದು.**

* *ದೇವದೂತರ ಸಂರಕ್ಷಣೆ*

**ವಚನ. 11-12 ನೀನು ಹೋಗುವಲ್ಲೆಲ್ಲಾ ನಿನ್ನನ್ನು ಕಾಯುವದಕ್ಕೆ ಆತನು ನಿನ್ನ ವಿಷಯವಾಗಿ ತನ್ನ ದೂತರಿಗೆ ಅಪ್ಪಣೆಕೊಡುವನು. ನಿನ್ನ ಕಾಲು ಕಲ್ಲಿಗೆ ತಗಲದಂತೆ ಅವರು ನಿನ್ನನ್ನು ಕೈಗಳಲ್ಲಿ ಎತ್ತಿಕೊಳ್ಳುವರು.**

ಅಸಾಧಾರಣವಾದ ಸಂರಕ್ಷಣೆಯನ್ನು ನಾವು ನಿರೀಕ್ಷಿಸಬಹುದು.

## ಮಹಿಮೆಯುಳ್ಳ ಸಭೆ

ನಾವು ಇಂದು ಸಭೆಯ ಕೂಟಗಳಲ್ಲಿ ನಡೆಯುತ್ತಿರುವ ಸಂಗತಿಗಳನ್ನು ಅಂದರೆ ಸಭೆಯ ಬಗ್ಗೆ ದೇವರು ಹೇಳಿರುವ ಅದ್ಭುತಕರವಾದ ಸಂಗತಿಗಳನ್ನು ನಾವು ಕಳೆದುಕೊಳ್ಳುತ್ತಿರುವುದನ್ನು ನೋಡುವುದರ ಮತ್ತು ಅನುಭವಿಸುವುದರ ಮೂಲಕ ತುಂಬಾ ನಿರುತ್ಸಾಹರಾಗಬಹುದು. ಆತನು ನಮ್ಮ ಸಂಪ್ರದಾಯಿಕ ಸಭೆಗಳ ಬಗ್ಗೆ ಮಾತನಾಡುತ್ತಿಲ್ಲ. ಆತನು ತನ್ನ ದೇಹದ ಬಗ್ಗೆ, ಆತನ ವಿಶ್ವಾಸಿಗಳ ಬಗ್ಗೆ ಮಾತನಾಡುತ್ತಿದ್ದನು. ನಾವೇ ಸಭೆಯಾಗಿದ್ದೇವೆ.

ಕ್ರಿಸ್ತನು ಸಭೆಯನ್ನು ಪ್ರೀತಿಸುತ್ತಾನೆ

ಎಫೆಸ **5:25-27** ಪುರುಷರೇ ಕ್ರಿಸ್ತನು ಸಭೆಯನ್ನು ಪ್ರೀತಿಸಿದ ಪ್ರಕಾರವೇ ನಿಮ್ಮ ನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ. ಆತನು ಅದನ್ನು ಪ್ರತಿಷ್ಠೆಪಡಿಸುವದಕ್ಕಾಗಿ ತನ್ನನ್ನು ಒಪ್ಪಿಸಿಕೊಟ್ಟನು. ಅದನ್ನು ಕಳಂಕ ಸುಕ್ಕು ಮುಂತಾದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧಮಾಡಿದನು.

ಸಂಕಟಗಳು ನಮಗಾಗಿ ಕಾರ್ಯಮಾಡುತ್ತವೆ

**2 ಕೊರಿಂಥ 4:17** ಹೇಗೆಂದರೆ ಕ್ಷಣಮಾತ್ರವಿರುವ ನಮ್ಮ ಹಗುರವಾದ ಸಂಕಟವು ಅತ್ಯಂತಾಧಿಕವಾಗಿ ಪ್ರತಿಫಲವನ್ನು ಉಂಟುಮಾಡಿ ನಮಗೆ ನಿರಂತರವಾಗಿರುವ ಗೌರವವಾದ ಪ್ರಭಾವವನ್ನು ದೊರಕಿಸುತ್ತದೆ.

ನಮ್ಮನ್ನು ಮಹಿಮೆಗೆ ಕೊಂಡೊಯ್ಯುವುದು

ರೋಮಾಪುರ **8:18,19** ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮಪದವಿಯನ್ನು ಆಲೋಚಿಸಿ ಈಗಿನ ಕಾಲದ ಕಷ್ಟಗಳು ಅಲ್ಪವೇ ಸರಿ ಎಂದು ಎಣಿಸುತ್ತೇನೆ. ದೇವಪುತ್ರರ ಮಹಿಮೆಯು ಯಾವಾಗ ಪ್ರತ್ಯಕ್ಷವಾದೀತೆಂದು ಜಗತ್ತು ಬಹು ಲವಲವಿಕೆಯಿಂದ ಎದುರು ನೋಡುತ್ತಿರುವದು.

ಕತ್ತಲೆಯೊಳಗಿಂದ ಬೆಳಕು ಹೊಳೆಯುತ್ತದೆ

**2 ಕೊರಿಂಥ 4:6** ಯಾಕಂದರೆ ಕತ್ತಲೆಯೊಳಗಿಂದ ಬೆಳಕು ಹೊಳೆಯಲಿ ಎಂದು ಹೇಳಿದ ದೇವರು ತಾನೇ ಯೇಸು ಕ್ರಿಸ್ತನ ಮುಖದಲ್ಲಿ ತೋರುವ ದೇವಪ್ರಭಾವ ಜ್ಞಾನವೆಂಬ ಪ್ರಕಾಶವು ಅನೇಕರಿಗೆ ಉಂಟಾಗುವದಕ್ಕಾಗಿ ನಮ್ಮ ಹೃದಯಗಳಲ್ಲಿ ಹೊಳೆದನು.

ಯೆಶಾಯ **58:8** ಇದನ್ನು ಆಚರಿಸುವಾಗ ನಿಮಗೆ ಬೆಳಕು ಉದಯದಂತೆ ಭೇದಿಸಿಕೊಂಡು ಬರುವದು, ನಿಮ್ಮ ಕ್ಷೇಮವು ಬೇಗನೆ ವಿಕಸಿಸುವದು; ನಿಮ್ಮ ಧರ್ಮವು ನಿಮಗೆ ಮುಂಬಲವಾಗಿ ಮುಂದರಿಯುವದು, ಯೆಹೋವನ ಮಹಿಮೆಯು ನಿಮಗೆ ಹಿಂಬಲವಾಗಿರುವದು.

ಎಫೆಸ **3:21** ಕ್ರಿಸ್ತ ಯೇಸುವಿನಲ್ಲಿಯೂ ತಲತಲಾಂತರಕ್ಕೂ ಯುಗಯುಗಾಂತರಕ್ಕೂ ಸ್ತೋತ್ರ.

ಉಜ್ಜೀವನವು ಬರುತ್ತಿದೆ

ಉಜ್ಜೀವನವು ಸಭೆಗೆ ಹಿಂದಿರುಗುತ್ತಿರುವ ದೇವರ ಮಹಿಮೆಯಾಗಿದೆ.

ಯೆಶಾಯ **60:7…** ನನ್ನ ಸುಂದರಾಲಯವನ್ನು ಚಂದಗೊಳಿಸುವೆನು.

ಹಗ್ಗಾಯ **2:7** ಆಗ ಸಮಸ್ತ ಜನಾಂಗಗಳ ಇಷ್ಟ ವಸ್ತುಗಳು ಬಂದು ಒದಗಲು ಈ ಆಲಯದ ವೈಭವದಿಂದ ತುಂಬಿಸುವೆನು. ಇದು ಸೇನಾಧೀಶ್ವರನಾದ ಯೆಹೋವನ ನುಡಿ.

ವಚನ. **9** ಈ ಆಲದಯದ ಮುಂದಿನ ವೈಭವವು ಹಿಂದಿನ ವೈಭವವಕ್ಕಿಂತ ವಿಶೇಷವಾಗಿರುವದು. ಇದು ಸೇನಾಧೀಶ್ವರನಾದ ಯೆಹೋವನ ನುಡಿ. ಈ ಸ್ಥಳದಲ್ಲಿ ಸಮಾಧಾನವನ್ನು ಅನುಗ್ರಹಿಸುವೆನು. ಇದು ಸೇನಾಧೀಶ್ವರನಾದ ಯೆಹೋವನ ನುಡಿ.

ಯೆಶಾಯ **60:1-4** ಏಳು, ಪ್ರಕಾಶಿಸು, ನಿನಗೆ ಬೆಳಕು ಬಂತು, ಯೆಹೋವನ ತೇಜಸ್ಸು ನಿನ್ನ ಮೇಲೆ ಉದಯಿಸಿದೆ. ಇಗೋ, ಕತ್ತಲು ಭೂಮಿಯನ್ನು ಆವರಿಸಿದೆ, ಕಾರ್ಗತ್ತಲು ಜನಾಂಗಗಳನ್ನು ಮುಚ್ಚಿದೆ; ನಿನ್ನ ಮೇಲಾದರೋ ಯೆಹೋವನು ಉದಯಿಸುವನು, ಆತನ ತೇಜಸ್ಸು ನಿನ್ನಲ್ಲಿ ಕಾಣಿಸುವದು. ಜನಾಂಗಗಳು ನಿನ್ನ ಬೆಳಕಿಗೆ ನೆರೆಯುವವು, ಅರಸರು ನಿನ್ನಲ್ಲಿನ ಉದಯಪ್ರಕಾಶಕ್ಕೆ ಬರುವರು. ಕಣ್ಣೆತ್ತಿ ಸುತ್ತಲು ನೋಡು, ನಿನ್ನ ಮಕ್ಕಳೆಲ್ಲರೂ ಗುಂಪುಕೂಡಿ ನಿನ್ನ ಬಳಿಗೆ ಸೇರುತ್ತಿದ್ದಾರೆ; ಗಂಡುಮಕ್ಕಳು ದೂರದಿಂದ ಸಮೀಪಿಸುತ್ತಾರೆ, ಹೆಣ್ಣುಮಕ್ಕಳು ಕಂಕುಳಿನಲ್ಲಿ ಕುಳಿತು ಬರುತ್ತಾರೆ.

ಅನ್ಯಜನರ ಐಶ್ವರ್ಯವನ್ನು ತರುವುದು

ವಚನ **5** ನೀನು ನೋಡಿ ಕಳೆಗೊಳ್ಳುವಿ, ನಿನ್ನ ಹೃದಯವು ಅದರುತ್ತಾ ಉಬ್ಬುವದು; ಏಕೆಂದರೆ ಸಮುದ್ರ ವ್ಯಾಪಾರ ಸಮೃದ್ಧಿಯು ನಿನ್ನ ಕಡೆಗೆ ತಿರುಗುವದು, ಜನಾಂಗಗಳ ಐಶ್ವರ್ಯವು ನಿನಗೆ ದೊರೆಯುವದು.

ವಚನ **7** ನನ್ನ ಸುಂದರಾಲಯವನ್ನು ಚಂದಗೊಳಿಸುವೆನು.

ದೇವರ ಮಹಿಮೆಯು ಭೂಮಿಯನ್ನು ಆವರಿಸಿಕೊಂಡಾಗ

ದೇವರ ಮಹಿಮೆಯು ಭೂಮಿಯನ್ನು ಅವರಿಸಿಕೊಂಡಾಗ ಅದು ಎಂತಹ ಮಹಿಮೆಯುಳ್ಳ ದಿನವಾಗಿರುತ್ತದೆ! ನಾವು ಅಪಾರವಾದ ಮಹಿಮೆಯನ್ನು - ಎಂದೆಂದಿಗೂ ಹೆಚ್ಚಾಗುತ್ತಿರುವ ಮಹಿಮೆಯನ್ನು - ಭೂಮಿಯನ್ನೆಲ್ಲ ತುಂಬಿಕೊಳ್ಳುವ ಮಹಿಮೆಯನ್ನು ಅನುಭವಿಸುತ್ತೇವೆ! ಇದು ನಿಮಗಾಗಿ ಮತ್ತು ನನಗಾಗಿ ಸಂಭವಿಸಬೇಕೆಂದು ದೇವರು ಬಯಸುತ್ತಾನೆ. ನಾವು ನಮ್ಮ ಸ್ವಾಭಾವಿಕವಾದ ಮನೋಭಾವವನ್ನು ಅಸಾಧಾರಣವಾದ ಮನೋಭಾವವಾಗಿ ಬದಲಾಯಿಸಿಕೊಂಡಾಗ ಮತ್ತು ಆತನು ಹೇಳಿದಂಥದ್ದೆಲ್ಲವೂ ನಿಜವೆಂದು ನಂಬಲು ನಮ್ಮ ಆತ್ಮಗಳನ್ನು ಒಪ್ಪಿಸಿಕೊಡುವಾಗ, ನಾವು ಹೋಗುವಲ್ಲೆಲ್ಲಾ ಅದ್ಭುತಗಳು ನಡೆಯುವುದನ್ನು ನಾವು ಕಾಣುತ್ತೇವೆ.

ನಾವು ಈ ಕೆಳಗಿನವುಗಳನ್ನು ಹೊಂದಿಕೊಳ್ಳುತ್ತೇವೆ ...

**ಅಸಾಧಾರಣವಾದ ಆರೋಗ್ಯ ಮತ್ತು ಒದಗಿಸುವಿಕೆ**

3 ಯೋಹಾನ, 2 ನೇ ವಚನಕ್ಕೆ ಅನುಗುಣವಾಗಿ, ತನ್ನ ಜನರು ಅಭಿವೃದ್ಧಿಯಾಗುವುದು ಮತ್ತು ಆರೋಗ್ಯದಿಂದಿರುವುದು ದೇವರ ಚಿತ್ತವಾಗಿದೆ.

**ಪ್ರಿಯನೇ ನೀನು ಆತ್ಮವಿಷಯದಲ್ಲಿ ಅಭಿವೃದ್ಧಿ ಹೊಂದಿರುವ ಪ್ರಕಾರ ಎಲ್ಲಾ ವಿಷಯಗಳಲ್ಲಿಯೂ ಅಭಿವೃದ್ಧಿ ಹೊಂದಿ ಸುಕ್ಷೇಮವಾಗಿರಬೇಕೆಂದು ಪ್ರಾರ್ಥಿಸುತ್ತೇನೆ.**

**ಅಸಾಧಾರಣವಾದ ಒದಗಿಸುವಿಕೆ**

ಫಿಲಿಪ್ಪಿ 4:19 ಪ್ರಕಾರ ದೇವರು ನಮ್ಮ ಎಲ್ಲ ಅಗತ್ಯತೆಗಳನ್ನು ಒದಗಿಸಿ ಕೊಡುವನು ಎಂಬುದು ನಮಗೆ ತಿಳಿದಿದೆ.

**ನನ್ನ ದೇವರು ಕ್ರಿಸ್ತ ಯೇಸುವಿನ ಮೂಲಕ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ ನಿಮ್ಮ ಪ್ರತಿಯೊಂದು ಕೊರತೆಯನ್ನು ನೀಗಿಸುವನು.**

ಕೀರ್ತನೆಗಳು 105:37 ಮತ್ತು 39-41 ರ ಪ್ರಕಾರ ನಾವು ಬೆಳ್ಳಿ ಬಂಗಾರ, ಸಧೃಢವಾದ ದೇಹಗಳು ಮತ್ತು ಅಸಾಧಾರಣವಾದ ಆಹಾರ ಮತ್ತು ನೀರಿಗಾಗಿ ಆತನನ್ನು ನಂಬುತ್ತೇವೆ.

ಇಸ್ರಾಯೇಲ್ಯರನ್ನು ಬೆಳ್ಳಿಬಂಗಾರಗಳ ಸಹಿತವಾಗಿ ಹೊರಗೆ ಬರಮಾಡಿದನು; ಅವರ ಕುಲಗಳಲ್ಲಿ ಒಬ್ಬನಾದರೂ ಎಡವುವವನಿರಲಿಲ್ಲ.

ಅವರಿಗೆ (ಹಗಲಲ್ಲಿ) ನೆರಳಿಗೋಸ್ಕರ ಮೋಡವನ್ನೂ ಇರುಳಲ್ಲಿ ಬೆಳಕಿಗೋಸ್ಕರ ಬೆಂಕಿಯನ್ನೂ ಮೇಲೆ ಹರವಿದನು. ಅವರು ಬೇಡಿಕೊಳ್ಳಲು ಲಾವಕ್ಕಿಗಳನ್ನು ಬರಮಾಡಿದನು; ದಿವ್ಯಾಹಾರದಿಂದ ಅವರನ್ನು ತೃಪ್ತಿಗೊಳಿಸಿದನು. ಆತನು ಬಂಡೆಯನ್ನು ಸೀಳಲು ನೀರು ಚಿಮ್ಮಿ ಬಂದು ಅರಣ್ಯದಲ್ಲಿ ನದಿಯಾಗಿ ಹರಿಯಿತು.

**ಅಸಾಧಾರಣವಾದ ಸಂತೋಷ**

ಆತನ ಸನ್ನಿಧಿಯಲ್ಲಿ ನಾವು ಅಪಾರವಾದ ಸಂತೋಷವನ್ನು ಅನುಭವಿಸಬಹುದು.

**ಕೀರ್ತನೆಗಳು 105:43 ತನ್ನ ಪ್ರಜೆಯು ಉಲ್ಲಾಸದಿಂದಲೂ ತಾನು ಆರಿಸಿಕೊಂಡವು ಉತ್ಸಾಹಧ್ವನಿಯಿಂದಲೂ ಹೊರಗೆ ಬರುವಂತೆ ಮಾಡಿದನು.**

**ಕೀರ್ತನೆಗಳು 16:11... ನಿನ್ನ ಸಮ್ಮುಖದಲ್ಲಿ ಪರಿಪೂರ್ಣ ಸಂತೋಷವಿದೆ; ನಿನ್ನ ಬಲಗೈಯಲ್ಲಿ ಶಾಶ್ವತಭಾಗ್ಯವಿದೆ.**

**ಅಪೊಸ್ತಲರ ಕೃತ್ಯಗಳು 2:28 ಜೀವಮಾರ್ಗಗಳನ್ನು ನನಗೆ ತಿಳಿಯಪಡಿಸಿದ್ದೀ; ನಿನ್ನ ಸಮ್ಮುಖದಲ್ಲಿ ನನ್ನನ್ನು ಆನಂದಭರಿತನಾಗಮಾಡುವಿ.**

**ಆತನ ಮುಖವನ್ನು ಮತ್ತು ರಮ್ಯತೆಯನ್ನು ನೋಡು**

ಕರ್ತನ ಮುಖವನ್ನು ಮತ್ತು ರಮ್ಯತೆಯನ್ನು ನೋಡುವ ಸ್ಥಳಕ್ಕೆ ನಾವು ಬರಬಹುದು.

**ಕೀರ್ತನೆ 27:4 ನನ್ನ ಜೀವಮಾನದಲ್ಲೆಲ್ಲಾ ಯೆಹೋವನ ಮನೆಯಲ್ಲಿ ವಾಸಮಾಡುತ್ತಾ ಆತನ ಪ್ರಸನ್ನತೆಯನ್ನು ನೋಡುವದಕ್ಕೂ ಆತನ ಮಂದಿರದಲ್ಲಿ ಧ್ಯಾನಮಾಡುವದಕ್ಕೂ ನನಗೆ ಅಪ್ಪಣೆಯಾಗಬೇಕೆಂಬ ಒಂದೇ ವರವನ್ನು ಯೆಹೋವನಿಂದ ಕೇಳಿಕೊಂಡು ಅದನ್ನೇ ಎದುರು ನೋಡುತ್ತಿರುವೆನು.**

**ಕೀರ್ತನೆ 27:8 ನನ್ನ ಸಾನ್ನಿಧ್ಯಕ್ಕೆ ಬಾ ಎಂಬ ನಿನ್ನ ಮಾತಿಗೆ ನಾನು - ಯೆಹೋವನೇ, ನಿನ್ನ ಸಾನ್ನಿಧ್ಯಕ್ಕೆ ಬರಲೇ ಬರುವೆನು ಎಂದು ಉತ್ತರಕೊಟ್ಟೆನು.**

**ನೆಲೆಗೊಂಡಿರುವ ದೇವರ ಪ್ರಸನ್ನತೆಯನ್ನು ಅನುಭವಿಸುವುದು**

ನಮ್ಮ ಶತ್ರುಗಳ ಮುಂದೆಯು ನಾವು ನೆಲೆಗೊಂಡಿರುವ ಆತನ ಪ್ರಸನ್ನತೆಯನ್ನು ಅನುಭವಿಸಬಹುದು.

**ಕೀರ್ತನೆಗಳು 23:5 ವೈರಿಗಳ ಮುಂದೆಯೇ ನೀನು ನನಗೋಸ್ಕರ ಔತಣವನ್ನು ಸಿದ್ಧಪಡಿಸುತ್ತೀ; ನನ್ನ ತಲೆಗೆ ತೈಲವನ್ನು ಹಚ್ಚಿಸುತ್ತೀ. ನನ್ನ ಪಾತ್ರೆಯು ತುಂಬಿ ಹೊರಸೂಸುತ್ತದೆ.**

**ಆತನ ಸ್ವರವನ್ನು ಕೇಳುವುದು**

ನಾವು ಆತನ ಸ್ವರವನ್ನು ಕೇಳಬಹುದು.

**ಯೋಹಾನ 10:3,4 ಬಾಗಲು ಕಾಯುವವನು ಅವನಿಗೆ ಬಾಗಲನ್ನು ತೆರೆಯುತ್ತಾನೆ. ಕುರಿಗಳು ಅವನ ಸ್ವರಕ್ಕೆ ಕಿವಿಗೊಡುತ್ತವೆ. ಅವನು ಸ್ವಂತ ಕುರಿಗಳನ್ನು ಹೆಸರು ಹೇಳಿ ಕರೆದು ಹೊರಗೆ ಬಿಡುತ್ತನೆ. ಸ್ವಂತ ಕುರಿಗಳನ್ನೆಲ್ಲಾ ಹೊರಗೆ ಬಿಟ್ಟ ಮೇಲೆ ತಾನು ಅವುಗಳ ಮುಂದೆ ಹೋಗುತ್ತಾನೆ. ಕುರಿಗಳು ಅವನ ಸ್ವರವನ್ನು ತಿಳುಕೊಂಡು ಅವನ ಹಿಂದೆ ಹೋಗುತ್ತವೆ.**

**ಸಂರಕ್ಷಿಸುವ ನೆರಳಿನಡಿಯಲ್ಲಿ**

ನಾವು ಆತನ ಸಂರಕ್ಷಿಸುವ ನೆರಳಿನಡಿಯಲ್ಲಿರಬಹುದು.

**ಕೀರ್ತನೆ 105:39 ಅವರಿಗೆ (ಹಗಲಲ್ಲಿ) ನೆರಳಿಗೋಸ್ಕರ** ಮೋಡವನ್ನೂ ಇರುಳಲ್ಲಿ ಬೆಳಕಿಗೋಸ್ಕರ ಬೆಂಕಿಯನ್ನೂ ಮೇಲೆ ಹರವಿದನು.

**ಆತನ ಮಹಿಮೆಯ ಸುಖೋಷ್ಣತೆಯಲ್ಲಿ ಬೆಚ್ಚಗಿರುವುದು**

ಆತನು ನನ್ನ ಸಂರಕ್ಷಣೆಗಾಗಿ ತನ್ನ ಮಹಿಮೆಯ ಬೆಂಕಿಯನ್ನು ಕಳುಹಿಸುವನು.

**ಜೆಕರ್ಯ 2:5 ನಾನೇ ಅದರ ಸುತ್ತಮುತ್ತಲೂ ಅಗ್ನಿಪ್ರಾಕಾರವೂ ಅದರೊಳಗೆ ವೈಭವವೂ ಆಗಿರುವೆನು ಎಂಬುದು ಯೆಹೋವನ ನುಡಿ.**

**ಪ್ರಕಟನೆಯನ್ನು - ಪ್ರಕಾಶವನ್ನು ಮತ್ತು ಬೆಳಕನ್ನು ಹೊಂದಿಕೊಳ್ಳುವುದು**

ಆತನು ನಮಗೆ ಅಸಾಧಾರಣವಾದ ಬೆಳಕನ್ನು ಒದಗಿಸಿ ಕೊಡುವನು.

**2 ಕೊರಿಂಥ 4:6 ಯಾಕಂದರೆ ಕತ್ತಲೆಯೊಳಗಿಂದ ಬೆಳಕು ಹೊಳೆಯಲಿ ಎಂದು ಹೇಳಿದ ದೇವರು ತಾನೇ ಯೇಸು ಕ್ರಿಸ್ತನ ಮುಖದಲ್ಲಿ**

**ತೋರುವ ದೇವಪ್ರಭಾವ ಜ್ಞಾನವೆಂಬ ಪ್ರಕಾಶವು ಅನೇಕರಿಗೆ ಉಂಟಾಗುವದಕ್ಕಾಗಿ ನಮ್ಮ ಹೃದಯಗಳಲ್ಲಿ ಹೊಳೆದನು.**

ಮಾರ್ಗದರ್ಶನ ಮತ್ತು ನಿರ್ದೇಶನ

ಆತನು ನಮಗೆ ಮಾರ್ಗದರ್ಶನ ಮತ್ತು ನಿರ್ದೇಶನ ತೋರುತ್ತಾನೆ.

**ನೆಹೆಮೀಯ 9:19 ಕರುಣಾನಿಧಿಯಾದ ನೀನು ಅವರನ್ನು ಅರಣ್ಯದಲ್ಲಿ ಕೈಬಿಡಲಿಲ್ಲ, ಹಗಲಿನಲ್ಲಿ ಅವರಿಗೆ ದಾರಿತೋರಿಸುತ್ತಿದ್ದ ಮೇಘಸ್ತಂಭವೂ ರಾತ್ರಿ ವೇಳೆಯಲ್ಲಿ ಅವರು ನಡೆಯುತಕ್ಕ ದಾರಿಯಲ್ಲಿ ಬೆಳಕು ಕೊಡುತ್ತಿದ್ದ ಅಗ್ನಿಸ್ತಂಭವೂ ಅವರನ್ನು ಬಿಟ್ಟುಹೋಗಲಿಲ್ಲ.**

ಶತ್ರುಗಳಿಂದ ಸಂರಕ್ಷಣೆ

ನಮ್ಮ ಶತ್ರುಗಳಿಂದ ನಮ್ಮನ್ನು ಸಂರಕ್ಷಿಸಲು ಆತನು ತನ್ನ ದೂತರನ್ನು ಕಳುಹಿಸುವನು.

**ವಿಮೋಚನಕಾಂಡ 14:19,20 ಆಗ ಇಸ್ರಾಯೇಲ್ಯರು ದಂಡಿನ ಮುಂದೆ ಹೋಗುತ್ತಿದ್ದ ದೇವದೂತನು ತನ್ನ ಸ್ಥಳವನ್ನು ಬಿಟ್ಟು ಅವರ ಹಿಂದಕ್ಕೆ ಬಂದನು ಅವರ ಮುಂದಾಗಿದ್ದ ಮೇಘಸ್ತಂಭವು ಅಲ್ಲಿಂದ ಬಂದು ಅವರ ಹಿಂದೆ ನಿಂತುಕೊಂಡಿತು. ಆ ಮೇಘಸ್ತಂಭವು ಐಗುಪ್ತ್ಯರ ಪಾಳೆಯಕ್ಕೂ ಇಸ್ರಾಯೇಲ್ಯರ ಪಾಳೆಯಕ್ಕೂ ನಡುವೆ ಬಂದು ಐಗುಪ್ತ್ಯರಿಗೆ ಕತ್ತಲನ್ನೂ ಉಂಟುಮಾಡಿದರೂ ಇಸ್ರಾಯೇಲ್ಯರಿಗೋಸ್ಕರ ರಾತ್ರಿಯನ್ನು ಬೆಳಕು ಮಾಡಿತು. ಆ ರಾತ್ರಿಯೆಲ್ಲಾ ಒಬ್ಬರ ಹತ್ತಿರಕ್ಕೆ ಒಬ್ಬರು ಬರಲಿಲ್ಲ.**

**ಯೆಶಾಯ 58:8 ಇದನ್ನು ಆಚರಿಸುವಾಗ ನಿಮಗೆ ಬೆಳಕು ಉದಯದಂತೆ ಭೇದಿಸಿಕೊಂಡು ಬರುವದು, ನಿಮ್ಮ ಕ್ಷೇಮವು ಬೇಗನೆ ವಿಕಸಿಸುವದು; ನಿಮ್ಮ ಧರ್ಮವು ನಿಮಗೆ ಮುಂಬಲವಾಗಿ ಮುಂದರಿಯುವದು, ಯೆಹೋವನ ಮಹಿಮೆಯು ನಿಮಗೆ ಹಿಂಬಲವಾಗಿರುವದು.**

ನಮ್ಮ ದೇಶದ ಸಂರಕ್ಷಣೆ

ಆತನು ನಮ್ಮ ದೇಶವನ್ನು ಗುಣಪಡಿಸುವನು.

**2 ಪೂರ್ವಕಾಲವೃತ್ತಾಂತ 7:14 ನನ್ನವರೆಂದು ಹೆಸರುಗೊಂಡ ನನ್ನ ಪ್ರಜೆಗಳು ತಮ್ಮನ್ನು ತಗ್ಗಿಸಿಕೊಂಡು ತಮ್ಮ ಕೆಟ್ಟ ನಡತೆಯನ್ನು ಬಿಟ್ಟು**

ತಿರುಗಿಕೊಂಡು ನನ್ನನ್ನು ಪ್ರಾರ್ಥಿಸಿ ನನ್ನ ದರ್ಶನವನ್ನು ಬಯಸುವದಾದರೆ ನಾನು ಪರಲೋಕದಿಂದ ಲಾಲಿಸಿ ಅವರ ಪಾಪಗಳನ್ನು ಕ್ಷಮಿಸಿ ಅವರ ದೇಶದಲ್ಲಿ ಆರೋಗ್ಯವನ್ನು ದಯಪಾಲಿಸುವೆ.

ಬಲಪಡಿಸುವುದು

ಆತನು ನಮ್ಮ ಆಂತರ್ಯ ಮನುಷ್ಯನನ್ನು ಬಲಪಡಿಸುವನು.

ಎಫೆಸ **3:16** ನೀವು ದೇವರಾತ್ಮನ ಮೂಲಕ ಆಂತರ್ಯದಲ್ಲಿ ವಿಶೇಷಬಲ ಹೊಂದಿದವರಾಗುವ ಹಾಗೆಯೂ,

ಅಸಾಧಾರಣವಾದ ಮಹಿಮೆ

ದೇವರು ನಮ್ಮ ಮಹಿಮೆಯಾಗಿದ್ದಾನೆ!

ಕೀರ್ತನೆಗಳು **3:3** ಆದರೂ ಯೆಹೋವನೇ, ನೀನು ನನ್ನನ್ನು ಕಾಯುವ ಗುರಾಣಿ; ನೀನು ನನ್ನ ಗೌರವಕ್ಕೆ ಆಧಾರನೂ ನನ್ನ ತಲೆಯನ್ನು ಎತ್ತುವಂತೆ ಮಾಡುವವನೂ ಆಗಿದ್ದೀ.

ಯೆಶಾಯ **60:1** ಏಳು, ಪ್ರಕಾಶಿಸು, ನಿನಗೆ ಬೆಳಕು ಬಂತು, ಯೆಹೋವನ ತೇಜಸ್ಸು ನಿನ್ನ ಮೇಲೆ ಉದಯಿಸಿದೆ.

ವಚನ **5,6** ನೀನು ನೋಡಿ ಕಳೆಗೊಳ್ಳುವಿ, ನಿನ್ನ ಹೃದಯವು ಅದರುತ್ತಾ ಉಬ್ಬುವದು; ಏಕೆಂದರೆ ಸಮುದ್ರ ವ್ಯಾಪಾರ ಸಮೃದ್ಧಿಯು ನಿನ್ನ ಕಡೆಗೆ ತಿರುಗುವದು, ಜನಾಂಗಗಳ ಐಶ್ವರ್ಯವು ನಿನಗೆ ದೊರೆಯುವದು. ಉಷ್ಟ್ರ ಸಮೂಹವೂ ಮಿದ್ಯಾನಿನ ಮತ್ತು ಏಫದ ಪ್ರಾಯದ ಒಂಟೆಗಳೂ ನಿನ್ನಲ್ಲಿ ತುಂಬಿರುವವು; ಆ ಸಾರ್ಥವಾಹರೆಲ್ಲಾ ಕನಕವನ್ನೂ ಧೂಪವನ್ನೂ ತೆಗೆದುಕೊಂಡು ಶೆಬದಿಂದ ಬಂದು ಯೆಹೋವನ ಸ್ತುತ್ಯಕೃತ್ಯಗಳನ್ನು ಸಾರುವರು.

ದೇವರು ಹೀಗೆ ಹೇಳಿದ್ದಾನೆ

"ಇಗೋ ಒಂದು ವಾಣಿ!-
ಅರಣ್ಯದಲ್ಲಿ ಯೆಹೋವನ ದಾರಿಯನ್ನು ಸರಿಪಡಿಸಿರಿ,
ಅಡವಿಯಲ್ಲಿ ನಮ್ಮ ದೇವರಿಗೆ ರಾಜಮಾರ್ಗವನ್ನು ನೆಟ್ಟಗೆ ಮಾಡಿರಿ;
ಎಲ್ಲಾ ಹಳ್ಳಕೊಳ್ಳಗಳು ಮುಚ್ಚಲ್ಪಡುವವು,
ಎಲ್ಲಾ ಬೆಟ್ಟಗುಡ್ಡಗಳು ತಗ್ಗಿಸಲ್ಪಡುವವು, ಮಲೆನಾಡು ಬೈಲುಸೀಮೆಯಾಗುವದು.

**ಕೊರಕಲ ನೆಲವು ಸಮವಾಗುವದು.**

**ಯೆಹೋವನ ಮಹಿಮೆಯು ಗೋಚರವಾಗುವದು,**

**ಎಲ್ಲಾ ಮನುಷ್ಯರೂ ಒಟ್ಟಿಗೆ ಅದನ್ನು ಕಾಣುವರು,**

**ಯೆಹೋವನ ಬಾಯೇ ಇದನ್ನು ನುಡಿದಿದೆ ಎಂದು ಒಬ್ಬನು ಕೂಗುತ್ತಾನೆ.”**

ಯೆಶಾಯ 40:3-5

**ಪರಾಮರ್ಶೆಗಾಗಿರುವ ಪ್ರಶ್ನೆಗಳು**

1. ಪರಾತ್ಪರನ ಮರೆಹೊಕ್ಕುವ ಸ್ಥಳ ಯಾವುದು? ನಿಮ್ಮ ಉತ್ತರವನ್ನು ವಿವರಿಸಲು ಕನಿಷ್ಠ ಮೂರು ವಚನಗಳನ್ನು ಕೊಡಿರಿ.

2. ಆತನ ಪ್ರಸನ್ನತೆಯಲ್ಲಿ ಮುಳುಗಿರುವುದ್ದರಿಂದಾಗುವ ಪ್ರಯೋಜನಗಳೇನು?

**ತರಬೇತಿಯ ಸಂಪೂರ್ಣ ಸರಣಿಮಾಲೆ**

**ಸತ್ಯವೇದದ ತರಬೇತಿ ಕೇಂದ್ರಗಳಿಗೆ ~ ಸತ್ಯವೇದದ ಅಧ್ಯಯನ ಶಾಲೆಗಳಿಗೆ ~**
**~ ಭಾನುವಾರ ಶಾಲೆಗಳಿಗೆ ~ ಅಧ್ಯಯನ ಗುಂಪುಗಳಿಗೆ ~ ಮತ್ತು ವೈಯಕ್ತಿಕ ಅಧ್ಯಯನಕ್ಕೆ ಅತ್ಯುತ್ತಮವಾಗಿದೆ**

ಹೋಶೇಯನ ಪುಸ್ತಕದಲ್ಲಿ, ನನ್ನ ಜನರು ಜ್ಞಾನಹೀನರಾಗಿ ಹಾಳಾಗಿದ್ದಾರೆ (4:6) ಎಂದು ನಾವು ಓದಿದ್ದೇವೆ. ದೇವರು ನಮಗಾಗಿ ಒದಗಿಸಿರುವಂಥದ್ದನ್ನು ನಾವು ತಿಳಿದುಕೊಳ್ಳದ್ದರಿಂದ ನಾವು ಬಹಳಷ್ಟನ್ನು ಕಳೆದುಕೊಂಡಿದ್ದೇವೆ. ನಮಗೆ ತಿಳಿಯದ ವಿಷಯಗಳಲ್ಲಿ ನಮಗೆ ನಂಬಿಕೆಯಿಡಲು ಆಗುವುದಿಲ್ಲ! ನಾವು ದೇವರ ರಾಜ್ಯದಲ್ಲಿ ಆರೋಗ್ಯದಲ್ಲಿ ಮತ್ತು ಅಧಿಕಾರದಲ್ಲಿ ಬದುಕಲು ಆಗುವಂತೆ ಈ ತರಬೇತಿಯ ಸರಣಿಮಾಲೆಯನ್ನು ಅಭಿವೃದ್ಧಿಪಡಿಸಲಾಗಿದೆ!

ನಾವು ಶಕ್ತಿಯುತರಾದ, ಅದ್ಭುತ-ಕೆಲಸ ಮಾಡುವವರಾದ ವಿಶ್ವಾಸಿಗಳ ಸಭೆಯೆಂಬ ದೇಹವಾಗಿರಬೇಕು. ಈ ಶಕ್ತಿಯುತ, ಮೂಲಭೂತ, ಪ್ರಾಯೋಗಿಕವಾದ ಜೀವನವನ್ನು ಬದಲಾಯಿಸುವ ಸರಣಿಮಾಲೆಯ ಉದ್ದೇಶವೇನಂದರೆ - *ನಾವೆಲ್ಲರೂ ನಂಬಿಕೆಯಿಂದಲೂ ದೇವಕುಮಾರನ ವಿಷಯವಾದ ಜ್ಞಾನದಿಂದಲೂ ಉಂಟಾಗುವ ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವತನಕ, ದೇವಜನರನ್ನು ಯೋಗ್ಯಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ಸಭೆಯ ಸೇವೆಗೋಸ್ಕರವೂ ಕ್ರಿಸ್ತನ ದೇಹವು ಅಭಿವೃದ್ಧಿಯಾಗುವದಕ್ಕೋಸ್ಕವೂ ಆತನು ಇವರನ್ನು ಅನುಗ್ರಹಿಸಿದನು...* (ಎಫೆ. 4:12,13) ಪ್ರತಿಯೊಬ್ಬ ವಿಶ್ವಾಸಿಯು ಯೇಸುವಿನ ಕಾರ್ಯಗಳನ್ನು ಮಾಡುತ್ತಿದ್ದಾನೆ.

ಈ ವಿಷಯಗಳನ್ನು ಈ ಕ್ರಮದಲ್ಲಿ ಕಲಿಯಲು ನಾವು ಸಲಹೆ ನೀಡುತ್ತೇವೆ.

***ನೂತನ ಸೃಷ್ಟಿಯ ಸ್ವರೂಪ*** - ನೀವು ಕ್ರಿಸ್ತನಲ್ಲಿ ಯಾರೆಂದು ತಿಳಿದುಕೊಳ್ಳುವುದು

ನಾವು ಯಾರಾಗಿರಬೇಕೆಂದು ಸೃಷ್ಟಿಸಲ್ಪಟ್ಟಿದ್ದೇವೆ ಎಂಬುದನ್ನು ಕಂಡುಕೊಳ್ಳುವುದು! ಇದರ ಅರ್ಥವೇನಂದರೆ "ಹೊಸದಾಗಿ ಹುಟ್ಟುವುದು." ನೀತಿಯ ಕುರಿತಾದ ಪ್ರಕಟಣೆಯು ಕ್ರಿಸ್ತನ ಸಾರೂಪ್ಯಕ್ಕೆ ಅನುಗುಣರಾಗದಂತೆ ವಿಶ್ವಾಸಿಗಳನ್ನು ಸೋಲಿಸುವ ತಪ್ಪಿತಸ್ಥ ಮನೋಭಾವನೆ, ದಂಡನಾತೀರ್ಪು, ಕೀಳರಿಮೆ ಮತ್ತು ಅಸಾಮರ್ಥ್ಯದ ಆಲೋಚನೆಗಳಿಂದ ಬಿಡುಗಡೆ ಮಾಡುತ್ತದೆ.

***ವಿಶ್ವಾಸಿಗಳ ಅಧಿಕಾರ*** - ಸೋಲುವುದನ್ನು ನಿಲ್ಲಿಸುವುದು ಮತ್ತು ಜಯಿಸಲು ಪ್ರಾರಂಭಿಸುವುದು ಹೇಗೆ

"ಅವರು ದೊರೆತನ ಮಾಡಲಿ" ಎಂದು ಹೇಳಿದಾಗ ದೇವರು ಮಾನವಕುಲಕ್ಕಾಗಿರುವ ತನ್ನ ಶಾಶ್ವತ ಉದ್ದೇಶವನ್ನು ಪ್ರಕಟಪಡಿಸಿದನು. ನೀವು ಹೊಸ ಧೈರ್ಯದಲ್ಲಿ ನಡೆಯುವಿರಿ. ನಿಮ್ಮ ದೈನಂದಿನ ಜೀವನದಲ್ಲಿ ಮತ್ತು ಸೇವೆಯಲ್ಲಿ ಸೈತಾನನ ಮತ್ತು ದುರಾತ್ಮನ ಶಕ್ತಿಗಳ ಮೇಲೆ ನೀವು ಜಯ ಹೊಂದುವಿರಿ.

***ಅತಿಮಾನುಷ ಜೀವನ*** - ಪವಿತ್ರಾತ್ಮನ ವರಗಳ ಮೂಲಕ

ಪವಿತ್ರಾತ್ಮನೊಂದಿಗೆ ಹೊಸದಾದ, ನಿಕಟವಾದ ಸಂಬಂಧವನ್ನು ಬೆಸೆಯುವುದು. ಪವಿತ್ರಾತ್ಮನ ಒಂಬತ್ತು ವರಗಳಲ್ಲಿ ಹೇಗೆ ಕಾರ್ಯಮಾಡಬೇಕು ಎಂಬುದನ್ನು ಕಂಡುಕೊಳ್ಳಲು ನಿಮಗೆ ಸಹಾಯ ಮಾಡುತ್ತದೆ. ನೀವು ಅತಿಮಾನುಷವಾದ ಹೊಸ ಜೀವನ ನಡೆಸಲು ಪ್ರವೇಶಿಸುವಾಗ ಈ ವರಗಳನ್ನು ತವಕದಿಂದ ಬಯಸಿರಿ, ಪಡೆದುಕೊಳ್ಳಿರಿ ಮತ್ತು ಪ್ರಜ್ವಲಿಸುವಂತೆ ಮಾಡಿರಿ.

***ನಂಬಿಕೆ - ಅಸಾಧಾರಣವಾಗಿ ಜೀವಿಸುವುದು***

ನೀವು ನಂಬಿಕೆಯ ಮಂಡಲಗಳಿಗೆ ಹೇಗೆ ಹೋಗಬಹುದು ಎಂಬುದನ್ನು ಕಲಿತುಕೊಳ್ಳಿರಿ. ನೀವು ದೇವರಿಗಾಗಿ ಹೇಗೆ ವೀರಕೃತ್ಯಗಳನ್ನು ಮಾಡಬಹುದು. ವಿಶ್ವಾಸಿಗಳು ತಮ್ಮ ನಂಬಿಕೆಯನ್ನು ಹರಿಬಿಡಲು, ಅಸಾಧಾರಣವಾದ ಮಂಡಲಗಳಿಗೆ ಕಾಲಿಡಲು, ದೇವರ ಶ್ರೇಷ್ಠತೆಯನ್ನು ಪ್ರಪಂಚದಾದ್ಯಂತ ತೋರಿಸಲು ಇದು ಸಕಾಲವಾಗಿದೆ!

***ಗುಣಪಡಿಸುವಿಕೆಗೆ ದೇವರ ಒದಗಿಸುವಿಕೆ*** - ದೇವರ ಗುಣಪಡಿಸುವ ಶಕ್ತಿಯನ್ನು ಹೊಂದಿಕೊಳ್ಳುವುದು ಮತ್ತು ಸೇವೆಮಾಡುವುದು

ಪರಿಣಾಮಕಾರಿಯಾದ ರೀತಿಯಲ್ಲಿ ಗುಣಪಡಿಸುವಿಕೆಯನ್ನು ಹೊಂದಿಕೊಳ್ಳುವುದಕ್ಕೆ ಅಥವಾ ಸೇವೆಮಾಡುವುದಕ್ಕೆ ನಂಬಿಕೆಯನ್ನು ಬಿಡುಗಡೆಗೊಳಿಸಲು ವಾಕ್ಯದ ದೃಢವಾದ ಅಸ್ತಿವಾರವನ್ನು ಹಾಕುವುದು. ಇದು ಯೇಸುವಿನ ಮತ್ತು ಅಪೊಸ್ತಲರ ಸೇವೆಯನ್ನು ಇಂದಿನ ಗುಣಪಡಿಸುವಿಕೆಯ ಸೇವೆಗೆ ಮಾದರಿಯನ್ನಾಗಿ ಪ್ರಸ್ತುತಪಡಿಸುತ್ತದೆ.

***ಸ್ತುತಿ ಮತ್ತು ಆರಾಧನೆ*** - ದೇವರ ಆರಾಧಕರಾಗುವುದು

ಸ್ತುತಿ ಮತ್ತು ಆರಾಧನೆಯ ಕುರಿತಾಗಿರುವ ದೇವರ ಶಾಶ್ವತ ಉದ್ದೇಶವನ್ನು ಪ್ರಕಟಪಡಿಸುತ್ತದೆ. ರೋಮಾಂಚನಗೊಳಿಸುವ ಅಪಾರವಾದ ಸ್ತುತಿಯ ಕುರಿತಾಗಿರುವ ಸತ್ಯವೇದದ ಅಭಿವ್ಯಕ್ತಿಗಳಲ್ಲಿ ವಿಶ್ವಾಸಿಗಳು ಸಾಗುವಂತೆ ಅವರನ್ನು ಕೊಂಡೊಯ್ಯುತ್ತದೆ. ನಿಕಟವಾದ ಆರಾಧನೆಯಲ್ಲಿ ದೇವರ ಅಗಾಧವಾದ ಪ್ರಸನ್ನತೆಗೆ ಹೇಗೆ ಪ್ರವೇಶಿಸಬೇಕು ಎಂಬುದನ್ನು ಬೋಧಿಸುತ್ತದೆ.

***ಮಹಿಮೆ*** - ದೇವರ ಪ್ರಸನ್ನತೆ

ನಾವು ವಾಸಿಸುತ್ತಿರುವ ದಿನವು ಎಷ್ಟು ಅದ್ಭುತಕರವಾದ ದಿನವಾಗಿದೆ! ನಾವು ದೇವರ ಮಹಿಮೆಯನ್ನು ಅನುಭವಿಸಬಹುದು. ಆತನು ನಮ್ಮ ಸುತ್ತಲೂ ಪ್ರಕಟವಾಗುತ್ತಿದ್ದಾನೆ. ಈ ಮಹಿಮೆ ಎಂಥದ್ದು ಮತ್ತು ನೀವು ಅದನ್ನು ಹೇಗೆ ಅನುಭವಿಸಬಹುದು ಎಂಬುದನ್ನು ಕಲಿತುಕೊಳ್ಳುವಿರಿ.

***ಅದ್ಭುತಕರವಾದ ಸುವಾರ್ತಾಸೇವೆ*** – ಲೋಕಕ್ಕೆ ಸುವಾರ್ತೆಯನ್ನು ತಲುಪಿಸುವ ದೇವರ ಯೋಜನೆ

ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿರುವವರಂತೆ, ನಾವು ಸಹ  ನಮ್ಮ ಜೀವನದಲ್ಲಿ ಸೂಚಕಕಾರ್ಯಗಳು, ಮಹತ್ತುಗಳು ಮತ್ತು ಗುಣಪಡಿಸುವ ಅದ್ಭುತಗಳನ್ನು ಅನುಭವಿಸಬಹುದು. ಅದ್ಭುತಕರವಾದ ಸುವಾರ್ತಾಸೇವೆಯು ನಮ್ಮ ಮೂಲಕ ನಡೆಯುವಂತೆ ಅನುಮತಿಸುವ ಮೂಲಕ ನಾವು ಸಹ ಅಂತ್ಯಕಾಲದ ಕೊಯ್ಲಿನಲ್ಲಿ ಭಾಗಿಗಳಾಗಬಹುದು!

***ಪ್ರಾರ್ಥನೆ*** - ಸ್ವರ್ಗವನ್ನು ಭೂಮಿಗೆ ತರುವುದು

ಪರಲೋಕದಲ್ಲಿ ದೇವರ ಚಿತ್ತ ನೆರವೇರುವ ಪ್ರಕಾರ ಭೂಮಿಯಲ್ಲಿಯೂ ನೆರವೇರುವಂತೆ ನೀವು ಹೇಗೆ ಮಾಡಬಹುದು ಎಂಬುದನ್ನು ಕಂಡುಕೊಳ್ಳುವಿರಿ. ಮಧ್ಯಸ್ಥಿಕೆಯ ಪ್ರಾರ್ಥನೆ, ವಾಕ್ಯವನ್ನು ಹಿಡಿದು ಪ್ರಾರ್ಥಿಸುವುದರ, ನಂಬಿಕೆಯ ಮತ್ತು ಒಪ್ಪಂದದ ಪ್ರಾರ್ಥನೆಗಳನ್ನು ಮಾಡುವುದರ ಮೂಲಕ, ನಿಮ್ಮ ಜೀವನವನ್ನು ಮತ್ತು ಲೋಕವನ್ನು ಸಹ ನೀವು ಬದಲಾಯಿಸಬಹುದು.

***ಸಭೆಯ ವಿಜಯೋತ್ಸವ*** – ಅಪೊಸ್ತಲರ ಕೃತ್ಯಗಳ ಪುಸ್ತಕದಾದ್ಯಂತ

ಯೇಸು, "ನಾನು ನನ್ನ ಸಭೆಯನ್ನು ಕಟ್ಟುವೆನು ಪಾತಾಳಲೋಕದ ಬಲವು ಅದನ್ನು ಸೋಲಿಸಲಾರದು" ಎಂದು ಹೇಳಿದನು. ಈ ಅಧ್ಯಯನದಲ್ಲಿ, ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ಆದಿ ಸಭೆಯು ಹೇಗೆ ಕಾರ್ಯಪ್ರವೃತ್ತಿಯುಳ್ಳದ್ದು ಮತ್ತು ಇಂದಿನ ಆತನ ಸಭೆಗೆ ಸೂಚಕಕಾರ್ಯಗಳು ಮತ್ತು ಅದ್ಭುತಗಳು ಪುನಃಸ್ಥಾಪಿಸಲ್ಪಡುವುದಕ್ಕೆ ಹೇಗೆ ಮಾದರಿಯಾಗಿದೆ ಎಂಬುದನ್ನು ನೀವು ನೋಡುತ್ತೀರಿ.

***ಸೇವೆಯ ವರಗಳು*** - ಅಪೊಸ್ತಲರು, ಪ್ರವಾದಿಗಳು, ಸುವಾರ್ತಿಕರು, ಸಭಾಪಾಲಕರು, ಬೋಧಕರು

ಯೇಸು ಮನುಷ್ಯರಿಗೆ ದಾನಗಳನ್ನು/ವರಗಳನ್ನು ಕೊಟ್ಟನು. ದೇವರ ಜನರನ್ನು ಸೇವಾ ಕಾರ್ಯಗಳಿಗಾಗಿ ಸಿದ್ಧಪಡಿಸಲು ಸಭೆಯಲ್ಲಿ ಈ ವರಗಳು ಹೇಗೆ ಒಟ್ಟಾಗಿ ಕಾರ್ಯನಿರ್ವಹಿಸಬೇಕು ಎಂಬುದನ್ನು ಕಂಡುಕೊಳ್ಳುವಿರಿ. ನಿಮ್ಮ ಜೀವನದಲ್ಲಿರುವ ದೇವರ ಕರೆಯನ್ನು ಅರ್ಥಮಾಡಿಕೊಳ್ಳುವಿರಿ!

***ಜೀವನದ ಮಾದರಿಗಳು*** - ಹಳೆಯ ಒಡಂಬಡಿಕೆಯಿಂದ

ಈ ವಿಷಯಾಧಾರಿತ ಅಧ್ಯಯನದಲ್ಲಿ ದೇವರ ಅಮೂಲ್ಯವಾದ ಮೂಲಭೂತ ಸತ್ಯಗಳು ಜೀವಕಳೆ ಉಳ್ಳವುಗಳಾಗಿ ಬರುತ್ತದೆ. ಬರಲಿಕ್ಕಿರುವ ಮೆಸ್ಸೀಯನ ಕುರಿತಾದ ಪ್ರವಾದನೆಗಳು, ಹಳೆಯ ಒಡಂಬಡಿಕೆಯ ಹಬ್ಬಗಳು, ಯಜ್ಞಗಳು ಮತ್ತು ಅದ್ಭುತಗಳು ಇವೆಲ್ಲವೂ ದೇವರ ಶಾಶ್ವತ ಯೋಜನೆಯನ್ನು ಪ್ರಕಟಪಡಿಸುತ್ತವೆ.

**ಎ.ಎಲ್. ಮತ್ತು ಜಾಯ್ಸ್ ಗಿಲ್ ರವರ ಪುಸ್ತಕಗಳು**

ಆಧಿಪತ್ಯಕ್ಕೆ ನಿಯಾಮಕ ಮಾಡಲಾಗಿದೆ

ಇಗೋ! ಯೇಸುವಿನ ಹೆಸರಿನಲ್ಲಿ

ವಂಚನೆಯ ಮೇಲೆ ಜಯ!

**ಅಧ್ಯಯನದ ಮಾರ್ಗದರ್ಶಿ**

**ಮಹಿಮೆಯೊಳಕ್ಕೆ ಹೋಗಲು ಭೇದನ**

**ಅನ್ಯಾಯದಿಂದ ಮುಕ್ತರಾಗಿ**

**ಎಲ್ಲಾ ಕೈಪಿಡಿಗಳು, ಪುಸ್ತಕಗಳು ಮತ್ತು ಅಧ್ಯಯನ ಮಾರ್ಗದರ್ಶಿಗಳು**
**www.gillministries.com ನಲ್ಲಿ ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳುವುದಕ್ಕಾಗಿ ಲಭ್ಯವಿದೆ**